# ನವಮಾನವ ಮಾಸಿಕ

**ಅಕ್ಟೋಬರ್, ೨೦೧೧** **ಪುಟ:** ೧೬ **ಚಂದಾ:** ನೀವು ಕೊಟ್ಟಷ್ಟು

ಸಂಪಾದಕ: **ಡಿ.ಎಸ್.ನಾಗಭೂಷಣ**

ವಿಳಾಸ: **ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ– ೫೭೭ ೨೦೪**

**ದೂ: ೦೮೧೮೨–೨೪೮೫೭೪ ಸಂಚಾರಿ : ೯೪೪೯೨ ೪೨೨೮೪ ಈ ಮೇಲ್:** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು:

೨ಜಿ ಹಗರಣದ ತನಿಖೆ ಮುಂದುವರೆದಂತೆ ಅದು ಪ್ರಸಕ್ತ ಸರ್ಕಾರದ ಹಿರಿಯ ತಲೆಗಳನ್ನೆಲ್ಲ ಸುತ್ತುವರೆಯುತ್ತಿರುವಂತೆ ಕಾಣುತ್ತಿದೆ. ಈಗಾಗಲೇ ಸೆರೆಮನೆಯಲ್ಲಿರುವ ಮಾಜಿ ಟೆಲಿಕಾಂ ಮಂತ್ರಿ ಎ. ರಾಜಾ ಪ್ರಧಾನ ಮಂತ್ರಿ ಮತ್ತು ಈ ಹಿಂದಿನ ಹಣಕಾಸು ಮಂತ್ರಿ ಹಾಗೂ ಸದ್ಯದ ಗೃಹ ಮಂತ್ರಿ ಪಿ. ಚಿದಂಬರಂ ಅವರನ್ನೂ ಸಾಕ್ಷಿಗಳನ್ನಾಗಿ ನ್ಯಾಯಾಲಯದ ಕಟಕಟೆಗೆ ಕರೆಯಬೇಕೆಂದು ವಿಚಾರಣಾ ಸಂದರ್ಭದಲ್ಲಿ ಆಗ್ರಹಿಸಿದ್ದಾರೆ. ಈಗ ಅದಕ್ಕೆ ಪೂರಕವಾಗಿ, ಸದ್ಯದ ಹಣಕಾಸು ಮಂತ್ರಿ ಪ್ರಣವ್ ಮುಖರ್ಜಿ ಆಗ ಹಣಕಾಸು ಮಂತ್ರಿಯಾಗಿದ್ದ ಚಿದಂಬರಂ ೨ಜಿ ತರಂಗಾಂತರ ಮಾರಾಟ ದರಗಳ ವಿಷಯದಲ್ಲಿ ಸೂಕ್ತ ನಿರ್ಧಾರ ಕೈಗೊಂಡಂತಿಲ್ಲವೆಂದು ಸೂಚಿಸಿ ಪ್ರಧಾನ ಮಂತ್ರಿಯವರಿಗೆ ಬರದಿರುವ ಟಿಪ್ಪಣಿಯೊಂದು ಬಹಿರಂಗಗೊಂಡು ಅವರ ರಾಜೀನಾಮೆ ಅನಿವಾರ್ಯವೆಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಆ ಮೂಲಕ ಇಡೀ ಸರ್ಕಾರದ ನೈತಿಕ ಬುಡವೇ ಅಲ್ಲಾಡಿ ಹೋಗುವಂತಾಗಿದೆ.

ಹಾಗೆ ನೋಡಿದರೆ, ಇಡೀ ೨ಜಿ ಹಗರಣ ಹೊಸ ಕಾಲದ 'ಅಭಿವೃದ್ಧಿ'ಯ ಸ್ವರೂಪದ ಬಗ್ಗೆ ನಮಗೆ ಅನೇಕ ಹೊಳಹುಗಳನ್ನು ನೀಡಬಲ್ಲುದಾಗಿದೆ. ಸಂಬಂಧಪಟ್ಟ ಎಲ್ಲ ಸಚಿವರು, ಅಧಿಕಾರಿಗಳಿರಲಿ, ಈ ಹಗರಣದ ತನಿಖೆ ನಡೆಸುತ್ತಿರುವ ಪೋಲೀಸರು ಮತ್ತು ವಿಚಾರಣೆ ನಡೆಸುತ್ತಿರುವ ನ್ಯಾಯಾಧೀಶರುಗಳಿಗೂ ಈ 'ಅಭಿವೃದ್ಧಿ ಕಾರ್ಯಕ್ರಮ'; ತನ್ನ ತಾಂತ್ರಿಕ ಜಟಿಲತೆಗಳು ಮತ್ತು ಅದು ಸೃಷ್ಟಿಸಿರುವ ಆಡಳಿತದ ಚಕ್ರವ್ಯೂಹದಿಂದಾಗಿ ಸುಲಭವಾಗಿ, ಸರಳವಾಗಿ ಮತ್ತು ನೇರವಾಗಿ ನಿರ್ವಹಿಸಲಾಗದ ವಿದ್ಯಮಾನವಾಗಿಬಿಟ್ಟಿದೆ! ಹಾಗಾಗಿಯೇ ಈ ವ್ಯವಹಾರದಲ್ಲಿ ಸರ್ಕಾರಕ್ಕೆ ಲಕ್ಷ ಕೋಟಿ ರೂಪಾಯಿಗಳ ನಷ್ಟ ಉಂಟಾಗಿದೆ ಎಂದು ಮಹಾಲೇಖಪಾಲರ ವರದಿ ಹೇಳುತ್ತಿದ್ದರೂ, ತಮ್ಮ ಉಭಯ ವಾದ ಪ್ರಾವೀಣ್ಯದಿಂದಾಗಿ ಖ್ಯಾತ ವಕೀಲರೆನಿಸಿರುವ ಸಚಿವ ಕಪಿಲ್ ಸಿಬ್ಬಲ್ ಇದರಲ್ಲಿ ಒಂದು ಪೈಸೆಯೂ ನಷ್ಟವಾಗಿಲ್ಲ ಎಂದು ವಾದಿಸಬಲ್ಲ ಲೆಕ್ಕ ಹಾಕಿ ತೋರಿಸಲು ಸಾಧ್ಯವಾಗಿರುವುದು!

ಭ್ರಷ್ಟಾಚಾರವೆಂಬುದು ಆಡಳಿತ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹಿಂದೆಯೂ ಇತ್ತು. ಆದರೆ ಅದು ಸಮಾಜದಿಂದ 'ಕೆಟ್ಟದು' ಎಂದೇ ಪರಿಗಣಿತವಾಗಿ, ನೈತಿಕವಾಗಿ ಮತ್ತು ಕಾನೂನಾತ್ಮಕವಾಗಿ ಎದುರಿಸಲು ಸಾಧವೆನ್ನಿಸುವಷ್ಟರಮಟ್ಟಿಗೆ ಇತ್ತು. ಆದರೆ ಇಂದು ಅದು ಮನುಷ್ಯರನ್ನೇ ಇಡಿಯಾಗಿ ತಿಂದುಹಾಕುವಷ್ಟು ಮತ್ತು ಆ ಮೂಲಕ ಎಲ್ಲ ಕಾನೂನುಗಳ ಹಿಂದಿರುವ ವೈಯುಕ್ತಿಕ ಮತ್ತು ಸಾಮಾಜಿಕ ನೀತಿ ಸಂಹಿತೆಯನ್ನೇ ಬುಡಮೇಲು ಮಾಡುವಷ್ಟು ಪ್ರಮಾಣದಲ್ಲಿ ಬೆಳೆದು ನಿಂತಿದೆ. ಇದರ ಹಿಂದಿರುವುದು ನಮ್ಮ 'ಅಭಿವೃದ್ಧಿ' ಕಲ್ಪನೆಯ ಸ್ವರೂಪ ಮತ್ತು ಉದ್ದೇಶಗಳನ್ನೇ ಪಲ್ಲಟಗೊಳಿಸಿರುವ ಮುಕ್ತ ಮಾರುಕಟ್ಟೆ ನೀತಿ ಆಧಾರಿತವಾದ ಜಾಗತೀಕರಣ ನೀತಿ. ಈ ಹೊಸ 'ಅಭಿವೃದ್ಧಿ' ಇದ್ದಕ್ಕಿದ್ದಂತೆ ಈ ದೇಶದ ಸಾಮೂಹಿಕವಾಗಿ ಜನತೆಯ ಮತ್ತು ವೈಯುಕ್ತಿಕವಾಗಿ ಪ್ರತಿ ಭಾರತೀಯ ಪ್ರಜೆಯ 'ಸಾಂಸ್ಕೃತಿಕ ಅಸ್ಮಿತೆ'ಯ ಆಧಾರಗಳನ್ನೇ ಅಲುಗಾಡಿಸತೊಡಗುವಷ್ಟು ಅಪಾರ ಪ್ರಮಾಣದ ಹಣವನ್ನು ಈ ದೇಶದೊಳಕ್ಕೆ ಹರಿಸಿದೆ. ನವೋದಿತ ಭಾರತದ ಸಾಮಾನ್ಯ ಪ್ರಜೆಯ ನ್ಯಾಯಯುತ ಆಸೆ–ಆಕಾಂಕ್ಷೆಗಳು ಈಗ ಹೊಸ ಅಭಿವೃದ್ಧಿ ಮಾದರಿಯ ಪ್ರಭಾವದಲ್ಲಿ ನ್ಯಾಯಾನ್ಯಾಯದ ಪ್ರಶ್ನೆಯನ್ನೇ ಅಪ್ರಸ್ತುತಗೊಳಿಸಿ ಎಂದೂ ತೀರದ 'ದಾಹ'ವಾಗಿ ಮಾರ್ಪಟ್ಟು, ರಾಷ್ಟ್ರದ 'ಶೀಲ'ವನ್ನೇ ಪ್ರಶ್ನಾರ್ಹಗೊಳಿಸಿದೆ.

ಹಾಗಾಗಿಯೇ ಇಂದು ಭ್ರಷ್ಟಾಚಾರದ ವಿರುದ್ಧ ನೈತಿಕ ನೆಲೆಯ ಗೋಣಗಾಟಕ್ಕೆ ಮಾತ್ರ ಅವಕಾಶವಿದೆಯೇ ಹೊರತು, ಯಾರಾದರೂ ಈ ಸಂಬಂಧ ದೊಡ್ಡ ಧ್ವನಿ ಎತ್ತಿದೊಡನೆ ಅವರ ವಿಶ್ವಾಸಾರ್ಹತೆಯನ್ನೇ ಹಾಳು ಮಾಡುವ ಪ್ರಯತ್ನ ಮಾಡಲಾಗುವುದು ಅಥವಾ ಇತ್ತೀಚಿನ ಕೆಲವು ಮಾಹಿತಿ ಚಳುವಳಿಕಾರರ ಕೊಲೆಗಳು ಸಾಬೀತುಪಡಿಸುವಂತೆ ಅವರ ಹುಟ್ಟಡಗಿಸಲಾಗುವುದು. ಹಾಗೇ ಇಂದು ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಲು ಎಂತಹ ಪರಿಪೂರ್ಣ ಪರಿಶುದ್ಧತೆಯ ಮಾನದಂಡಗಳನ್ನು ಈ ಸಮಾಜ ನಿರ್ಮಾಣ ಮಾಡತೊಡಗಿದೆ ಎಂದರೆ ಮೊನ್ನೆ ನ್ಯಾ॥ ಶಿವರಾಜಪಾಟೀಲರು ತಮ್ಮ ಪತ್ನಿಯ ಒಂದು ಜುಜುಬಿ ನಿವೇಶನ ಖರೀದಿ ಸಂಬಂಧವಾಗಿ ಲೋಕಾಯುಕ್ತ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾದ ಸಂದರ್ಭವೇ ಸಾಕ್ಷಿ. ಕಾಸಿಗಾಗಿ ಸುದ್ದಿ ಮಾರಿಕೊಂಡ ಮಾಧ್ಯಮದವರೇ ಮತ್ತು ಅವರ ಹಿಂದಿನ ಉದ್ಯಮಪತಿಗಳೇ ಇಂದು ಭ್ರಷ್ಟಾಚಾರ ವಿರೋಧಿ ಆಂದೋಲನದ ಕಾರ್ಯಕರ್ತರೂ, ಪ್ರಾಯೋಜಕರೂ ಆಗಿಬಿಟ್ಟಿದ್ದಾರೆ!

ಇಂತಹ ಸಾಮಾಜಿಕ ವಿಕ್ಷಿಪ್ತತೆಯ ವಾತಾವರಣದಲ್ಲಿ ಸಹಜವಾಗಿಯೇ, ಕಳೆದ ಇಪ್ಪತ್ತು ವರ್ಷಗಳಲ್ಲಿ ದೇಶಾದ್ಯಂತ ನಡೆದಿರುವ ಲಕ್ಷಾಂತರ ಜನ ರೈತರ ಆತ್ಮಹತ್ಯೆಗೂ, ದಿನ ದಿನವೂ ಹೊಸ ರೂಪ ತಾಳುತ್ತಿರುವ ಹಿಂಸಾಚಾರಗಳಿಗೂ, ಹೊಸ ಹೊಸ ನೆಲೆಯ ಆತ್ಮಹತ್ಯೆಗಳಿಗೂ, ಪೋಲೀಸರ ಅಮಾನುಷವೆನ್ನಿಸುವ ಕಾರ್ಯಾಚರಣೆಯನ್ನೂ ಲೆಕ್ಕಿಸದೆ ಗ್ರಾಮೀಣ ಜನತೆ ದೇಶಾದ್ಯಂತ ನಡೆಸುತ್ತಿರುವ ಭೂಸ್ವಾಧೀನ ಮತ್ತು ಅಣುವಿದ್ಯುತ್ ವಿರೋಧಿ ಚಳುವಳಿಗಳಿಗೂ, ಹೊಸ ಅಭಿವೃದ್ಧಿ ರಾಜಕಾರಣಕ್ಕೂ ಏನಾದರೂ ಸಂಬಂಧವಿದೆಯೇ ಎಂಬುದರ ಪರಿಶೀಲನೆಯ ಗಂಭೀರ ಪ್ರಯತ್ನವೇ ಆರಂಭವಾಗಿಲ್ಲ. ಹಾಗಾಗಿಯೇ ನಾವು ಹಳೆಯ ಷೇರು ಹಗರಣ, ಬ್ಯಾಂಕ್ ಹಗರಣ, ಯು.ಟಿ,ಐ. ಹಗರಣಗಳನ್ನೆಲ್ಲ ಸುಲಭವಾಗಿ ಮರೆತು ಈಗ ೨ಜಿ ಹಗರಣ, ಕಾಮನ್‌ವೆಲ್ತ್ ಕ್ರೀಡಾ ಹಗರಣಗಳನ್ನು ಮಾಧ್ಯಮಗಳ ಮುಖೇನ ದಿನ ನಿತ್ಯದ ರೋಚಕ ಸುದ್ದಿಗಳಂತೆ ಚರ್ಚಿಸಿ ದಣಿದು ಹೊಸ ಹೊಸ ಮನರಂಜನಾ ಮತ್ತು ಹುಸಿ ಅಧ್ಯಾತ್ಮಿಕ ಕೇಂದ್ರಗಳತ್ತ ಧಾವಿಸುತ್ತಿದ್ದೇವೆಯೇ ಹೊರತು, ಇವೆಲ್ಲ ನಮ್ಮನ್ನು ಮನುಷ್ಯರಾಗಿ ಎಲ್ಲಿಗೆ ಕರೆದುತಂದು ನಿಲ್ಲಿಸಿವೆ ಎಂಬುದರ ಬಗೆಗಿನ ಆತ್ಮಶೋಧನೆಯನ್ನು ಆರಂಭಿಸಲಾಗಿಲ್ಲ.

ಇದು ಮೂಲತಃ, ಅದರ ಸ್ವಯಂಚಾಲನಾ ಗುಣದಿಂದಾಗಿಯೇ, ಹಿಂಸೆಯ ಅಭಿವೃದ್ಧಿ. ಇದು ಒಳಗಣ ಮತ್ತು ಹೊರಗಣ ಹಿಂಸೆ ಎರಡಕ್ಕೂ ಸಂಬಂಧಿಸಿದ್ದು ಎಂಬುದರ ಅರಿವೇ ನಮಗಾಗಿಲ್ಲ. ಹಾಗಾಗಿಯೇ ನಮ್ಮ ನವೋದಿತ ಮಧ್ಯಮ ವರ್ಗ ಮತ್ತು ಅದರ ಜೊತೆಗಾರನಾಗಿಬಿಟ್ಟಿರುವ ನಮ್ಮ ಬುದ್ಧಿಜೀವಿ ವರ್ಗ ಈ ಅಭಿವೃದ್ಧಿಯ ಎಲ್ಲ ಫಲಗಳನ್ನೂ ಮುಗುಮ್ಮಾಗಿ ಸ್ವೀಕರಿಸಿ ಸವಿಯುತ್ತಿರುವಾಗಲೇ ಅದರ ವಿರುದ್ಧ ಗುಟುರುಹಾಕುವ ಆತ್ಮದ್ರೋಹಿತನವನ್ನೂ ಪ್ರದರ್ಶಿಸುತ್ತಿದೆ. ಹಲವು ಬಾರಿ ಈ ಗುಟುರುಗಳು ಈ ಅಭಿವೃದ್ಧಿ ಫಲಗಳ ಅಜೀರ್ಣದಿಂದ ಉಂಟಾದ ಕಮರು ತೇಗುಗಳಂತೆಯೂ ಕೇಳಿಸುವುದುಂಟು!

**–ಸಂಪಾದಕ**

# ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ, ಸಾಗರ: ೨೦೧೦-೧೧ರ ವಾರ್ಷಿಕ ವರದಿ

**ಜಾ**ಗತೀಕರಣ ನಮ್ಮ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಉಂಟು ಮಾಡಿರುವ ಅನೇಕ ಅನಹುತಗಳ ಹಿನ್ನೆಲೆಯಲ್ಲಿ ಸಮಾಜವಾದವನ್ನು, ವಿಶೇಷವಾಗಿ ಡಾ. ರಾಮಮನೋಹರ ಲೋಹಿಯಾ ಅವರ ವಿಚಾರಗಳ ನಿಕಷದಲ್ಲಿ ಪುನರನ್ವೇಷಿಸುವ ಪ್ರಯತ್ನವಾಗಿ, ಲೋಹಿಯಾ ಅವರ ಜನ್ಮಶತಾಬ್ಧಿ ಸಂದರ್ಭದಲ್ಲಿ ನಾವು ಕೆಲವು ಗೆಳೆಯರು ಆರಂಭಿಸಿದ ಈ ಪ್ರತಿಷ್ಠಾನವು ೨೦೧೦–೧೧ರ ವರ್ಷದಲ್ಲಿ ತನ್ನ ಉದ್ದೇಶಕ್ಕೆ ಅನುಗುಣವಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಇದು ಸಾಧ್ಯವಾಗಿದ್ದು ಅನೇಕ ಆಸಕ್ತರ ಮತ್ತು ಸಂಘ–ಸಂಸ್ಥೆಗಳ ಉದಾರ ದೇಣಿಗೆಯಿಂದಾಗಿ ಎಂಬುದನ್ನು ಎಲ್ಲಕ್ಕಿಂತ ಮೊದಲಿಗೆ ದಾಖಲಿಸಬೇಕು ಮತ್ತು ಅವರೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಬೇಕು.

ಮ್ಯಾನೇಜಿಂಗ್ ಟ್ರಸ್ಟಿಯಾದ ಡಿ.ಎಸ್.ನಾಗಭೂಷಣ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದರೆ, ಇತರ ಟ್ರಸ್ಟೀಗಳಾದ ಪ್ರೊ. ಬಿ.ಪಿ. ವೀರೇಂದ್ರಕುಮಾರ್ ಉಪಾಧ್ಯಕ್ಷರು; ಎಂ. ರಾಘವೇಂದ್ರ ಕಾರ್ಯದರ್ಶಿ ಮತ್ತು ಎನ್.ಎಂ.ಕುಲಕರ್ಣಿ ಖಜಾಂಚಿ. ಸವಿತಾ ನಾಗಭೂಷಣ ಇನ್ನೋರ್ವ ಟ್ರಸ್ಟಿ.

ಕರ್ನಾಟಕದ ಸಮಾಜವಾದಿ ಚಳುವಳಿಯ ಉಗಮ ಸ್ಥಾನದಂತಿರುವ ಸಾಗರದಲ್ಲಿ ೨೦೧೦ರ ಮಾರ್ಚ್ ೨೮ರಂದು ಪ್ರತಿಷ್ಠಾನ ವಿಧ್ಯುಕ್ತವಾಗಿ ಉದ್ಘಾಟನೆಯಾಯಿತು. ಉದ್ಘಾಟಿಸಿದವರು, ಸಮಾಜವಾದಿ ಚಳುವಳಿಯ ಹಿನ್ನೆಲೆಯ ಹಿರಿಯ ಪತ್ರಕರ್ತ ರಾಜಶೇಖರ ಕೋಟಿ. ಅಧ್ಯಕ್ಷತೆ ಹಿರಿಯ ಸಮಾಜವಾದಿ ಪ. ಮಲ್ಲೇಶ್. ಹಿರಿಯ ಸಾಹಿತಿ ನಾ. ಡಿಸೋಜಾ ಈ ಸಂದರ್ಭದಲ್ಲಿ ಪ್ರತಿಷ್ಠಾನ ಪ್ರಕಟಿಸಿದ್ದ ಡಿ.ಎಸ್.ನಾಗಭೂಷಣ ಅವರ *ಲೋಹಿಯಾ ಕೈಪಿಡಿ, ಜೆಪಿ ಕೈಪಿಡಿ* ಮತ್ತು *ಲೋಹಿಯಾ ವಾಣಿ* ಎಂಬ ಮೂರು ಕಿರುಪುಸ್ತಕಗಳನ್ನು ಬಿಡುಗಡೆ ಮಾಡಿದರು. ಹಿರಿಯ ರೈತನಾಯಕಿ ಅನುಸೂಯಮ್ಮ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಪ್ರತಿಷ್ಠಾನದ ಉದ್ಘಾಟನೆಯ ಸಂದರ್ಭದಲ್ಲಿಯೇ ಎರಡು ದಿನಗಳ 'ಸಮಾಜವಾದಿ ಅಧ್ಯಯನ ಶಿಬಿರ'ವನ್ನು ಏರ್ಪಡಿಸಲಾಗಿತ್ತು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಸುಮಾರು ಎಂಭತ್ತು ಜನ, ವಿಶೇಷವಾಗಿ ವಿದ್ಯಾರ್ಥಿಗಳು ಶಿಬಿರಾರ್ಥಿಗಳಾಗಿ ಭಾಗವಹಿಸಿದ್ದರು. ಹಿರಿಯ ಸಮಾಜವಾದಿ ಮತ್ತು ರೈತ ಮುಖಂಡ ಕಡಿದಾಳು ಶಾಮಣ್ಣ ಸಮಾರೋಪ ಮಾಡಿದರು. ಕೆ.ಬಿ. ಸಿದ್ಧಯ್ಯ, ಡಾ. ರಾಜೇಂದ್ರ ಚೆನ್ನಿ, ಡಾ. ರಾಜಾರಾಂ ತೋಳ್ಪಾಡಿ, ಲೋಲಾಕ್ಷ ಮುಂತಾದವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.

೨೦೧೦ ಜೂನ್ ೧೩ರಂದು ಲೋಹಿಯಾ ಅವರು ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಲು ಕಾಗೋಡಿಗೆ ಬಂದ ೬೦ನೇ ವರ್ಷದ ಆಚರಣೆಯ ಸಂದರ್ಭದಲ್ಲಿ ಕಾಗೋಡಿನಲ್ಲಿ ಲೋಹಿಯಾ–೬೦ ಎಂಬ ಕಾರ್ಯಕ್ರಮವನ್ನು ಸಾಗರದಲ್ಲಿ ಆಯೋಜಿಸಲಾಗಿತ್ತು. ಕನ್ನಡದ ಹಿರಿಯ ಚಿಂತಕ ಡಾ. ಕೆ.ವಿ. ನಾರಾಯಣ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಹಿರಿಯ ಸಮಾಜವಾದಿ ರಾಜಕಾರಣಿ ಕಾಗೋಡು ತಿಮ್ಮಪ್ಪ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ 'ಜಾಗತೀಕರಣ ಮತ್ತು ನಮ್ಮ ಕೃಷಿ ವ್ಯವಸ್ಥೆ' ಕುರಿತ ವಿಚಾರಗೋಷ್ಠಿಯೊಂದನ್ನು ಆಯೋಜಿಸಲಾಗಿತ್ತು. ಬಿ.ಆರ್. ಜಯಂತ್, ಮಲ್ಲಿಕಾರ್ಜುನ ಹೊಸಪಾಳ್ಯ ವಿಚಾರ ಮಂಡಿಸಿದರು. ೨೦೧೦ರ ಅಕ್ಟೋಬರ್ ೨೩ ಮತ್ತು ೨೪ರಂದು ಪ್ರತಿಷ್ಠಾನವು ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಕಾರದೊಂದಿಗೆ ಕುವೆಂಪು ಜನ್ಮ ಶತಮಾನೋತ್ಸವ ಭವನದಲ್ಲಿ 'ಆಧುನಿಕತೆಯೊಂದಿಗೆ ಅನುಸಂಧಾನ' ಎಂಬ ವಿಷಯ ಕುರಿತು ಅಧ್ಯಯನ ಶಿಬಿರ ಏರ್ಪಡಿಸಿತ್ತು. ಇದನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ



'ಆಧುನಿಕತೆಯೊಂದಿಗೆ ಅನುಸಂಧಾನ' ಕುರಿತ ಅಧ್ಯಯನ ಶಿಬಿರವನ್ನು ಅಗ್ರಹಾರ ಕೃಷ್ಣಮೂರ್ತಿ ಉದ್ಘಾಟಿಸಿದರು

ಅಗ್ರಹಾರ ಕೃಷ್ಣಮೂರ್ತಿ ಉದ್ಘಾಟಿಸಿದರು. ತೀರ್ಥಹಳ್ಳಿ ಶಾಸಕ ಕಿಮ್ಮನೆ ರತ್ನಾಕರ್ ಅವರು ಅಧ್ಯಕ್ಷತೆ ವಹಿಸಿದ್ದರು. ಕುವೆಂಪು ಪ್ರತಿಷ್ಠಾನದ ಸಮ ಕಾರ್ಯದರ್ಶಿ ಕಡಿದಾಳು ಪ್ರಕಾಶ್ ಮುಖ್ಯ ಅತಿಥಿಯಾಗಿದ್ದರು. ಪ್ರೊ. ಎಚ್.ಗೋವಿಂದಯ್ಯ, ಡಾ. ರಾಜಾರಾಂ ತೋಳ್ಪಾಡಿ ಡಾ. ಎಂ.ವಿ. ವಸು, ಡಾ. ಚಂದ್ರಶೇಖರ ನಂಗಲಿ ಮುಂತಾದವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ೭೫ ಜನ ಶಿಬಿರಾರ್ಥೀಗಳಾಗಿ ಭಾಗವಹಿಸಿದ್ದರು. ಈ ಶಿಬಿರಕ್ಕೆ ಮೈಸೂರಿನ ಡಾ. ರಾಮನೋಹರ ಲೋಹಿಯಾ ಪ್ರತಿಷ್ಠಾನ ಆರ್ಥಿಕ ನೆರವು ಒದಗಿಸಿತ್ತು.

ಸಮಾಜವಾದಿ ವಿಚಾರಗಳಲ್ಲದೆ, ವಿದ್ಯಾರ್ಥಿ ಸಮುದಾಯದಲ್ಲಿ ಸಾಂಸ್ಕೃತಿಕ ಎಚ್ಚರ ಮೂಡಿಸುವ ಪ್ರಯತ್ನವಾಗಿ ಪ್ರತಿಷ್ಠಾನವು ೨೦೧೦ರ ನವೆಂಬರ್‌ನಿಂದ ಆರಂಭವಾದಂತೆ ಮಾರ್ಚ್‌ವರೆಗೆ 'ಕನ್ನಡ ನವೋದಯ' ಕುರಿತು ಕುವೆಂಪು, ಬೇಂದ್ರೆ, ಕಾರಂತ ಮತ್ತು ಮಾಸ್ತಿ ಇವರ ವ್ಯಕ್ತಿತ್ವ ಮತ್ತು ಸಾಹಿತ್ವವನ್ನು ಕುರಿತಂತೆ ಕ್ರಮವಾಗಿ ಚಳ್ಳಕೆರೆಯ ಸರ್ಕಾರಿ ಕಾಲೇಜು, ಸಾಗರದ ಇಂದಿರಾ ಗಾಂಧಿ ಮಹಿಳಾ ಕಾಲೇಜು, ಭದ್ರಾವತಿಯ ಸರ್. ಎಂ.ವಿ. ಕಲಾ ಮತ್ತು ವಾಣಿಜ್ಯ ಕಾಲೇಜು ಮತ್ತು ಶಿವಮೊಗ್ಗದ ಡಿ.ವಿ.ಎಸ್. ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯಾ ಕಾಲೇಜುಗಳ ಸಹಕಾರದೊಂದಿಗೆ ವಿಚಾರಗೋಷ್ಠಿಗಳನ್ನು ಏರ್ಪಡಿಸಲಾಗಿತ್ತು. ಈ ಗೋಷ್ಠಿಗಳಿಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೇಂದ್ರೆ ಪ್ರತಿಷ್ಠಾನ ಮತ್ತು ಮಾಸ್ತಿ ಪ್ರತಿಷ್ಠಾನಗಳು ಮತ್ತು ಸಾಗರ ನಗರ ಸಭೆ ಆರ್ಥಿಕ ನೆರವು ನೀಡಿದವು.

ಪ್ರತಿಷ್ಠಾನದ ೨೦೧೦=೧೧ನೇ ವರ್ಷದ ಅಧಿಕೃತ ಲೆಕ್ಕಪತ್ರ ಪರಿಶೋಧನೆ ಮುಗಿದಿದ್ದು, ಈ ಅವಧಿಯ ಆದಾಯ–ಖರ್ಚುಗಳ ಸ್ಥೂಲ ಚಿತ್ರ ಹೀಗಿದೆ. ಆಸಕ್ತ ದೇಣಿಗೆದಾರರು ಲೆಕ್ಕ ಪರಿಶೋಧನಾ ವರದಿಯನ್ನು ಪ್ರತಿಷ್ಠಾನದ ಕಾರ್ಯದರ್ಶಿಗೆ ಬರೆದು ಪಡೆದುಕೊಳ್ಳಬಹುದು.

| **ಆದಾಯ :** | | | **ಖರ್ಚು :** | | |
|---|---|---|---|---|---|
| ಮೂಲ ಬಂಡವಾಳ | ರೂ. | ೫೦೦೦/- | ಶಿಬಿರಗಳ ವಸತಿ, ಊಟೋಪಚಾರ, ಕಾಗದ ಪತ್ರ, ಅಂಚೆ | | |
| ವ್ಯಕ್ತಿಗಳಿಂದ ಮತ್ತು ಸಂಸ್ಥೆಗಳಿಂದ ದೇಣಿಗೆ: | ರೂ. | ೧೭೭೩೯೭/- | ಹಾಗೂ ಸಂಪನ್ಮೂಲ ವ್ಯಕ್ತಿಗಳಿಗೆ ಸಂಭಾವನೆ ಇತ್ಯಾದಿ: | ರೂ. | ೮೧೭೧೦/- |
| ಶಿಬಿರಾರ್ಥಿಗಳ ಪ್ರವೇಶ ಶುಲ್ಕದಿಂದ: | ರೂ. | ೧೧೪೦೦/- | ಪುಸ್ತಕ ಪ್ರಕಟಣೆ ಖರ್ಚು | ರೂ. | ೧೨೯೬೫/- |
| ಪುಸ್ತಕ ಮಾರಾಟದಿಂದ | ರೂ. | ೧೫೯೨೦/- | ಮನವಿ ಪತ್ರ ಹಾಗೂ ರಸೀತಿ ಪುಸ್ತಕಗಳ | | |
| ಬ್ಯಾಂಕ್ ಬಡ್ಡಿ | ರೂ. | ೩೩೭೯/- | ಮುದ್ರಣ ವೆಚ್ಚ | ರೂ | ೨೬೪೩/ |
| ಒಟ್ಟು (೩೧. ೩. ೨೦೧೧ಕ್ಕೆ) | ರೂ. | ೨೧೩೦೯೬/- | ಒಟ್ಟು (೩೧ ._೩ . ೨೦೧೧ಕ್ಕೆ) | ರೂ. | ೯೭೩೧೮/- |

ಉಳಿದ ಹಣದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಸಾಗರದ ಜಿಲ್ಲಾ ಸಹಕಾರಿ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿಯಾಗಿ ಇಡಲಾಗಿದೆ. ಮಿಕ್ಕ ಹಣವನ್ನು ಸಾಂದರ್ಭಿಕ ಖರ್ಚುಗಳಿಗಾಗಿ ಅದೇ ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಇಡಲಾಗಿದೆ. ಪ್ರತಿಷ್ಠಾನ ಸಮಾಜವಾದಿ ಅಧ್ಯಯನ ಕೇಂದ್ರವೊಂದನ್ನು ಸ್ಥಾಪಿಸುವ ಉದ್ದೇಶ ಹೊಂದಿದ್ದು, ಇದರ ನಿವೇಶನ, ಕಟ್ಟಡ ನಿಧಿಗಾಗಿ ಆಸಕ್ತರು ಉದಾರ ದೇಣಿಗೆ ನೀಡಬೇಕೆಂದು ಕೋರುತ್ತೇವೆ. ದೇಣಿಗೆಯನ್ನು ಅಧ್ಯಕ್ಷರು, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ, ಸಾಗರ ಈ ಹೆಸರಿಗೆ ಕ್ರಾಸ್ ಮಾಡಿದ ಚೆಕ್ ಅಥವಾ ಡಿ.ಡಿ. ಮೂಲಕ ಕಾರ್ಯದರ್ಶಿ, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ(ರಿ), ನಂ.೧೦, ಖಸಗಿ ಬಸ್ ನಿಲ್ದಾಣದ ಮಹಡಿ, ಸಾಗರ-೫೭೭ ४०१(ಶಿವಮೊಗ್ಗ ಜಿಲ್ಲೆ) ಇಲ್ಲಿಗೆ ಕಳಿಸಲು ಕೋರುತ್ತೇವೆ.

**–ಅಧ್ಯಕ್ಷರು, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ, ಸಾಗರ**

---

# ಪತ್ರಿಕೆಗೆ ಸ್ವಾಗತ ತೋರಣ...

**ಪ್ರಿ**ಯ ನಾಗಭೂಷಣ ಅವರೇ,

ನವ ಮಾನವ ಮಾಸಿಕ ತಲುಪಿದೆ. ನಿಮ್ಮ ಸಾಹಸಕ್ಕೆ ಮತ್ತು ಸಮಾಜವಾದಿ ಕಳಕಳಿಗೆ ಮೊದಲು ಅಭಿನಂದನೆ ಸಲ್ಲಬೇಕು. ಸಂಪಾದಕರ ಟಿಪ್ಪಣಿಗಳು'ದಲ್ಲಿ ಹೇಳಬೇಕಾದುದನ್ನೆಲ್ಲ ಹೇಳಿದ್ದೀರಿ. ಪ್ರಸ್ತುತ ಸಂದರ್ಭದಲ್ಲಿ ಭ್ರಷ್ಟಾಚಾರ ವಿರೋಧಿ ಆಂದೋಲನದ ಸ್ವರೂಪದ ಬಗ್ಗೆ ಮತ್ತು ಅದರ ಮುಂದಿನ ಹೆಜ್ಜೆಗಳ ಬಗ್ಗೆ ಪತ್ರಿಕೆ ಸೂಕ್ತ ಮಾರ್ಗದರ್ಶನ ನೀಡಬಲ್ಲುದೆಂದು ಆಶಿಸಿದ್ದೇನೆ. ಅಂತರ್ಜಾತಿ ವಿವಾಹಿತರ ಅನುಭವ ಕಥನದಿಂದ ಆಯ್ದ ಭಾಗಗಳು ಸ್ವಾರಸ್ಯಕರವಾಗಿವೆ. ಯೋಗೇಂದ್ರ ಯಾದವ್‌ರ ಭಾಷಣ ವಿಚಾರಪೂರ್ಣವಾಗಿದೆ. ಅಂತೂ 'ಮಾನವ'ದ ಪುನರುಜ್ಜೀವನ ಸೂಕ್ತವಾಗಿದೆ. ಪತ್ರಿಕೆಯ ಪೋಷಕ ನಿಧಿಗಾಗಿ ಈ ಪತ್ರದ ಜೊತೆ ಐದು ನೂರು ರೂಪಾಯಿಗಳ ಚೆಕ್ ಇಟ್ಟಿರುವೆ.

**–ಚೆನ್ನವೀರ ಕಣವಿ, ಧಾರವಾಡ**

ನವ ಮಾನವ ತಲುಪಿದೆ. ನಿಮ್ಮ ಸಂಪಾದಕೀಯ ಸರಳವಾಗಿದ್ದು, ಇಡೀ ಪತ್ರಿಕೆ ಓದಿಸಿಕೊಂಡು ಹೋಗಿದೆ. ಒಂದು ಅಲ್ಪಮೊತ್ತ ಕಳಿಸುತ್ತಿರುವೆ;ಪ್ರಕಟಣೆಗಾಗಿ ಬಳಸಿಕೊಳ್ಳಿ.

**–ಡಾ. ಮಹಾಬಲೇಶ್ವರ ರಾವ್, ಉಡುಪಿ**

ನವ ಮಾನವ ಚೆನ್ನಾಗಿದೆ. ಸಮಾಜವಾದಿ ತತ್ವವನ್ನು ಉಳಿಸುವ ಯತ್ನ ಮಾಡುತ್ತಿರುವಿರಿ. ಈ ಥರದ ಪ್ರಯತ್ನ ಸಾಹಿತ್ಯದಂತೆ ಬರೀ ಮನನಯೋಗ್ಯ ಸಾಮಗ್ರಿಯಾಗುವ ಬದಲು ರಾಜಕೀಯ ಶಕ್ತಿಯಾಗಿ ರೂಪುಗೊಳ್ಳಬೇಕು.

**–ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ**

ಜನರ ಆಶೋತ್ತರ, ಅಭಿರುಚಿಗೆ ತಕ್ಕಂತಹ ಪತ್ರಿಕೆಗಳು ನಮ್ಮಲ್ಲಿ ಸಾಕಷ್ಟಿವೆ. ಆದರೆ ಜನರನ್ನು ತಿದ್ದಿ ಬೆಳೆಸುವಂತಹ ಪತ್ರಿಕೆಗಳು ಬೇಕಾಗಿವೆ. ನವ ಮಾನವ ಈ ದಿಸೆಯಲ್ಲಿ ಒಳ್ಳೆಯ ಪ್ರಯತ್ನವೆಂಬುದು ಅದರ ಆಗಸ್ಟ್, ಸೆಪ್ಟಂಬರ್ ಸಂಚಿಕೆಗಳನ್ನು ನೋಡಿದರೆ ತಿಳಿಯುವಂತಿದೆ.

**–ಡಿ.ಶಿವನಾಗಪ್ಪ, ಬಸವಟ್ಟಿ (ಚಾಮರಾಜನಗರ ಜಿಲ್ಲೆ)**

ಡಾ. ಪುರುಷೋತ್ತಮ ಬಿಳಿಮಲೆಯವರು ಈ ಮೇಲ್ ಮಾಡಿದ ನವ ಮಾನವದ ಪಿ.ಡಿ.ಎಫ್ ರೂಪ ನೋಡಿ ಖುಷಿಯಾಗಿ ಈ ಮೂಲಕ ಐದು ನೂರು ರೂಪಾಯಿಗಳನ್ನು ಪ್ರೋತ್ಸಾಹ ಧನವಾಗಿ ಕಳಿಸುತ್ತಿರುವೆ.

**–ವೀರಣ್ಣ ಕಮ್ಮಾರ, ಗುಲ್ಬರ್ಗ**

ಸೆಪ್ಟಂಬರ್ ಸಂಚಿಕೆ ನೋಡಿದೆ. ಅಂತಾರಾಷ್ಟ್ರೀಯ ವ್ಯವಹಾರಗಳ ಬಗ್ಗೆ ಒಂದು ಲೇಖನವಿದ್ದರೆ ಚೆನ್ನ.

**–ಮಂಗ್ಳೂರ ವಿಜಯ, ಬೆಂಗಳೂರು**

ಸೆಪ್ಟಂಬರ್ ಸಂಚಿಕೆ ನೋಡಿದೆ. ಸದ್ಯ ಪ್ಯಾರಿಸ್ಸಿಗೆ ಹೋಗುತ್ತಿರುವೆ. ನಿಮ್ಮ ಪತ್ರಿಕೆಗೆ ಒಂದಿಷ್ಟು ಹಣ ಕೊಡಬೇಕು. ಸಾಧ್ಯವಾದರೆ, ಒಮ್ಮೆ ನೆನಪಿಸಿ.

**––ಡಾ.ಯು.ಆರ್ ಅನಂತಮೂರ್ತಿ, ಬೆಂಗಳೂರು.**

ಪತ್ರಿಕೆ ಚೆನ್ನಾಗಿದೆ. ಈ ಕೆಲಸ ಆಗಬೇಕಿತ್ತು. ಈಗ ಆಗಿದೆ, ಸಂತೋಷ. ಒಂದಿಷ್ಟು ಹಣ ಕಳಿಸುತ್ತಿರುವೆ.

**–ಶ್ರೀನಿವಾಸ ಕಾರ್ಕಳ, ಮಂಗಳೂರು**

## ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದಿಂದ ಕುಪ್ಪಳ್ಳಿಯಲ್ಲಿ ಅಧ್ಯಯನ ಶಿಬಿರ

**ಸಾ**ಗರದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠನವು ಪ್ರತಿ ವರ್ಷದಂತೆ ಈ ವರ್ಷವೂ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಕಾರದೊಂದಿಗೆ ಕುಪ್ಪಳಿಯಲ್ಲಿನ ಕುವೆಂಪು ಜನ್ಮ ಶತಮಾನೋತ್ಸವ ಭವನದಲ್ಲಿ ಇದೇ ಅಕ್ಟೋಬರ್ ೨೨ ಹಾಗೂ ೨೩ರ ಶನಿವಾರ ಹಾಗೂ ಭಾನುವಾರಗಳಂದು 'ಹೊಸ ಸಮಾಜವಾದದ ಅನ್ವೇಷಣೆಯಲ್ಲಿ' ವಿಷಯ ಕುರಿತಂತೆ ಅಧ್ಯಯನ ಶಿಬಿರವನ್ನು ಏರ್ಪಡಿಸಿದೆ. ವಿಷಯ ಪರಿಣತರಿಂದ ಬುದ್ಧ, ಬಸವ, ಗಾಂಧಿ, ಮಾರ್ಕ್ಸ್ ಲೋಹಿಯಾ, ಅಂಬೇಡ್ಕರ್ ವಿಚಾರಗಳ ಅಂತರ್ಸಂಬಂಧ, ಅವುಗಳ ಸಮಕಾಲೀನ ಪ್ರಸ್ತುತತೆ ಹಾಗೂ ಅವುಗಳನ್ನು ಆಧರಿಸಿ ಧರ್ಮ, ಸೆಕ್ಯುಲರಿಸಂ, ಆಧುನಿಕತೆ, ಶೋಷಣೆ, ದುಡಿಮೆ, ಸಮಾನತೆ, ಗಣರಾಜ್ಯ, ಪ್ರಜಾಪ್ರಭುತ್ವ, ಹಿಂಸೆ-ಅಹಿಂಸೆ ಇತ್ಯಾದಿ ಪರಿಕಲ್ಪನೆಗಳ ಮರುವಿಮರ್ಶೆಯ ಮೂಲಕ ಹೊಸ ಸಮಾಜವಾದವೊಂದನ್ನು ರೂಪಿಸುವ ಸಾಧ್ಯಾಸಾಧ್ಯತೆಗಳ ಬಗ್ಗೆ ವಿಶೇಷ ಉಪನ್ಯಾಸ ಹಾಗೂ ಚರ್ಚೆಗಳಿರುತ್ತವೆ. ಸಂಜೆ ಚಲಚಿತ್ರ ಪ್ರದರ್ಶನವಿರುತ್ತದೆ. ಆಸಕ್ತರು ಈ ಕೆಳಗಿನ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ ಶಿಬಿರಾರ್ಥಿಗಳಾಗಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು. ಶಿಬಿರದ ಪ್ರವೇಶ ಶುಲ್ಕ; ತಲಾ ನೂರು ರೂಪಾಯಿಗಳು. ಶಿಬಿರಾರ್ಥಿಗಳಿಗೆ ಸಾಮೂಹಿಕ ವಸತಿ ಹಾಗೂ ಎರಡು ದಿನಗಳ ಊಟೋಪಚಾರಗಳ ವ್ಯವಸ್ಥೆ ಇರುತ್ತದೆ. ಎರಡೂ ದಿನಗಳ ಕಾಲ ಶಿಬಿರದಲ್ಲಿ ಪಾಲ್ಗೊಳ್ಳಲು ಸಾಧ್ಯವಿರುವವರು ಮಾತ್ರ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಪ್ರವೇಶ ೫೦ ಜನರಿಗೆ ಮಾತ್ರ ಸೀಮಿತವಿರುವುದರಿಂದ ಆಸಕ್ತರು ಕೂಡಲೇ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ದೂರವಾಣಿ ಸಂಖ್ಯೆಗಳು: **೯೪೪೮೨೩೪೮೬೩೮ (ಎಂ ರಾಘವೇಂದ್ರ, ಕಾರ್ಯದರ್ಶಿ)** ಹಾಗೂ **೯೭೩೧೯೨೫೭೩೧ (ಎನ್.ಎಂ.ಕುಲಕರ್ಣಿ, ಖಜಾಂಚಿ)**

# ಸಮಕಾಲೀನ ದರ್ಶನ್ ಪ್ರಕರಣ: ಸೋರುತಿಹುದು ಮನೆಯ ಮಾಳಿಗಿ...



ಇತ್ತೀಚೆಗೆ ನನ್ನ ಪರಿಚಯದ ವ್ಯಕ್ತಿಯೊಬ್ಬರ ವಿರುದ್ಧ ಸ್ತ್ರೀಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದಾರೆ ಎಂಬ ಆರೋಪವನ್ನು ಹೊರಿಸಲಾಯಿತು. (ಈ ವ್ಯಕ್ತಿ ಈ ಹಿಂದೆ ನನ್ನ ವಿರುದ್ಧ ಅಪಪ್ರಚಾರ ಮಾಡಿದ್ದವರೇ.) ಆಗ ನಾನು ಮತ್ತು ನನ್ನ ಸ್ನೇಹಿತೆಯರು ತೆಗೆದುಕೊಂಡ ನಿರ್ಧಾರವೆಂದರೆ, ಈ ಆರೋಪ ಸುಳ್ಳಾಗಿದ್ದು, ಅವಶ್ಯ ಬಿದ್ದರೆ ನಾವೆಲ್ಲಾ ಅವರ ಪರವಾಗಿ ಸಾಕ್ಷಿ ಹೇಳಬೇಕು ಎಂಬುದಾಗಿತ್ತು. ಎರಡು ಕಾರಣಗಳಿಗೆ ನಾವು ಅವರ ಪರ ನಿಲ್ಲಲೇಬೇಕಾಗಿತ್ತು:

೧. ಅದು ಸುಳ್ಳು ಎಂಬುದು ನಮಗೆ ಗೊತ್ತಿತ್ತು.

೨. ಇದರಿಂದಾಗಿ ನಿಜವಾಗಿಯೂ ಅನ್ಯಾಯಕ್ಕೆ ಒಳಗಾದ ಮಹಿಳೆಯೊಬ್ಬಳು ಈ ಕಾನೂನನ್ನು ಬಳಸಲು ತೊಂದರೆಯಾಗುತ್ತದೆ, ಯಾರೂ ಆಕೆಯನ್ನು ನಂಬುವುದಿಲ್ಲ ಎಂಬುದಕ್ಕಾಗಿ.

ಚಿತ್ರನಟ ದರ್ಶನ್ ತನ್ನ ಪತ್ನಿಯ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ ಸುದ್ದಿ ಮೊದಲು ನನಗೆ ತಿಳಿದದ್ದು ಪಿಯುಸಿ ಓದುತ್ತಿದ್ದ ಒಬ್ಬಳು ಹುಡುಗಿಯಿಂದ. ನಾನು ತಕ್ಷಣ ಅದನ್ನು ನಂಬಲಿಲ್ಲ. ಅದು ವರದಕ್ಷಿಣೆ ಕೇಸ್ ಅಂತೆ ಅಂತ ಅವಳು ಅಂದಳು. ಆಗಂತೂ ನಾನು ಅನುಮಾನಿಸಿದೆ. ಆಮೇಲೆ ನಾನು ಟಿ.ವಿ. ಮುಖಾಂತರ ವಿಷಯದ ವಿವರಗಳನ್ನು ತಿಳಿದುಕೊಂಡೆ. ವಿಜಯಲಕ್ಷ್ಮಿಯವರ ಮೇಲೆ ಹಲ್ಲೆಯಾಗಿದ್ದಂತು ನಿಜವಾಗಿತ್ತು.

ಈ ವಿಷಯದಲ್ಲಿ ಹಲವಾರು ರೀತಿಯ ಪ್ರತಿಕ್ರಿಯೆಗಳನ್ನು ನಾವೀಗಾಗಲೇ ನೋಡಿದ್ದೇವೆ. ನಮ್ಮ ಅನೇಕ ಸಿನಿಮಾಗಳಲ್ಲಿ ಒಂದು ದೃಶ್ಯವಿರುತ್ತದೆ. ಅದೇಂದರೆ, ಅದುವರೆಗೂ ಹೆಂಡತಿಗೆ ದಾಸನಾಗಿದ್ದ ಗಂಡನೊಬ್ಬ ಕೊನೆಯಲ್ಲಿ ಬದಲಾಗಿ ಹೆಂಡತಿಯ ಕೆನ್ನೆಗೆ ಹೊಡೆಯುತ್ತಾನೆ. ಆಗ ಹೆಂಡತಿ ಬದಲಾಗುತ್ತಾಳೆ ಮಾತ್ರವಲ್ಲ, ಆತ ಈ ಕೆಲಸವನ್ನು ಮೊದಲೇ ಮಾಡಬೇಕಾಗಿತ್ತು ಎಂದು ಪಶ್ಚಾತ್ತಾಪ ಪಡುತ್ತಾಳೆ. ನೋಡುವ ಪ್ರೇಕ್ಷಕರೂ ಇದರಿಂದ ಪುನೀತರಾಗುತ್ತಾರೆ. ಮನುಷ್ಯನ ಒಳಿತು ಕೆಡುಕುಗಳ ಕುರಿತು ಸೂಕ್ಷ್ಮವಾಗಿ ಯೋಚಿಸದೇ ಸುಲಭ ಪರಿಹಾರ ಕೊಡುವ ಈ ಮಾದರಿಗಳು ಗಂಡು ಹೆಣ್ಣನ್ನು ಹೇಗೆ ಆಳಬೇಕು ಎಂಬುದನ್ನು ತನ್ನದೇ ರೀತಿಯಲ್ಲಿ ಸ್ಥಾಪಿಸಿದ ಒಂದು ಕ್ರಮ ಇದು. ಇದನ್ನು ಗಂಡಸರೂ ಹೆಂಗಸರೂ ಒಪ್ಪಿಕೊಂಡು ಬಿಟ್ಟಿದ್ದಾರೆ. ಹೀಗಾಗಿಯೇ ದರ್ಶನ್ ತನ್ನ ಹೆಂಡತಿಯನ್ನು ಹೊಡೆದದ್ದು, ಹಿಂಸಿಸಿದ್ದು, ಬೆದರಿಸಿದ್ದು ನಮ್ಮ ಅನೇಕ ಗಂಡಸರು ಮತ್ತು ಹೆಂಗಸರಿಗೆ 'ಸಹಜ' ಅನಿಸಿದೆ.

ದರ್ಶನ್ ಮತ್ತು ಆತನ ಹೆಂಡತಿಯ ನಡುವಿನ ನಿಜ ಸಮಸ್ಯೆ ಏನು ಎಂಬುದು ಅವರಿಬ್ಬರಿಗೇ ಗೊತ್ತು. ಆದರೆ ಅದಕ್ಕೆ ಪರಿಹಾರ ದೈಹಿಕ ಆಕ್ರಮಣ ಅಲ್ಲ ಎಂಬುದು ದರ್ಶನ್‌ಗೆ ತಿಳಿದಿರಬೇಕಿತ್ತು. ಈ ತಿಳುವಳಿಕೆಗೆ ಪೂರಕವಾದ ಪರಿಸರ ನಮ್ಮಲ್ಲಿದೆಯೇ ಎಂಬುದರ ಕುರಿತ ಅನುಮಾನ ನನಗೆ ಮೂಡುತ್ತಿರುವುದು ಈ ಘಟನೆಗೆ ಬರುತ್ತಿರುವ ಪ್ರತಿಕ್ರಿಯೆಗಳಿಂದ. ಮಂಡ್ಯದ ಗಂಡು ಹೇಳಿದ್ದು ನೋಡಿ. ನಮ್ಮಲ್ಲಿ ಗಂಡ ಹೆಂಡತಿಗೆ, ಮಗ ಅಮ್ಮನಿಗೆ ಹೊಡೆಯುವುದು ಸಾಮಾನ್ಯವಂತೆ.... ಅದನ್ನು ದೊಡ್ಡ ರಾದ್ಧಾಂತ ಮಾಡಬಾರದಂತೆ! ಜೊತೆಗೆ ಸಂದರ್ಭದ ಸೂಕ್ಷ್ಮತೆಯನ್ನು ನಿರ್ಲಕ್ಷಿಸಿ ತಮ್ಮ ಪ್ರಸಾರ ಹೆಚ್ಚಳಕ್ಕಾಗಿ ಕೆಲವು ಪತ್ರಿಕೆಗಳು ನಡೆಸುತ್ತಿರುವ ಸಮೀಕ್ಷಾ ವರದಿಗಳು ಸಂದರ್ಭದ ಗಾಂಭೀರ್ಯವನ್ನೆ ಹಾಳುಮಾಡುತ್ತಿರುವುದು ಶೋಚನೀಯ. ಇಲ್ಲಿ ಹೆಂಡತಿಯ ಮೇಲಿನ ಅಥವಾ ವಿಸ್ತಾರವಾಗಿ ಹೆಣ್ಣಿನ ಮೇಲಿನ ಹಲ್ಲೆಗೆ ಸಾಮಾಜಿಕ ಒಪ್ಪಿಗೆಯ ಮುದ್ರೆ ಇರುವುದರಿಂದಲೇ ಇಂತಹ ಘಟನೆಗಳು ನಡೆಯುತ್ತಿವೆ. ಹಾಗೇ, ಮಾಧ್ಯಮಗಳೂ ತಮ್ಮ ಸಾಮಾಜಿಕ ಸೂಕ್ಷ್ಮತೆಗಳನ್ನು ಕಳೆದುಕೊಳ್ಳುತ್ತಿವೆ. ಬಹು ಸಲೀಸಾಗಿ ಹೆಣ್ಣಿನ ಮೇಲೆ–ಇಲ್ಲಿ ನಿಖಿತಾಳ ಮೇಲೆ–ನಿಷೇಧ ಹೇರುವ ಸಂಗತಿಗಳು ಜರಗುತ್ತಿವೆ.

ವಿಜಯಲಕ್ಷ್ಮಿ ಈ ಮೊದಲೇ ಸಂಧಾನದ ಪ್ರಯತ್ನ ಮಾಡಿದ್ದು ಆಕೆಯ ಈ ಹೇಳಿಕೆಯನ್ನು ಶಿವರಾಜ್‌ಕುಮಾರ್ ನಿರಾಕರಿಸಿಲ್ಲ ಎಂಬುದನ್ನು ಗಮನಿಸಬೇಕು. ಹೀಗಾಗಿ ಆ ನಂತರವೂ ದರ್ಶನ್ ಹಲ್ಲೆ ಮುಂದುವರಿಸಿರುವುದು ಅಪರಾಧವಾಗಿದ್ದು, ವಿಜಯಲಕ್ಷ್ಮಿ ಕಾನೂನು ಕ್ರಮಕ್ಕೆ ಮುಂದಾಗಿದ್ದು ಸರಿಯಾಗಿಯೇ ಇದೆ. ಆದರೆ ದರ್ಶನ್‌ರನ್ನು ಒಬ್ಬ ಮನುಷ್ಯನಂತೆ, ಅದಕ್ಕಿಂತ ಮುಖ್ಯವಾಗಿ ಒಬ್ಬ ಗೃಹಸ್ಥನಂತೆ ನೋಡದೆ, ಕೇವಲ ಬಂಡವಾಳ ಹೂಡಿಕೆಯ ಲಾಭಕೋರ ವೇದಿಕೆಯಾಗಿ ಮಾತ್ರ ನೋಡಿದ ನಿರ್ಮಾಪಕರು ವಿಜಯಲಕ್ಷ್ಮಿಯವರ ಮೇಲೆ ಒತ್ತಡ ತಂದು ಅವರಿಂದ ದೂರನ್ನು ತಿದ್ದಿಸುವ ಪ್ರಯತ್ನ ಮಾಡಿದಾರೆ. ಅಲ್ಲದೆ, ನೈತಿಕತೆಯ ಪರಮಾಧಿಕಾರ ಹೊಂದಿದವರಂತೆ ನಿಖಿತಾ ಮೇಲೆ ಕುಟುಂಬ ಒಡೆದ ಆರೋಪ ಹೊರಿಸಿ ಆಕೆಯ ಮೇಲೆ ನಿಷೇಧ ಹೇರಲು ಯತ್ನಿಸಿದ್ದರ ಹಿಂದೆ ಕೇವಲ ವಾಣಿಜ್ಯೋದ್ದೇಶಗಳೇ ಇರಲಾರವು. ಅದು ಇಂದಿನ ಸಮಾಜದ ಗಂಡು ಯಾಜಮಾನ್ಯದ ನಿರ್ಲಜ್ಜ ಪ್ರದರ್ಶನವೂ ಹೌದು; ಕನ್ನಡ ಚಿತ್ರರಂಗ ಈಗ ಎಂತಹವರ ಕೈಗೆ ಜಾರಿ ಹೋಗಿದೆ ಎಂಬುದರ ಸೂಚನೆಯೂ ಹೌದು. ಈ ಹಿಂದಿನ ದಿನಗಳಿಗೆ ಹೋಲಿಸಿದರೆ, ಬಹುಪಾಲು ಕನ್ನಡ ಚಿತ್ರಗಳು ಇಂದು ನೋಡಲನರ್ಹವಾಗಿವೆ ಎಂಬುದು ಏಕೆ ಎಂಬುದಕ್ಕೆ ಇಲ್ಲಿ ಉತ್ತರಗಳು ದೊರಕೀತು!

ಬಹುಶಃ ಜಯಮಾಲಾ, ತಾರಾ, ಉಮಾಶ್ರೀಯಂತಹವರು ಸ್ವಲ್ಪವಾದರೂ ಭಿನ್ನ ಸ್ವರ ಎತ್ತದಿದ್ದಲ್ಲಿ, ಅದಕ್ಕಿಂತ ಮುಖ್ಯವಾಗಿ ರಾಜ್ ಕುಮಾರ್ ಕುಟುಂಬ ರಾಜ್ ಪರಂಪರೆಗೆ ತಕ್ಕಂತೆ ಅಸಹಾಯಕ ನಿಖಿತಾ ಪರ ಮತ್ತು ಅ ಮೂಲಕ ಪರೋಕ್ಷವಾಗಿ ವಿಜಯಲಕ್ಷ್ಮಿ ಪರ ಧ್ವನಿ ಎತ್ತದಿದ್ದಲ್ಲಿ ಮತ್ತು ಇದೆಲ್ಲದಕ್ಕೆ ಬೆಂಬಲವಾಗಿ ನ್ಯಾಯಾಲಯ ಮಂಡ್ಯದ ಅನೇಕ 'ಗಂಡು'ಗಳ ಒತ್ತಡಕ್ಕೆ ಸಿಕ್ಕಿ ವಿಜಯಲಕ್ಷ್ಮಿ ದಾಖಲಿಸಿದ ಪರಿಷ್ಕೃತ ದೂರನ್ನು ಒಮ್ಮೆಗೇ ಮಾನ್ಯಮಾಡಲು ನಿರಾಕರಿಸದಿದ್ದಲ್ಲಿ, ಕನ್ನಡ ಚಿತ್ರರಂಗ, ಅದರ ಸಾಮಾನ್ಯ ಪ್ರೇಕ್ಷಕ ಸಮೂಹವೂ ಸೇರಿದಂತೆ ಪರಮ ಅನೈತಿಕತೆ ಮತ್ತು ದುಂಡಾವರ್ತಿಯ ಆಪಾದನೆಗೆ ಒಳಗಾಗಬೇಕಿರುತ್ತಿತ್ತು. ವಿಜಯಲಕ್ಷ್ಮಿಯವರ ನಡೆಯನ್ನು ಖಂಡಿಸುತ್ತಿರುವವರಲ್ಲಿ ದರ್ಶನ್ ಕುರಿತ ಹುಚ್ಚು ಅಭಿಮಾನ ಮಾತ್ರ ಸೇರಿಲ್ಲ; ಬದಲಿಗೆ ಕಾನೂನಿನ ಈ ಕೈಗಳು ಇಷ್ಟು ಆಳವಾಗಿದೆಯಲ್ಲಾ ಎಂಬ ಅರಿವಿನ ಭಯವೂ ಸೇರಿದೆ ಎಂಬುದನ್ನೂ ಇಲ್ಲಿ ಗಮನಿಸಬೇಕು.

ಹಾಗಾಗಿ, ಯಾರೇ ಆಗಿರಲಿ; ಕಾನೂನಿನ ದುರುಪಯೋಗ ಮಾಡಿಕೊಳ್ಳದೇ ಪ್ರತಿಭಟನೆಗೆ ಕಾನೂನಿನ ಮೊರೆ ಹೋದರೆ, ಅವರನ್ನು ಬೆಂಬಲಿಸುವಂತೆ ನಮ್ಮ ವ್ಯವಸ್ಥೆ ಮತ್ತು ಚಿಂತನೆ ಇರಬೇಕು. ಆದರೇನು? ಸೋರುತಿಹುದು ಮನೆಯ ಮಾಳಿಗಿ...

**–ಡಾ. ಸಬಿತಾ ಬನ್ನಾಡಿ**

## ನೆನಪು: ಇನ್ನಿಲ್ಲ ನಮ್ಮ ಶಿವತೀರ್ಥನ್...



ನಮ್ಮೆಲ್ಲರ ಗೆಳೆಯ ಕೆ.ನ. ಶಿವತೀರ್ಥನ್ ಇನ್ನಿಲ್ಲ ಎಂಬ ಸುದ್ದಿ ನಮ್ಮೆಲ್ಲರನ್ನೂ ಥಣ್ಣಗೆ ಬಂದು ತಾಕಿದೆ. ಹೀಗೆ ಥಣ್ಣಗೆ ತಾಕಲು ಕಾರಣ, ಅವರು ಕಳೆದ ಐದಾರು ವರ್ಷಗಳಿಂದ ಪಾರ್ಶ್ವವಾಯು ಪೀಡಿತರಾಗಿ ಮಾತು ಕಳೆದುಕೊಂಡು ಮೈಸೂರಿನಲ್ಲಿ ತಮ್ಮ ಪತ್ನಿ ಡಾ. ನಿರ್ಮಲಾ ಅವರ ಚಿಕಿತ್ಸಾಲಯದ ಮೂರನೇ ಮಹಡಿಯಲ್ಲಿ ಮಲಗಿದ್ದಲ್ಲೇ ಮಲಗಿ ನವೆದುಹೋಗಿದ್ದರು. ಭೇಟಿಯಾಗಲು ಬಂದ ಗೆಳೆಯರನ್ನು ಕಂಡು ಕಣ್ಣೀರು ಸುರಿಸುತ್ತಾ ಸ್ಲೇಟಿನ ಮೇಲೆ ಎಡಗೈಯಿಂದ ಕಷ್ಟಪಟ್ಟು ತಮ್ಮ ಮಾತು ಬರೆದು ತೋರಿಸುವಂತಾಗಿದ್ದ ಈ ಗೆಳೆಯ, ಕೊನೆಕೊನೆಗೆ ಯಾರನ್ನೂ ಗುರುತಿಸಲಾಗದ ಸ್ಥಿತಿ ತಲುಪಿ, ಇನ್ನು ಇದು ಈ ಲೋಕದ ಪದಾರ್ಥವಲ್ಲ ಎಂಬಂತಾಗಿದ್ದರು. ಅಷ್ಟು ದೀರ್ಘಕಾಲ ಆ ಸ್ಥಿತಿಯಲ್ಲಿದ್ದ ಅವರನ್ನು ಉಪಚರಿಸಿ ನೋಡಿಕೊಳ್ಳುವ ಸರ್ವ ವ್ಯವಸ್ಥೆಗಳನ್ನೂ ಮಾಡಿದ ಅವರ ಪತ್ನಿ ನಿರ್ಮಲಾರನ್ನು ಈ ಸಂದರ್ಭದಲ್ಲಿ ನೆನೆಯಬೇಕು.

ಸಮಾಜವಾದಿ ಗೆಳೆಯರು ಯಾವ ಕಾರಣಕ್ಕೆ ಎಲ್ಲಿಯೇ ನೆರೆದರೂ, ಅಲ್ಲಿ ಹೇಗೋ ಹಾಜರಾಗಿ, ಅತಿ ಗಂಭೀರ ಸಂದರ್ಭದಲ್ಲೂ ತಮ್ಮ ಮಾತಿನ ಪಲುಕುಗಳ ಮೂಲಕವೇ ನಗೆಯುಕ್ಕಿಸಿ ಎಲ್ಲರ ಗಮನ ಸೆಳೆಯುತ್ತಿದ್ದ ಶಿವತೀರ್ಥನ್, ಸ್ನೇಹಶೀಲತೆಗೆ ಇನ್ನೊಂದು ಹೆಸರಿನಂತಿದ್ದರು. ದೊಡ್ಡವರೆನಿಸಿಕೊಂಡವರ ಗುಂಪಿನ ಮಧ್ಯೆ–ಅವರು ಲಂಕೇಶ್ ಇರಲಿ, ತೇಜಸ್ವಿ ಇರಲಿ, ರಾಜಕಾರಣಿ ಸಿದ್ದರಾಮಯ್ಯ ಇರಲಿ–ಹೇಗೋ ನುಸುಳಿ ಅಲ್ಲಿ ತಮಾಷೆ ಮಾಡುತ್ತಲೇ ಮತ್ತು ತಮಾಷೆಗೊಳಗಾಗುತ್ತಲೇ ಇರುತ್ತಾ, ಆ ತಮಾಷೆಯ ಹಿಂದೆ ಅವರು ತಮಗಾಗಿ ಗಂಭೀರವಾದ ಏನನ್ನೋ ಹುಡುಕಿಕೊಳ್ಳುವ ತವಕದಲ್ಲಿರುವಂತಿದ್ದರು. ಮೈಸೂರಿನ ಗೆಳೆಯರಿಂದ ಸದಾ 'ಕವಿ'ಯೆಂದು ಸಂಬೋಧಿಸಲ್ಪಡುತ್ತಿದ್ದರೂ, ಅವರು ಒಂದೇ ಒಂದು ಒಳ್ಳೆಯ ಕವಿತೆಯೆಂಬುದನ್ನು ಬರೆದಿಲ್ಲ ಎಂಬುದು ಬೇರೆ ವಿಷಯ. ಹಾಗಾಗಿಯೇ ಏನೋ, ಅವರು ಬರೆದ ಒಂದೇ ಒಂದು ಸುಮಾರಾದ ಒಳ್ಳೆಯ ಕವಿತೆಯೆನ್ನಬಹುದಾದ 'ಗೆಂಡಗಯ್ಯ'ನನ್ನು ಅವರ ಸಾಹಿತ್ಯ ಗೆಳೆಯರು ಇನ್ನಿಲ್ಲದಂತೆ ಹಾಡಿ ಹೊಗಳಿ ಅದರ ಬಗ್ಗೆ ಒಂದು ವಿಶೇಷ ಸಂಪುಟವನ್ನೇ ಹೊರತಂದು, ಅವರ ಸ್ನೇಹದ ಋಣ ಸಂದಾಯ ಮಾಡಿದರೆಂದು ಕಾಣುತ್ತದೆ! ಅವರು ನನಗೆ ಸಿಕ್ಕಾಗಲೆಲ್ಲ ನಾನು, 'ಛೇ, ನಿಮ್ಮ ಜೀವಮಾನದಲ್ಲಿ ಒಂದು ಸುಮಾರಾದ ಒಳ್ಳೆಯ ಕವಿತೆ ಬರೆಯಲೂ ನೀವು ನಿಮ್ಮ ಜಾತಿಮೂಲಕ್ಕೇ ಹೋಗಬೇಕಾಯಿತಲ್ಲ!' ಎಂದು ಹಾಸ್ಯ ಮಾಡಿದರೆ, ಅವರು, 'ಅದು ನೀವೆಲ್ಲ ಕಲಿಸಿದ ಸಮಾಜವಾದದ ಫಲ ಅಲ್ಲವೇನ್ರಪ್ಪಾ!!' ಎಂದು ನನಗೇ ತಿರುಮಂತ್ರ ಹಾಕಿ ಮುಗಿಲು ಹರಿಯುವಂತೆ ನಗಾಡುತ್ತಿದ್ದರು!

ಮೊದಮೊದಲು ಕುವೆಂಪು ಪ್ರಭಾವದಲ್ಲಿ 'ಧ್ಯಾನ' ಮಾಡಿ ಸ್ಫೂರ್ತಿ ಪಡೆದು ಪಾರಮಾರ್ಥಿಕ ಕಾವ್ಯ ಬರೆಯುತ್ತಾ, ಆಲನಹಳ್ಳಿ ಕೃಷ್ಣನ ಕಾವ್ಯಗುರುವೂ ಆಗಿದ್ದ ಶಿವತೀರ್ಥನ್, ಕ್ರಮೇಣ ಕೃಷ್ಣನಿಂದಲೇ ಕಾವ್ಯ ಪಾಠ ಹೇಳಿಸಿಕೊಳ್ಳುವ ಸಂದರ್ಭ ಸೃಷ್ಟಿಯಾದ ಪರಿಣಾಮವಾಗಿ; ನವ್ಯರ ಪ್ರಭಾವದಲ್ಲಿ 'ತೀರ್ಥ'ದಿಂದ ಕಾವ್ಯ ಸ್ಫೂರ್ತಿ ಪಡೆದು ಲೌಕಿಕ ಕಾವ್ಯ ಬರೆಯಲಾರಂಭಿಸಿದರು. ಈ ರೂಪಾಂತರ ಕಥೆಯನ್ನು ಕೃಷ್ಣ–ಶಿವತೀರ್ಥನ್ ಅವರ ಸದಾ ಧೃತ್ ತೀನ್ ತಾಳ್‌ನಲ್ಲಿಯೇ ನಡೆಯುತ್ತಿದ್ದ ಜುಗಲ್ ಬಂದಿ ಗೋಷ್ಠಿಯಲ್ಲೇ ಕೂತು ಕೇಳಬೇಕಿತ್ತು!

ಕೃಷ್ಣ ಹೋದ ನಂತರ ಜೊತೆಗಾರನನ್ನು ಕಳೆದುಕೊಂಡಂತೆ ಶಿವತೀರ್ಥನ್, ಇನ್ನೊಬ್ಬ ಅಂತಹ ಜೊತೆಗಾರನಿಗಾಗಿ ಎಲ್ಲೆಲ್ಲೋ ಅಲೆದು ಏನೇನೋ ಆಗಿ, ಕೊನೆಗೆ ತನ್ನ ಹಳೆಯ ಮತ್ತು ಮೂಲ ಜೊತೆಗಾರನಲ್ಲಿಗೇ ಹೋಗಿಬಿಟ್ಟಿದ್ದಾರೆ. ಆದರೆ ಅವರ ಅಟ್ಟಹಾಸದ ನಗೆ ಸದಾ ನಮ್ಮ ಕಿವಿಯಲ್ಲಿ–ವಿಷಾದದೊಂದಿಗೇ ಅದರೂ–ಅನುರಣಿಸುತ್ತಿರುತ್ತದೆ...

**–ಡಿ.ಎಸ್.ನಾಗಭೂಷಣ**

## ಪ್ರವಾಸಿ(ಸವಿತಾ) ಕಂಡ ಇಂಡಿಯಾ–2

# ಸರಯೂ ನದಿ ತೀರದಲ್ಲಿ ರಾಮನ ನೆನೆಯುತ್ತಾ...

**ನಾ**ವು ಸರಯೂ ನದಿಯ ತೀರದಲ್ಲಿದ್ದೆವು. ಮುಸ್ಸಂಜೆ. ಅತ್ತ ಕತ್ತಲೂ ಅಲ್ಲ, ಇತ್ತ ಬೆಳಕೂ ಇಲ್ಲ. ಪ್ರಶಾಂತಳಾಗಿ ಸರಯೂ ಹರಿದಂತೆ ತೋರುತ್ತಿದ್ದಳು. ಗಂಗೆ, ತುಂಗೆ, ಕಾವೇರಿ ಇವರೆಲ್ಲರಿಗಿಂತ ಭಿನ್ನ ವ್ಯಕ್ತಿತ್ವದವಳಾಗಿ ಸರಯೂ ತೋರಿದಳು. ಅಚ್ಚರಿ ಎಂದರೆ, ಅವಳು ಹರಿಯುತ್ತಿರುವಂತೆ ಕಾಣಿಸುತ್ತಿರಲಿಲ್ಲ. ಅಸೀಮ ಶಾಂತಿಯ ಧ್ಯಾನಮಗ್ನ ಸರೋವರದಂತಿದ್ದಳು. ನಾವೆಲ್ಲ ಸರಯೂವಿನ ಬಳಿ ಸಾರಿ ಅವಳನ್ನು ಮುಟ್ಟಿದೆವು. 'ಇಲ್ಲಿ ರಾಮ ಇದ್ನೋ?' ಎಂದೊಬ್ಬರು ಪ್ರಶ್ನಿಸಿದರು. 'ಅರಮನೆ ಎಲ್ಲೈತೋ?' ಮತ್ತೊಬ್ಬರು ಪ್ರಶ್ನೆ ಹಾಕಿದರು. ನದಿಯ ಹತ್ತಿರವೇ ಪುಟ್ಟ ಗುಡಿ ಇತ್ತು. ರಾಮ ಸೀತೆ ವಿರಾಜಮಾನರಾಗಿದ್ದರು. ನಮ್ಮ ದಂಡನ್ನು ನೋಡಿ ಪೂಜಾರಿ ಲಗುಬಗೆಯಿಂದ ಧಾವಿಸಿ ಬಂದು ಆರತಿಗೆ ಅಣಿ ಮಾಡತೊಡಗಿದ. ಪರವಶರಾಗಿ ಕೈ ಮುಗಿದು ನಿಂತ ಮಂದಿಯನ್ನು ನೋಡಿ, 'ಬನ್ನಿ, ಬನ್ನಿ ರಾಮನ ದರುಶನ ಮಾಡಿ ಪುನೀತರಾಗಿ' ಎಂದು ಹಿಂದಿಯಲ್ಲಿ ಆಹ್ವಾನಿಸಿದ. ದೇಗುಲದ ಹತ್ತಿರವೇ ಮುಂದೆ ರಾಮಜನ್ಮಭೂಮಿಯಲ್ಲಿ ಕಟ್ಟಬಹುದಾದ ದೇಗುಲದ ಮಾದರಿ ಇತ್ತು. ಇದೀಗ ನಮ್ಮ ಮಾರ್ಗದರ್ಶಿ ಹಿಂದಿಯಲ್ಲಿ ರಾಮನ ಕಥೆ ಹೇಳಲು ಶುರು ಮಾಡಿದ. ನಮ್ಮ ಗುಂಪಿನಲ್ಲಿ ಶೇ. ೭೫ ಜನರಿಗೆ ಹಿಂದಿಯ ಗಂಧವಿರಲಿಲ್ಲ. ಆದರೂ ಭಕ್ತಿಯಿಂದ ಕೈಮುಗಿದು ನಿಂತು ರಾಮನ ಕಥೆಗೆ ಕಿವಿಗೊಟ್ಟರು. ಮರ್ಗದರ್ಶಿ ಹೇಗೆ ಕಥೆ ಶುರು ಮಾಡಿದನೆಂದರೆ, ತಾನೂ ರಾಮನ ಜೊತೆಗೇ ಹುಟ್ಟಿ ಬೆಳೆದವನಂತೆ, ರಾಮ ಈಗಿಲ್ಲವಾದರೂ ತಾನು ಮಾತ್ರ ಸಾಯದೆ ಬದುಕುಳಿದವನಂತೆ, ಈ ಕ್ಷಣದಲ್ಲಿ ರಾಮಾಯಣ ನಡೆದಿರುವಂತೆ ಕಥೆ ಹೇಳತೊಡಗಿದ. ನನ್ನ ಕಣ್ಣ ಮುಂದೆ ಸರಯೂವಿನ ಬದಲು, ತುಂಗೆ ತೇಲಿ ಬಂದು ನಾನು ಸೀದಾ ಶಿವಮೊಗ್ಗೆಯ ಜಯನಗರದ ಸೀತಾರಾಮ ಮಂದಿರದಲ್ಲಿ ಹರಿಕಥೆದಾಸರ ಮುಂದೆ ಕುಳಿತಂತೆ ಭಾಸವಾಗತೊಡಗಿತು.



ನನ್ನ ಮುಂದೆ ಹರಿಕಥೆ ದಾಸರು 'ಹಾ ಲಕ್ಷ್ಮಣಾ! ಹಾ ಸೀತಾ!!' ಎಂದು ಕರುಣಾಪೂರಿತ ಧ್ವನಿಯಲ್ಲಿ ರಾಮನ ಕಥೆಯನ್ನು ಉತ್ತುಂಗಕ್ಕೆ ಒಯ್ಯುತ್ತಾ ಇದ್ದರು. ಚಿಕ್ಕ ಹುಡುಗಿಯಾದ ನಾನು ಕಣ್ಣೀರಿಡುತ್ತಾ, ರಾಮನ ಕಥೆಯಲ್ಲಿ ಮುಳುಗಿ ಹೋಗಿದ್ದೆ. ರಾಮನಿಗೆ ಪಟ್ಟ ತಪ್ಪಿದ್ದಕ್ಕೆ ದುಃಖ, ರಾಮ ಕಾಡಿಗೆ ಹೋದದ್ದಕ್ಕೆ ದುಃಖ, ರಾಮ ಸೀತೆಯನ್ನು ಕಳೆದುಕೊಂಡದ್ದಕ್ಕೆ ದುಃಖ. ರಾಮ ಸೀತೆಯನ್ನು ಅಗ್ನಿ ಪರೀಕ್ಷೆಗೆ ಒಡ್ಡಿದ್ದಕ್ಕೆ ದುಃಖ, ರಾಮ ಮತ್ತೆ ಸೀತೆಯನ್ನು ಕಾಡಿಗೆ ಅಟ್ಟಿದ್ದಕ್ಕೆ ದುಃಖ, ಸೀತೆ ಭೂತಾಯಿ ಮಡಿಲು ಸೇರಿದ್ದಕ್ಕೆ ದುಃಖ. ಕೈಕೇಯಿಯ ಬಗ್ಗೆ ಕೋಪ, ಮಂಥರೆಯ ಬಗ್ಗೆ ತಿರಸ್ಕಾರ, ರಾವಣನ ಬಗ್ಗೆ ದ್ವೇಷ, ಅಗಸನ ಬಗ್ಗೆ ಆಕ್ರೋಶ, ಹನುಮಂತನ ಬಗ್ಗೆ ಪ್ರೀತಿ! ವಾಲ್ಮೀಕಿಯು ಹೇಳಿದಂತೆ ಅನ್ನುವುದಕ್ಕಿಂತ ಹರಿಕಥೆದಾಸರು ಕಟ್ಟಿ ಹೇಳಿದ ಕಥೆಯನ್ನು ಮೈದುಂಬಿ ಕೇಳಿದ್ದೆ ಎಂದರೆ ಸರಿಯಾಗುತ್ತದೆ. ಕಾರ್ಯಕಾರಣಗಳನ್ನು ಬಗೆದು ನೋಡುವ ಭಾಷೆ ಗೊತ್ತಿಲ್ಲದ ನಾನು ಕಥೆಯಲ್ಲಿ ಮಿಂದು ಹೋಗಿದ್ದೆ. ಮನೆಗೆ ಮರಳುವಾಗ ನನ್ನ ಮನಸ್ಸಿನಲ್ಲಿ ಚಿರವಾಗಿ ನಿಂತದ್ದು, ಮಾಯಾ ಜಿಂಕೆ, ಜಟಾಯು ಮತ್ತು ಲಂಕೆಗೆ ಬೆಂಕಿ ಇಟ್ಟು ಸಿಕ್ಕಿದ್ದನ್ನು ಸುಟ್ಟು ರಾವಣನ ಮುಂದೆ ಬಾಲ ಸುತ್ತಿ ಸುತ್ತಿ ಎತ್ತರಕ್ಕೆ ಏರಿ ಕುಳಿತು ಸವಾಲು ಹಾಕಿದ ಹನುಮಂತ! 'ನಮ್ಮೂರಿನ ದೇವರುಗಳೇ ಬೇರೆ ಥರ! ಇಲ್ಲಿ ಬರೇ ಬೊಂಬೆಗಳನ್ನು ಇಟ್ಟವ್ರೆ, ಅದ್ಯಾಕೋ!' ಎಂದು ಸಹಯಾತ್ರಿಯೊಬ್ಬ ಪ್ರಶ್ನೆ ಕೇಳಿ ಎಚ್ಚರಿಸಿದಾಗ ನಾನು ಮತ್ತೆ ಶಿವಮೊಗ್ಗೆಯ ರಾಮ ಮಂದಿರದಿಂದ ಅಯೋಧ್ಯೆಯ ಸರಯೂ ನದಿ ತಟದ ರಾಮನ ಗುಡಿಗೆ ಮರಳಿದ್ದೆ! ಅಂದು ಹರಿಕಥೆ ದಾಸರು ಕಟ್ಟಿಕೊಟ್ಟ ರಾಮ ಸೀತೆಯ ಚಿತ್ರವನ್ನು ನನ್ನ ಜೀವಿತಾವಧಿಯಲ್ಲಿ ಮನಸ್ಸಿನಿಂದ ಕದಲಿಸಲು ಸಾಧ್ಯವೇ ಇಲ್ಲವೆನಿಸಿತು.

ಪರವಶರಾಗಿ ಕೈಮುಗಿದು ನಿಂತೇ ಇದ್ದ ಮಂದಿಯನ್ನು ಉದ್ದೇಶಿಸಿ ಮಾರ್ಗದರ್ಶಿ, 'ಅಯೋಧ್ಯೆಯಲ್ಲಿ ನೂರಾರು ರಾಮ ಮಂದಿರಗಳಿವೆ. ಎಷ್ಟು

ಸಾಧ್ಯವೋ ಅಷ್ಟು ಇವೊತ್ತು ನೋಡಿ ಬನ್ನಿ. ನಾಳೆ ಬೆಳಿಗ್ಗೆ ಆರು ಘಂಟೆಗೆ ಎಲ್ಲರೂ ಸಿದ್ಧರಾಗಿ. ರಾಮಲಲ್ಲಾನನ್ನು ಅವನು ಹುಟ್ಟಿದ ಸ್ಥಳದಲ್ಲಿಯೇ ನೋಡುವಿರಂತೆ!' ಎಂದು ಹಿಂದಿಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ಅನುವಾದಿಸಿದ ಕೂಡಲೇ. 'ಅಯ್ಯೋ ಮೊದಲೇ ಹೇಳಬಾರದಿತ್ತಾ! ಇದೇ ಗುಡಿಯಲ್ಲಿ ಅವನು ಹುಟ್ಟಿದ ಎಂದು ಎಷ್ಟೊಂದು ಭಕ್ತಿಯಿಂದ ನಿಂತಿದ್ದೆವು!' ಎಂದು ನನ್ನ ಸಹ ಯಾತ್ರಿಕರು ಆಕ್ಷೇಪಿಸಿದರು. 'ಇಲೇ ಪಕ್ಕದಲ್ಲಿ ರಾಮಜನ್ಮಭೂಮಿ ಪ್ರತಿಷ್ಠಾನದ ಕಛೇರಿ ಇದೆ, ಸಾಧು ಮಹಾರಾಜ್ ಅವರನ್ನು ತಪ್ಪದೆ ಭೇಟಿ ಮಾಡಿ.' ಎಂದು ಮಾರ್ಗದರ್ಶಿ ಸ್ವಲ್ಪ ಒತ್ತಾಯಪೂರ್ವಕವಾಗಿಯೇ ಹೇಳಿದ. 'ಈಗಲೂ ಇಲ್ಲಿ ಮಹಾರಾಜಾ ಅವ್ನಾ!' ಎಂದೊಬ್ಬರು ಮುಗ್ಧ ಪ್ರಶ್ನೆ ಎಸೆದರು. 'ಸಾಧು ಮಹಾರಾಜ್ ಅಂದ್ರೆ ನಮ್ಮ ಮಠಗಳ ಸ್ವಾಮಿಗಳು ಇದ್ದಂಗೆ' ಎಂದು ನಾನು ವಿವರಿಸಿದೆ. ಎಲ್ಲರೂ ಅಲ್ಲಿಗೆ ತೆರಳಿ ಸಾಧು ಮಹಾರಾಜರ ಕೋಣೆಯಲ್ಲಿ ಸಾಲಾಗಿ ಕುಳಿತೆವು. ಸಾಧು ಮಹಾರಾಜರು ನಮ್ಮೆದುರಿಗೆ ಗಾದಿಯ ಮೇಲೆ ವಿರಾಜಮಾನರಾಗಿದ್ದರು. ಸಹಾಯಕ ಅವರ ಗುಣಗಾನ ಮಾಡಿ, 'ಕನಿಷ್ಠ ಐನೂರು ರೂಪಾಯಿ, ಅದಕ್ಕಿಂತ ಹೆಚ್ಚು ಎಷ್ಟು ಬೇಕಾದರೂ ದೇಣಿಗೆ ನೀಡಬಹುದು. ಮುಂದೆ ಒಂದು ದಿನ ದೇಗುಲ ನಿರ್ಮಾಣವಾದಾಗ ದೇಗುಲದ ಗೋಡೆಗೆ ಹೊಂದಿಸುವ ಒಂದೊಂದು ಕಲ್ಲಿನ ಮೇಲೂ ದೇಣಿಗೆ ನೀಡಿದವರ ಹೆಸರು ಕೆತ್ತಿಸಲಾಗುವುದು. ಈ ಪುಣ್ಯಕಾರ್ಯದಲ್ಲಿ ಭಾಗಿಯಾಗಿ' ಎಂದು ವಿನಂತಿಸಿದ. 'ಯಾರಿಗೂ ಒತ್ತಾಯವಿಲ್ಲ.' ಎಂದೂ ಸೇರಿಸಿದ. ನಾವು ಎಪ್ಪತ್ತು ಮಂದಿ ಇದ್ದೆವು. ಎಲ್ಲರೂ ಸಾಧು ಮಹಾರಾಜರಿಗೆ ನಮಸ್ಕರಿಸಿ ಪ್ರಸಾದ ಸ್ವೀಕರಿಸಿದೆವು. ಮೂವ್ವರು ಮಾತ್ರ ಕೊಡುಗೆ ನೀಡಿ ಹೆಸರು ಬರೆಸಿದರು. ನಮ್ಮನ್ನು ಬೀಳ್ಕೊಟ್ಟಾಗ ಸಾಧು ಮಹಾರಾಜರ ಸಹಾಯಕ ಅಚ್ಚರಿಯಿಂದ 'ಯಾವ ಊರಿನಿಂದ ಬಂದಿದ್ದೀರಿ!' ಎಂದು ವಿಚಾರಿಸಿದ!

ಬೆಳ್ಳಂಬೆಳಗ್ಗೆ ಐದು ಘಂಟೆಗೆ ಎದ್ದು, ಆರು ಘಂಟೆಗೆ ಸಿದ್ಧರಾಗಿ ಕಾಲ್ನಡಿಗೆಯಲ್ಲಿ ಅರ್ಧ ಕಿ.ಮೀ. ನಡೆದು ಚಕ್ರವ್ಯೂಹದೊಳಗೆ ಪ್ರವೇಶಿಸಿದಂತೆ ನಾವು ರಾಮ ಜನ್ಮಭೂಮಿಯನ್ನು ಪ್ರವೇಶಿಸಿದೆವು. ಅಲ್ಲಿಗೆ ಏನನ್ನೂ ಒಯ್ಯುವ ಹಾಗಿರಲಿಲ್ಲ. ಹೆಜ್ಜೆ ಹೆಜ್ಜೆಗೂ ಮೈಮುಟ್ಟಿ ಭದ್ರತಾ ಸಿಬ್ಬಂದಿ ತಪಾಸಣೆ ಮಾಡುತ್ತಿದ್ದುದರಿಂದ, ವಿಚಿತ್ರ ರೀತಿಯ ಮುಜುಗರ ಅನುಭವಿಸುತ್ತಾ, ಭಕ್ತಿಗಿಂತ ಭಯವೇ ಮೇಲುಗೈಯಾಗಿ; ರಾಮಜನ್ಮಭೂಮಿಗಿಂತ ರಾಮಯುದ್ಧಭೂಮಿಯತ್ತ ಸಾಗಿದವರಂತೆ ಬೋನಿನಲ್ಲಿ ಸಿಕ್ಕಿಹಾಕಿಕೊಂಡ ಪ್ರಾಣಿಗಳಂತೆ ಚಡಪಡಿಸುತ್ತಾ ರಾಮಲಲ್ಲಾನ ಬಳಿಗೆ ಹೋದೆವು. ರಾಮಲಲ್ಲಾ ಪುಟ್ಟ ಗುಡಾರದೊಳಗೆ ಏಕಾಂಗಿಯಾಗಿ ಕುಳಿತಿದ್ದ. ಬಾಬ್ರಿ ಮಸೀದಿಯ ಅವಶೇಷಗಳ ಮೇಲೆ ಓರ್ವ ಚಿಂತಾಕ್ರಾಂತ ನಿರಾಶ್ರಿತನಂತೆ, ಕುಳಿತ ರಾಮನನ್ನು ನೊಡಿ ಅಯ್ಯೋ ಎನಿಸಿತು. ಏನೆಲ್ಲ ರಾಜಕೀಯ ಮಾಡಿ ಅದರ ಫಲವನ್ನೂ ಅನುಭವಿಸಿ ರಾಮನನ್ನು ತ್ಯಜಿಸಿ




ಹೋದ ರಾಜಕೀಯ ಮಂದಿಯನ್ನು ನೆನೆದು ಮನಸ್ಸಿಗೆ ಪಿಚ್ಚೆನಿಸಿತು. ಇನ್ನೆಷ್ಟು ವರುಷಗಳ ಕಾಲ ರಾಮ ಈ ದುಃಸ್ಥಿಯಲ್ಲಿ ಇರಬೇಕು? ಅವನು ವನವಾಸದಲ್ಲಿದ್ದುದಕ್ಕಿಂತ ಹೆಚ್ಚು ಸಂಕಷ್ಟಕ್ಕೆ ಈಡಾದವನಂತೆ ನನಗೆ ಕಂಡನು. ನನ್ನ ದೇಶದ ಮುಸ್ಲಿಂ ಬಾಂಧವರು ರಾಜಕೀಯ ಮಂದಿಯ ಬಗ್ಗೆ ಅಲ್ಲದಿದ್ದರೂ, ರಾಮನ ಬಗ್ಗೆ ಪ್ರೀತಿ ವಿಶ್ವಾಸ, ಒಂದಿಷ್ಟು ಔದಾರ್ಯ ತೋರಬಹುದಿತ್ತಲ್ಲಾ! ಆ ಕಾಲದಲ್ಲಿ ಆ ರಾವಣ, ಈ ಕಾಲದಲ್ಲಿ ಈ ಯಾರೋ ಬಾಬರನಂತೆ! ಒಟ್ಟಿನಲ್ಲಿ ರಾಮನಿಗೆ ನೆಮ್ಮದಿಯಿಲ್ಲ ಎಂದು ಹೇಳಿಕೊಳ್ಳುತ್ತಾ, 'ದೇವರ ಕಥೆಯೇ ಹೀಗಾದರೆ, ಮನುಷ್ಯನ ಪಾಡೇನು!/ ಎಂದು ನೊಂದು ವಾಪಸು ನಮ್ಮ ಬಿಡಾರಕ್ಕೆ ಹೊರಟಾಗ ನಮ್ಮ ಮಾರ್ಗದರ್ಶಿ 'ಈಗ ಈ ಊರಿನಲ್ಲಿ ಒಬ್ಬ ಮುಸಲ್ಮಾನ ಕೂಡಾ ಇಲ್ಲ!' ಎಂದು ಜಂಭದಿಂದ ಹೇಳಿದ. 'ನಿನ್ನಿಂದ ಈ ವಿಷಯ ತಿಳಿದು ನನಗೆ ಸಂತೋಷವೇನೂ ಆಗುತ್ತಿಲ್ಲ! ಎಂದು ನಾನವನಿಗೆ ದೃಢವಾಗಿ ಹೇಳಿದೆ.

**–ಸವಿತಾ ನಾಗಭೂಷಣ**

---

## ನಮ್ಮ ಸಮಾಜವಾದಿಗಳು: ಎಂಭತ್ತು ತುಂಬಿದ ಕಾಗೋಡು ತಿಮ್ಮಪ್ಪ: ಒಂದು ಹಿನ್ನೋಟ



**ಸ**ಮಾಜವಾದಿ ಹಿನ್ನೆಲೆಯಿಂದ ರಾಜಕಾರಣಕ್ಕೆ ಪ್ರವೇಶಿಸಿದ ಕರ್ನಾಟಕದ ಅನೇಕ ರಾಜಕಾರಣಿಗಳ ಪೈಕಿ ಸಾಗರದ ಕಾಗೋಡು ತಿಮ್ಮಪ್ಪ ಪ್ರಮುಖರು. ರಾಜಕೀಯದಲ್ಲಿ ಹಲವು ರೀತಿಯ ಏಳುಬೀಳುಗಳನ್ನು ಕಂಡಿರುವ ಕಾಗೋಡರಿಗೆ ಈಗ ೮೦ ವರ್ಷ ತುಂಬಿದೆ. ಸಾರ್ವಜನಿಕವಾಗಿ ಹುಟ್ಟುಹಬ್ಬ ಆಚರಿಸಿಕೊಳ್ಳುವ, ಫ್ಲೆಕ್ಸ್‌ಗಳಲ್ಲಿ ಕಾಣಿಸಿಕೊಳ್ಳುವ ಪ್ರವೃತ್ತಿಯನ್ನು ತಾವು ವೈಯುಕ್ತಿಕವಾಗಿ ಇಷ್ಟ ಪಡುವುದಿಲ್ಲ ಎಂದು ಕಾಗೋಡು ಹೇಳುತ್ತಿದ್ದರೂ ಕಳೆದ ಐದಾರು ವರ್ಷಗಳಿಂದ ಇವೆಲ್ಲಾ ನಡೆಯುತ್ತಲೇ ಇದೆ. ಮೊನ್ನೆ ಅವರ ೮೦ನೇ ಹುಟ್ಟುಹಬ್ಬ ಆಚರಣೆ ಸಂದರ್ಭದಲ್ಲಿ ಹೋಮ ಹವನ ಕೂಡ ಏರ್ಪಾಟಾಗಿತ್ತು!

ಸಾಗರ ತಾಲ್ಲೂಕಿನ ಕಾಗೋಡು ಗ್ರಾಮದಲ್ಲಿ ೫೦ರ ದಶಕದ ಆರಂಭದಲ್ಲಿ ನಡೆದ ಗೇಣಿ ಹಕ್ಕಿನ ಸತ್ಯಾಗ್ರಹವನ್ನು ಬಾಲಕನಾಗಿ ಕಣ್ಣಾರೆ ಕಂಡು, ಭೂಮಾಲೀಕರು ಗೇಣಿದಾರರನ್ನು ನಡೆಸಿಕೊಳ್ಳುತ್ತಿದ್ದ ರೀತಿ, ಸಾಮಾಜಿಕವಾಗಿ ಅವರನ್ನು ಕಡೆಗಣಿಸುತ್ತಿದ್ದ ಬಗೆ ಇವೆಲ್ಲಾ ರೋಷದ ರೂಪದಲ್ಲಿ ಮಡುಗಟ್ಟಿದ್ದೇ ತಿಮ್ಮಪ್ಪನವರ ಸಾರ್ವಜನಿಕ ಬದುಕಿಗೆ ಪ್ರೇರಣೆಯಾಯಿತು. ಭೂಮಾಲೀಕರೆದುರು ಕುರ್ಚಿಯಲ್ಲಿ ಕುಳಿತುಕೊಳ್ಳಲು ಅವಕಾಶ ಇಲ್ಲದ ಕಾಲಕ್ಕೆ ತಾನೇ ಸ್ವತಃ ಕುರ್ಚಿಯೊಂದನ್ನು ತಯಾರಿಸಿ ಗೌಡರ ಎದುರು ಕುಳಿತ ಕಣಸೆ ಜಟ್ಟಪ್ಪನಂತಹ ವ್ಯಕ್ತಿಗಳ ಸ್ವಾಭಿಮಾನದ ಕಥನ ಕಾಗೋಡು ಸತ್ಯಾಗ್ರಹದೊಂದಿಗೆ ಬೆಸೆದುಕೊಂಡಿದೆ. ಗೇಣಿದಾರರ ಕುಟುಂಬದ ಹಿಂದುಳಿದ ವರ್ಗದ ಓರ್ವ ಯುವಕ ಪದವಿ ಮುಗಿಸಿ ಕಾನೂನು ಪದವಿಯನ್ನು ಪಡೆಯುವುದು ಆ ಕಾಲಕ್ಕೆ ಸುಲಭದ ಮಾತಾಗಿರಲಿಲ್ಲ. ಕಾಲೇಜು ದಿನಗಳಲ್ಲೆ ಲೋಹಿಯಾರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಕಾಗೋಡು ಸಮಾಜವಾದಿ ಯುವಜನ ಸಭಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು.

ಸಮಾಜವಾದಿ ಯುವಜನ ಸಭಾದ ಮೂಲಕ ಕಾಗೋಡು ಶಾಂತವೇರಿ ಗೋಪಾಲಗೌಡರಿಗೂ ಹತ್ತಿರವಾಗಿದ್ದರು. ೧೯೬೨ ಮತ್ತು ೬೭ರಲ್ಲಿ ಸಾಗರ ವಿಧಾನಸಭಾ ಕ್ಷೇತ್ರಕ್ಕೆ ಕಾಗೋಡು ಸೋಷಲಿಸ್ಟ್ ಪಕ್ಷದ ಅಭ್ಯರ್ಥಿಯಾಗಬೇಕೆಂದು ಎಂದು ಒತ್ತಾಯಿಸಿ ನಿಲ್ಲಿಸಿದವರೇ ಗೋಪಾಲಗೌಡರು ಎನ್ನಲಾಗಿದೆ. ಆ ಎರಡೂ ಚುನಾವಣೆಗಳಲ್ಲಿ ಸೋಷಲಿಸ್ಟ್ ಪಕ್ಷ ಗೆಲ್ಲಲಿಲ್ಲ. ೧೯೭೨ರಲ್ಲಿ ನಡೆದ ಚುನಾವಣೆ ತಿಮ್ಮಪ್ಪನವರ ರಾಜಕೀಯ ಜೀವನಕ್ಕೆ ಮಹತ್ವದ ತಿರುವು ನೀಡಿತು. ಒಂದು ಕುಟುಂಬದಂತಿದ್ದ ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರು ಕಾಗೋಡರ ಚುನಾವಣೆಗಾಗಿ ರೈತರಿಂದ ಭತ್ತದ ಚೀಲಗಳ ರೂಪದಲ್ಲಿ ದೇಣಿಗೆ ಪಡೆದಿದ್ದರು. ಇದರ ಮಾರಾಟದಿಂದ ಬಂದ ೧೨ ಸಾವಿರ ರೂಪಾಯಿಗಳಿಂದ ಚುನಾವಣೆ ಖರ್ಚು ನಿಭಾಯಿಸಲಾಗಿತ್ತು. ಪರಿಣಾಮ ಕಾಗೋಡು ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದರು.

ಕಾಗೋಡು ಪ್ರಥಮ ಬಾರಿಗೆ ಶಾಸಕರಾದಾಗಲೇ ಸಮಾಜವಾದಿ ಪಕ್ಷದ ಸಂಡೂರು ಭೂಸತ್ಯಾಗ್ರಹ ಆರಂಭವಾಗಿ, ಆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ದೇವರಾಜು ಅರಸು ಭೂಸುಧಾರಣೆ ಕಾನೂನನ್ನು ಜಾರಿಗೊಳಿಸಲು ಮುಂದಾದರು. ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಹಿಂದುಳಿದವರ ಪರ ಶಾಸನ ಸಭೆಯಲ್ಲಿ ಮಾತನಾಡುತ್ತಿದ್ದ ಕಾಗೋಡರನ್ನು ಅರಸು ಕಾಯ್ದೆ ಜಾರಿಗಾಗಿ ರಚಿಸಲಾದ ಜಂಟಿ ಸಲಹಾ ಸಮಿತಿಗೆ ಸದಸ್ಯರನ್ನಾಗಿ ಮಾಡಿದರು. ಗೇಣಿ ರೈತರ ಹಿತಕ್ಕೆ ಧಕ್ಕೆ ಬಾರದಂತೆ ಕಾಗೋಡು ಅಂದು ನಿರ್ವಹಿಸಿದ ಪಾತ್ರ ಅವರ ಮುಂದಿನ ರಾಜಕೀಯ ಜೀವನಕ್ಕೆ ಸುಭದ್ರ ಅಡಿಪಾಯ ಹಾಕಿತು. ಭೂಸುಧಾರಣೆ ಕಾನೂನು ಜಾರಿಯಾದರೂ ಭೂಮಿಯ ಹಕ್ಕು ಪಡೆಯಲು ಅರ್ಜಿ ಹಾಕಬೇಕೆಂಬ ಅರಿವೂ ಇರದಷ್ಟು ಅವಿದ್ಯಾವಂತರಾಗಿದ್ದ ಗೇಣಿದಾರರ ಮನೆ ಬಾಗಿಲಿಗೆ ತೆರಳಿ ಅರ್ಜಿ ಪಡೆದು ಅದನ್ನು ಭೂನ್ಯಾಯ ಮಂಡಳಿಗೆ ತಲುಪಿಸುವ ಕೆಲಸವನ್ನು ಕಾಗೋಡು ಸಮಾಜವಾದಿ ಪಕ್ಷದ ವತಿಯಿಂದ ಮಾಡಿಸಿದರು.

೧೯೭೭ರಲ್ಲಿ ಜನತಾ ಪಕ್ಷ ಉದಯವಾಗಿ ಅದರೊಳಗೆ ಸೋಷಲಿಸ್ಟ್ ಪಕ್ಷ ವಿಲೀನವಾಗಬೇಕು ಎಂದು ಜಯಪ್ರಕಾಶ ನಾರಾಯಣರು ತೀರ್ಮಾನಿಸಿದಾಗ ಜನಸಂಘ ಇರುವ ಜನತಾ ಪಕ್ಷದಲ್ಲಿ ಸೋಷಲಿಸ್ಟ್ ಪಕ್ಷ ವಿಲೀನವಾಗುವುದು ಆತ್ಮಹತ್ಯಾಕಾರಕ ನಿರ್ಧಾರವಾಗುತ್ತದೆ ಎಂದು ಕಾಗೋಡು ಹೇಳಿದ್ದರಂತೆ. ಆದರೆ ಪಕ್ಷದ ವರಿಷ್ಠರ ನಿರ್ಧಾರಕ್ಕೆ ಅವರು ತಲೆಬಾಗಿ ೧೯೭೮ರಲ್ಲಿ ಜನತಾ ಪಕ್ಷದ ಅಭ್ಯರ್ಥಿಯಾಗಿ ಸಾಗರದಿಂದ ಸ್ಪರ್ಧಿಸಿ ಸೋಲು ಕಾಣಬೇಕಾಯಿತು. ಜನಸಂಘ ಜನತಾ ಪಕ್ಷದ ಜೊತೆ ಇದ್ದುದ್ದರಿಂದ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ನಮ್ಮನ್ನು ಬೆಂಬಲಿಸಲಿಲ್ಲ ಎಂದು ಕಾಗೋಡು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

೧೯೭೮ರ ಚುನಾವಣೆಯ ಸೋಲಿನ ನಂತರವೂ ಕಾಗೋಡರ ಹೋರಾಟದ ಕಾವು ಕಡಿಮೆಯಾಗಲಿಲ್ಲ. ಮಾಜಿ ಗೇಣಿ ರೈತರ ಅಧಿಭೋಗದಾರಿಕೆ ಹಕ್ಕು ಪಡೆದ ಭೂಮಿಗೆ ಕಂತಿನ ಹಣ ಕಟ್ಟುವುದನ್ನು ಮನ್ನಾ ಮಾಡಬೇಕು ಎಂದು ಮತ್ತು ಭೂಹೀನ ಕೃಷಿ ಕಾರ್ಮಿಕರಿಗೆ ನೆಲ ಕಿಮ್ಮತ್ತು ರದ್ದು ಮಾಡಿ ಭೂಮಿ ನೀಡಬೇಕು ಎಂದು ಒತ್ತಾಯಿಸಿ ಚಳವಳಿ ಸಂಘಟಿಸಿದರು. ಸಾಗರ ತಾಲ್ಲೂಕಿನಲ್ಲಿ ಆಗ ಮೂರು ಸಾವಿರ ರೈತರು ಜೈಲು ಸೇರಿದ್ದರು. ಆದರೆ ಈ ಮಧ್ಯೆ ಸಾಮಾಜಿಕ ನ್ಯಾಯದ ಸಿದ್ಧಾಂತವನ್ನು ಜಾರಿಗೆ ತರಬೇಕಾದರೆ ತಾತ್ವಿಕವಾಗಿ ಗಟ್ಟಿ ಇದ್ದರೂ ರಾಜಕೀಯ ಬಲ ಇಲ್ಲದಿದ್ದರೆ ಸಣ್ಣ ಗುಂಪಿನಿಂದ ಯಾವ ಸಾಮಾಜಿಕ ಬದಲಾವಣೆಯನ್ನೂ ಮಾಡಲು ಸಾಧ್ಯವಿಲ್ಲ (ಇದನ್ನು ಕಾಗೋಡರೆ ಸಂದರ್ಶನವೊಂದರಲ್ಲಿ ಹೇಳಿದ್ದಾರೆ) ಎಂಬ ನಂಬಿಕೆಯಿಂದ ಕಾಗೋಡು ಕಾಂಗ್ರೆಸ್ ಸೇರಿದರು. ಆಗ ಮುಖ್ಯಮಂತ್ರಿಯಾಗಿದ್ದ ಗುಂಡೂರಾಯರು ಕಾಗೋಡರನ್ನು ಎಂಎಲ್‌ಸಿ ಮಾಡಿ ಮಂತ್ರಿಗಿರಿ ನೀಡಿದರು.

ಕಾಂಗ್ರೆಸ್ ಎಂಬ ಸಮುದ್ರದಲ್ಲಿ ಕಾಗೋಡರು ತಮ್ಮತನವನ್ನು ನಿಧಾನವಾಗಿ ಕಳೆದುಕೊಳ್ಳಲು ಆರಂಭಿಸಿದ್ದು ಆಗಲೇ. ಕರ್ನಾಟಕ ಕಂಡ ಅತಿ ಭ್ರಷ್ಟ ಮುಖ್ಯಮಂತ್ರಿ ಎಂಬ ಕುಖ್ಯಾತಿಗೆ ಆಗ ಒಳಗಾಗಿದ್ದ ಗುಂಡೂರಾಯರನ್ನು ಸಮರ್ಥಿಸಿಕೊಳ್ಳುವ ಅನಿವಾರ್ಯತೆ ಕಾಗೋಡರಿಗೆ ಎದುರಾಗಿತ್ತು. ಸೋಷಲಿಸ್ಟ್ ಪಕ್ಷದಲ್ಲಿದ್ದಾಗ ಕಾಣುತ್ತಿದ್ದ ತಾತ್ವಿಕ ಸ್ಪಷ್ಟತೆ, ಸೈದ್ಧಾಂತಿಕ ನಿಲುವು, ನಿಷ್ಠುರತೆ ಇವೆಲ್ಲ ನಿಧಾನವಾಗಿ ಕರಗತೊಡಗಿತ್ತು. ಇದರ ಪರಿಣಾಮವಾಗಿ ಮತ್ತು ೧೯೮೩ರಿಂದ ೮೯ರವರೆಗೆ ಕರ್ನಾಟಕದಲ್ಲಿ ಜನತಾ ಪರಿವಾರ ರಾಜಕೀಯ ಪ್ರಾಬಲ್ಯ ಗಳಿಸಿದ ಹಿನ್ನೆಲೆಯಲ್ಲಿ ಕಾಗೋಡು ನೇಪಥ್ಯಕ್ಕೆ ಸರಿದಿದ್ದರು. ನಂತರ ೮೯ರಿಂದ ೨೦೦೪ರವರೆಗೆ ಸತತವಾಗಿ ಸಾಗರದಿಂದ ಶಾಸಕರಾಗಿ ಗೆದ್ದು ಬಂದ ಅವರು, ವಿವಿಧ ಖಾತೆಗಳನ್ನು ಮಂತ್ರಿಯಾಗಿ ನಿರ್ವಹಿಸಿದರು. ಸಾಗರ ಕ್ಷೇತ್ರದ ಅಭಿವೃದ್ಧಿಗಾಗಿ ಸಾಕಷ್ಟು ಕೆಲಸ ಮಾಡಿದರು. ಆದರೆ ಅಧಿಕಾರ ಸೃಷ್ಟಿಸುವ 'ವಿಸ್ಮೃತಿ'ಗೆ ಸಿಕ್ಕಿದ ಅವರು ಆನಂತರದ ಎರಡೂ ಚುನಾವಣೆಗಳಲ್ಲಿ ತಮ್ಮ ಸ್ವಂತ ಅಳಿಯ ಗೋಪಾಲಕೃಷ್ಣ ಬೇಳೂರು ಎದುರು ಸೋಲು ಕಂಡರು.

ಹೀಗೆ ಕಾಗೋಡು ತಮ್ಮ ಸುಧೀರ್ಘ ರಾಜಕೀಯ ಜೀವನದಲ್ಲಿ ಸೋಲು ಗೆಲುವು ಎರಡನ್ನೂ ಕಂಡಿದ್ದಾರೆ. ಅಧಿಕಾರ ಇರಲಿ, ಇಲ್ಲದಿರಲಿ, ಊರಿನ ಕೆಲಸ ಮಾಡುವುದರಲ್ಲಿ ಕಾಗೋಡು ವಹಿಸುವ ಕಾಳಜಿ ಕುರಿತು ಅವರ ವಿರೋಧಿಗಳೂ ಮೆಚ್ಚುಗೆ ಸ್ರಚಿಸುತ್ತಾರೆ. ವೈಯುಕ್ತಿಕವಾಗಿ ಯಾರಿಗೂ ಸಹಾಯ ಮಾಡದ ಕಾಗೋಡು ಊರಿನ ಕೆಲಸ ಎಂದರೆ ಮುಗಿಬಿದ್ದು ಅದನ್ನು ಮುಗಿಸುವ ಮನೋಭಾವದವರು. ಅದೇನೇ ಇದ್ದರೂ ಕಾಗೋಡರ ರಾಜಕೀಯ ಜೀವನ ಕಳಂಕರಹಿತವಾದದ್ದೇನೂ ಅಲ್ಲ. ಗೃಹಮಂಡಳಿ ಅಧ್ಯಕ್ಷರಾಗಿದ್ದಾಗ ನಡೆದ ಹಗರಣ ಅವರ ರಾಜಕೀಯ ಜೀವನದ ಕಪ್ಪು ಚುಕ್ಕೆ. ಶಿವಮೊಗ್ಗದಲ್ಲಿ ಮೆಡಿಕಲ್ ಕಾಲೇಜು ಮಾಡಲು ಹೋಗಿ ಮಾರ್ವಾಡಿಯೊಬ್ಬನ ಕೈಗೆ ಸಿಲುಕಿ ಇಂದಿಗೂ ರಾಜ್ಯದ ಅನೇಕ ನ್ಯಾಯಾಲಯಗಳಲ್ಲಿ ಚೆಕ್‌ಬೌನ್ಸ್ ಕೇಸನ್ನು ಕಾಗೋಡು ಎದುರಿಸುತ್ತಿದ್ದಾರೆ. ವ್ಯಾವಹಾರಿಕವಾಗಿ ಕಾಗೋಡು ಬುದ್ಧಿವಚಿತರಲ್ಲದಿರುವುದು ಇದಕ್ಕೆ ಕಾರಣವಾಗಿದೆ.

ಬಡವರಿಗೆ ಭೂಮಿಯ ಹಕ್ಕು ಸಿಗಬೇಕು ಎಂಬ ಹೋರಾಟದ ಮೂಲಕವೇ ರಾಜಕೀಯಕ್ಕೆ ಬಂದ ಕಾಗೋಡು ಇಂದು ತಾವು ಪ್ರತಿನಿಧಿಸುತ್ತಿರುವ ಕಾಂಗ್ರೆಸ್ ಪಕ್ಷ ರೈತರ ಪಕ್ಕಾ ವಿರೋಧಿಯಾಗಿರುವ ಉದಾರೀಕರಣ ನೀತಿಯನ್ನು ಅನುಸರಿಸುತ್ತಿದ್ದರೂ ಅದರ ವಿರುದ್ಧ ಧ್ವನಿ ಎತ್ತುವ ಸ್ಥಿತಿಯಲ್ಲಿ ಇಲ್ಲ. ಕರ್ನಾಟಕದಲ್ಲಿ ಮಣ್ಣಿನ ಮಗ ಎಂದೇ ಹೆಸರಾದ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಕೃಷಿಭೂಮಿ ಮಾರಾಟದ ಮೇಲಿನ ನಿರ್ಬಂಧವನ್ನು ತೆಗೆಯುವ ಕಾಯ್ದೆ ರೂಪಿಸುವಾಗ ಕಾಗೋಡರಂತಹ ನಾಯಕರಿಂದ ಅಂತಹ ಪ್ರಬಲವಾದ ವಿರೋಧ ಬರಲೇ ಇಲ್ಲ.

ಪಕ್ಷ ರಾಜಕಾರಣದ ಮಿತಿಯಲ್ಲಿ ಕಾಗೋಡು ಕಳೆದುಹೋದಂತೆ ಕಂಡರೂ ಇಂದಿಗೂ ಸಮಾಜದ ದುರ್ಬಲ ವರ್ಗದವರ ಕುರಿತ ಅವರ ಕಾಳಜಿ ಪ್ರಶ್ನಾತೀತ. ಬಡವರಿಗೆ ನಿವೇಶನ, ಮನೆ, ರೇಷನ್‌ಕಾರ್ಡ್ ವಿತರಣೆ, ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನ, ಅರಣ್ಯ ಭೂಮಿ ಹಕ್ಕಿನ ಕಾಯ್ದೆ ಜಾರಿ ಇವೇ ಮೊದಲಾದ ವಿಷಯಗಳ ಕುರಿತು ಕಾಗೋಡು ಈಗಲೂ ಹೆಚ್ಚಿನ ಆಸಕ್ತಿ ವಹಿಸುತ್ತಾರೆ. ಆದರೆ ಸುದೀರ್ಘ ಕಾಲದಿಂದ ರಾಜಕಾರಣದಲ್ಲಿದ್ದರೂ ತಂತ್ರಗಾರಿಕೆಯಲ್ಲಿ ಕಾಗೋಡು ಪಳಗಿದವರಂತೆ ಕಾಣುವುದಿಲ್ಲ. ಹಳ್ಳಿಯ ಯಜಮಾನನ ಸಿಟ್ಟು, ಸೆಡವುಗಳ ಜೊತೆಗೆ ಮುಗ್ಧತೆಯೂ ಬೆಸೆದುಕೊಂಡಂತೆ ಕಾಣುವ ಕಾಗೋಡು ವರ್ಣರಂಜಿತ ರಾಜಕಾರಣಿಯೂ ಅಲ್ಲ. ಸದಾ ಮಾಧ್ಯಮಗಳಲ್ಲಿ ಸುದ್ದಿಯಲ್ಲಿರಬೇಕು ಎಂದು ಬಯಸಿದವರಲ್ಲ. ತೀರಾ ಮಹತ್ವಾಕಾಂಕ್ಷೆಯ ರಾಜಕಾರಣಿಯಂತೆಯೂ ಅವರು ಕಾಣುವುದಿಲ್ಲ.

ಪ್ರಸ್ತುತ ಸಂದರ್ಭದಲ್ಲಿ ಚುನಾವಣೆಗಳಲ್ಲಿ ಹರಿಯುತ್ತಿರುವ ಹಣದ ಹೊಳೆ ನೋಡಿ ಗಾಬರಿಯಾಗಿರುವ ರಾಜಕಾರಣಿಗಳ ಪೈಕಿ ಕಾಗೋಡು ಕೂಡ ಒಬ್ಬರು. ಈ ಹಿನ್ನೆಲೆಯಲ್ಲೆ ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಅವರು ಹೇಳಿದ್ದುಂಟು. ಆದರೆ ಸಾಗರ ಕಾಂಗ್ರೆಸ್‌ನಲ್ಲಿ ಪರ್ಯಾಯ ನಾಯಕತ್ವವೇ ಸೃಷ್ಟಿಯಾಗಿಲ್ಲ. ಅಥವಾ ಸೃಷ್ಟಿಸಲಾಗಿಲ್ಲ ಎಂದು ಹೇಳುವುದೇ ಸರಿಯೇನೋ! ಹೀಗಾಗಿ ಆರೋಗ್ಯ ಸದೃಢವಾಗಿದ್ದರೆ ಮತ್ತೆ ಅವರು ಚುನಾವಣೆಗೆ ನಿಂತರೂ ಆಶ್ಚರ್ಯವಿಲ್ಲ.


**––ಎಂ.ರಾಘವೇಂದ್ರ.**

ವಿಚಾರ-ವಿಮರ್ಶೆ

# ಗಾಂಧಿ-ಅಂಬೇಡ್ಕರ್ ಮುಖಾಮುಖಿ: ಇಂದಿನ ನೋಟಗಳು...

ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಆರಂಭವಾದ ಗಾಂಧಿ-ಅಂಬೇಡ್ಕರ್ ನಡುವಣ ವೈಚಾರಿಕ ಮುಖಾಮುಖಿ, ಇತ್ತೀಚಿನ ವರ್ಷಗಳಲ್ಲಿ 'ಸಾಮಾಜಿಕ ನ್ಯಾಯ'ದ ಪ್ರಶ್ನೆ ತೀವ್ರತೆ ಪಡೆದು ಸಾರ್ವಜನಿಕ ಜೀವನದ ವ್ಯವಹಾರಗಳಲ್ಲಿ ಮುಂಚೂಣಿಗೆ ಬಂದಿರುವ ಸಂದರ್ಭದಲ್ಲಿ, ಹೆಚ್ಚು ಚೂಪಾದ ಚರ್ಚೆಗೆ ಆಸ್ಪದ ನೀಡಿದೆ. ವಿಶೇಷವಾಗಿ ಇಂದಿನ ಜಾಗತೀಕರಣದ ಸಂಕೀರ್ಣ ಸಂದರ್ಭದಲ್ಲಿ ಈ ಮುಖಾಮುಖಿಯಲ್ಲಿನ ಜಟಿಲತೆಗಳನ್ನು ಕಡಿಮೆಗೊಳಿಸಿದ ಅನುಸಂಧಾನಾತ್ಮಕ ಸಂಯೋಜನೆಯ ಅಗತ್ಯವನ್ನು ಮನಗಾಣುವ ಮಾತುಗಳು ಕೇಳಿಬರುತ್ತಿವೆ. ಈ ಸಂಬಂಧ ಇಲ್ಲಿ ಕನ್ನಡದ ಎರಡು ಸೃಜನಶೀಲ ಮತ್ತು ದಲಿತ ಚಳುವಳಿಯೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡಿದ್ದ ಮನಸ್ಸುಗಳು ತಮ್ಮ ಸ್ಪಂದನ ನೀಡಿವೆ. ಪತ್ರಿಕೆ ಈ ಸಂಬಂಧ ನಾಲ್ವರು ದಲಿತ ನಾಯಕ/ಚಿಂತಕರನ್ನು ಸ್ಪಂದನಗಳಿಗಾಗಿ ಆಹ್ವಾನಿಸಿತ್ತಾದರೂ, ಅವರು ಬರೆಯಲು ಒಪ್ಪಿಕೊಂಡಿದ್ದರಾದರೂ, ಬರೆದಿಲ್ಲ. ಮುಂದೆ ಬರೆದರೆ ಪ್ರಕಟಿಸಲು ಯತ್ನಿಸಲಾಗುವುದು. ಇದು ಈ ಗಾಂಧಿ ಜಯಂತಿಯ ನೆನಪಿನಲ್ಲಿ *ನವ ಮಾನವ ಮಾಸಿಕ* ಆರಂಭಿಸಿರುವ ಚರ್ಚೆ. -ಸಂ

## ಗಾಂಧಿ ಅಂಬೇಡ್ಕರ್ ಪ್ರಶ್ನೆಗಳನ್ನು ಕಡೆಗಣಿಸಬಾರದು...



**ಗಾ**ಂಧಿವಾದ ಹಾಗೂ ಅಂಬೇಡ್ಕರ್‌ವಾದಗಳ ಬಗ್ಗೆ ತೀವ್ರವಾದ ಸೈದ್ಧಾಂತಿಕ ಚರ್ಚೆಗಳು ಹೆಚ್ಚಾಗಿ ಆಗಿಲ್ಲ. ಬಹುಪಾಲು ಚರ್ಚೆಗಳು ವ್ಯಕ್ತಿಗಳಾಗಿ ಅಥವಾ ನಾಯಕರುಗಳಾಗಿ ಅವರ ಮಧ್ಯ ನಡೆದ ಸಂಘರ್ಷದ ಮೇಲೆ, ಇಲ್ಲದಿದ್ದರೆ ಸ್ವಾತಂತ್ರ್ಯಪೂರ್ವ ಸಂದರ್ಭದ ಘಟನೆಗಳು ಅವರ ಪಾತ್ರದ ಮೇಲೆ ಕೇಂದ್ರೀಕೃತವಾಗಿರುತ್ತವೆ. ಇಲ್ಲಿ ನಾಯಕರು ಯಾರು ಖಳನಾಯಕರು ಯಾರು ಎನ್ನುವುದನ್ನು ನಿಗದಿ ಮಾಡುವುದರೊಂದಿಗೆ ಈ ಚರ್ಚೆಗಳು ಮುಕ್ತಾಯಗೊಂಡು ಅಪ್ರಸ್ತುತವಾಗಿಬಿಡುತ್ತವೆ. ನಮ್ಮೆದುರಿಗಿರುವ ಮುಖ್ಯ ಪ್ರಶ್ನೆಯೆಂದರೆ ಹಲವಾರು ಬಗೆಯ ಅಮೂಲಾಗ್ರ ಬದಲಾವಣೆಗಳು ನಡೆಯುತ್ತಿರುವ ಇಂದಿನ ಸಂದರ್ಭವನ್ನು ಅರ್ಥ ಮಾಡಿಕೊಳ್ಳಲು ಹಾಗೂ ಅದನ್ನು ಬದಲಾಯಿಸಲು ವಿಶಾಲವಾದ ಅರ್ಥದಲ್ಲಿ ರಾಜಕೀಯ ಸಿದ್ಧಾಂತಗಳಾಗಿ ಗಾಂಧಿವಾದ, ಅಂಬೇಡ್ಕರ್‌ವಾದಗಳು ಎಷ್ಟು ಪ್ರಸ್ತುತವಾಗಿವೆಯೆನ್ನುವುದು. ಅಲ್ಲದೇ ಈ ಸಿದ್ಧಾಂತಗಳನ್ನು ಹಾಗೂ ಅವು ಸೂಚಿಸುವ ಕ್ರಿಯಾಶೀಲತೆ (praxis)ಗಳನ್ನು ಇಂದಿನ ಸಂದರ್ಭದ ಅವಶ್ಯಕತೆಗಳಿಗೆ ಅನುಗುಣವಾಗಿ ಮಾರ್ಪಡಿಸುವುದು ಮುಖ್ಯವಾಗಿದೆ. ಅಂಬೇಡ್ಕರ್ ಸಿದ್ಧಾಂತದ ಎರಡು ಪ್ರಮುಖ ಅಂಶಗಳೆಂದರೆ ಅ) ಜಾತಿಕೇಂದ್ರಿತ ಸಮಾಜ ಹಾಗೂ ಸಂಸ್ಕೃತಿಗಳ ತೀವ್ರವಾದ ವಿಮರ್ಶೆ ಹಾಗೂ ತಿರಸ್ಕರಣ. ಆ) ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜಾತಿಕೇಂದ್ರಿತವಾದ, ಶ್ರೇಣೀಕೃತವಾದ ರಚನೆಗಳು ಹಾಗೂ ಅಪೇಕ್ಷೆಗಳು ಕೆಲಸಮಾಡದಂತೆ ಸಂವಿಧಾನದ ಮೂಲಕ ಪ್ರಭುತ್ವವು ಜವಾಬ್ದಾರಿಯುತವಾಗಿ ವರ್ತಿಸುವಂತೆ ಮಾಡುವುದು. ಅಂದರೆ ಸಾಮಾಜಿಕ ಸುಧಾರಣೆ ಹಾಗೂ ತಲ್ಲಣಗಳು ಪ್ರಭುತ್ವದ (State) ಮೂಲಕವೇ ಆಗುವಂತೆ ಸಂವಿಧಾನವನ್ನು ಪ್ರಬಲವಾಗಿ ಉಪಯೋಗಿಸಿಕೊಳ್ಳುವುದು.

ಇವುಗಳಲ್ಲಿ ಅಂಬೇಡ್ಕರ್‌ವಾದದ ಆಧಾರವಾಗಿರುವ ಜಾತಿಕೇಂದ್ರಿತ ಸಂಕಥನವು ಇಂದಿನ ಸಂದರ್ಭದಲ್ಲಿ ಪ್ರಸ್ತುತವಾಗಿದೆ. ಜಾಗತೀಕರಣ, ನವ ಉದಾರ ಆರ್ಥಿಕವಾದ, ಇವುಗಳ ಫಲಾನುಭವಿಯಾದ ನಗರದ ಮಧ್ಯಮವರ್ಗವು ಅಗಾಧವಾಗಿ ವಿಸ್ತಾರಗೊಂಡಿರುವುದರಿಂದ ಮತ್ತು ಈ ವರ್ಗವು ಜಾತಿಕೇಂದ್ರಿತ ವಿಶ್ಲೇಷಣೆಯನ್ನು ಒಪ್ಪದೇ ಇರುವುದರಿಂದ ಜಾತಿವ್ಯವಸ್ಥೆ ಈಗ ಒಂದು ಸಮಸ್ಯೆಯೇ ಅಲ್ಲ ಎನ್ನುವ ಹುಸಿನಂಬಿಕೆಯನ್ನು ಹರಡಲಾಗಿದೆ. ಜಾಗತೀಕರಣದಿಂದಾಗಿ ಜಾತಿವ್ಯವಸ್ಥೆಯು ತನ್ನಷ್ಟಕ್ಕೆ ತಾನೇ ಕಳಚಿಹೋಗುತ್ತದೆ ಎಂದು ನಂಬಲಾಗುತ್ತಿದೆ. ಈ ಹುಸಿ ನಂಬಿಕೆಗಳಿಂದಾಗಿ ಅಂಬೇಡ್ಕರ್‌ವಾದ ಅಪ್ರಸ್ತುತ, ಅವರು ವಿವರಿಸಿದ ಜಾತಿಕೇಂದ್ರಿತ ಸಮಾಜ ಈಗ ಇಲ್ಲವೆಂದು ನಂಬಲಾಗುತ್ತಿದೆ. ವಾಸ್ತವವೆಂದರೆ ಜಾಗತೀಕರಣವನ್ನು ಒಪ್ಪಿಕೊಂಡಿರುವ ಹಾಗೂ ಅದನ್ನು ಬೆಂಬಲಿಸುವುದಕ್ಕಾಗಿ ಸಂವಿಧಾನವನ್ನು ಕ್ರಮೇಣವಾಗಿ ನಿಷ್ಕ್ರಿಯಗೊಳಿಸುತ್ತಿರುವ ಇಂಡಿಯಾದ ಪ್ರಭುತ್ವವು ಸರಕಾರದ ರೂಪದಲ್ಲಿ ಅಧಿಕಾರ ಪಡೆಯುವುದೇ ಜಾತಿಕೇಂದ್ರಿತ ಚುನಾವಣಾ ವ್ಯವಸ್ಥೆಯ ಮೂಲಕ; ಅದು ಅಸ್ತಿತ್ವದಲ್ಲಿರುವುದೇ ಜಾತಿ ವ್ಯವಸ್ಥೆಯನ್ನು ಪ್ರಜಾಪ್ರಭುತ್ವದ ಒಳಗೆಯೇ ಬಲಿಷ್ಠಗೊಳಿಸುವುದರ ಮೂಲಕ. ಈ ವೈರುಧ್ಯವನ್ನು ಖಚಿತವಾಗಿ ವಿವರಿಸುವ ಸಾಮರ್ಥ್ಯ ಅಂಬೇಡ್ಕರ್‌ವಾದಕ್ಕಿದೆ.

ಅಂಬೇಡ್ಕರ್ ಅಂದು ಕಾಂಗ್ರೆಸ್‌ವಾದವನ್ನು ವಿಶ್ಲೇಷಿಸಿದ ರೀತಿಯಲ್ಲಿ ಇಂದಿನ ಪ್ರಜಾಪ್ರಭುತ್ವದ ಜಾತಿಕೇಂದ್ರಿತ ಸ್ವರೂಪವನ್ನು ವಿಶ್ಲೇಷಿಸಬಹುದಾಗಿದೆ. ಜಾಗತೀಕರಣದ ವಿರುದ್ಧದ ಹೋರಾಟದಲ್ಲಿ, ಜಾಗತೀಕರಣವು ಅಂತಿಮವಾಗಿ ದುರ್ಬಲ ಜಾತಿ ಹಾಗೂ ವರ್ಗಗಳ ಜನರನ್ನೇ ತಬ್ಬಲಿಗೊಳಿಸುತ್ತದೆ ಎನ್ನುವ ವಾಸ್ತವವನ್ನು ಸೈದ್ಧಾಂತಿಕವಾಗಿ ಬಳಸಿಕೊಳ್ಳಬೇಕಾಗಿದೆ. ಇದು ಸಾಧ್ಯವಾಗಬೇಕಾದರೆ ಅಂಬೇಡ್ಕರ್‌ವಾದವು ತನ್ನ ಪರಿಭಾಷೆಯನ್ನು, ನುಡಿಗಟ್ಟನ್ನು ಮಾರ್ಪಡಿಸಿಕೊಳ್ಳುವುದು ಅವಶ್ಯಕವಾಗಿದೆ. ಮತ್ತು ಅಂಬೇಡ್ಕರ್‌ವಾದವನ್ನು ಈಗಾಗಲೇ ಭಾರತೀಯ ಮಧ್ಯಮವರ್ಗವನ್ನು ಸೇರಿಕೊಂಡಿರುವ ಶಿಕ್ಷಿತ ದಲಿತ ಮಧ್ಯಮವರ್ಗದ ಹಿಡಿತದಿಂದ ಮುಕ್ತಗೊಳಿಸಬೇಕಾಗಿದೆ. ಈ ದಲಿತ ಮಧ್ಯಮವರ್ಗವು ಅಂಬೇಡ್ಕರ್‌ವಾದವನ್ನು ಕೇವಲ ಮೀಸಲಾತಿವಾದವಾಗಿಡಲು ಬಯಸುತ್ತದೆಯೇ ಹೊರತು ಸಾಮಾಜಿಕ ನ್ಯಾಯಸಮಾನತೆಗಳ ವಾದವಾಗಿ, ಅಸ್ತ್ರವಾಗಿ ಬಳಸಲು ಒಪ್ಪುವುದಿಲ್ಲ. ಖಾಸಗಿ ಕ್ಷೇತ್ರದಲ್ಲಿಯೂ ಮೀಸಲಾತಿ ತರುವುದು ಸಾಧ್ಯವಾಗಿಬಿಟ್ಟರೆ ದಲಿತ ಮಧ್ಯಮವರ್ಗವು ಅಂಬೇಡ್ಕರ್‌ವಾದದಿಂದ ಇನ್ನು ಆಗಬೇಕಾದದ್ದು ಏನೂ ಇಲ್ಲ ಎಂದುಕೊಂಡು ಅದನ್ನು ತ್ಯಜಿಸಿಬಿಡುತ್ತದೆಯೆನ್ನುವುದರಲ್ಲಿ ನನಗಂತೂ ಸಂಶಯವಿಲ್ಲ. ಹೀಗಾಗಿ

ಡಾ. ಅಂಬೇಡ್ಕರರು ನಮ್ಮಲ್ಲಿ ಹಲವರು ನಾಚಿಕೆ ಪಡುವಷ್ಟು ಬುದ್ಧಿವಂತರು. ಹಾಗೂ ಜಾಣರು. ತಮ್ಮ ಚುರುಕಾದ ಬುದ್ಧಿಯಿಂದ ಅವರು ಹಲವು ಜನರ ಹೃದಯವನ್ನು ಮುಟ್ಟಿದ್ದಾರೆ. ಅವರ ತ್ಯಾಗ ತುಂಬ ದೊಡ್ಡದು. ಅವರು ಯಾವಾಗಲೂ ತಮ್ಮ ಕೆಲಸದಲ್ಲಿ ಮಗ್ನರು. ಅವರು ಸರಳ ಜೀವನ ನಡೆಸುವರು. ಅವರು ತಿಂಗಳಿಗೆ ಒಂದೆರಡು ಸಾವಿರ ರೂಪಾಯಿಗಳನ್ನದರೂ ಸಂಪಾದಿಸಬಲ್ಲವರು. ಅವರು ಯೂರೋಪಿಗೆ ಹೋಗಿ ನೆಲಸಲು ಕೂಡ ಸಾಧ್ಯ. ಆದರೆ ಅವರಿಗೆ ಅಲ್ಲಿಗೆ ಹೋಗಲು ಇಷ್ಟವಿಲ್ಲ. ಅವರಿಗೆ ಹರಿಜನರ ಕ್ಷೇಮಾಭ್ಯುದಯದ್ದೇ ಚಿಂತೆ. ಆದರೆ ಇಂದು ಸಮಾಜದಲ್ಲಿ ಇಂತಹ ಮನುಷ್ಯನ ಸ್ಥಾನಮಾನವಾದರೂ ಏನು? 'ನಾನು ವಿಧಾನ ಸಭೆ ಅಧಿವೇಶನಕ್ಕೆಂದು ಪೂನಾಗೆ ಹೋದಾಗ ಇತರರೆಲ್ಲ ಅವರ ಸ್ನೇಹಿತರ ಮನೆಗಳಲ್ಲಿ ತಂಗಿ ತಮ್ಮ ದಿನಭತ್ಯೆಯನ್ನು ಉಳಿಸಿಕೊಳ್ಳುವವರೇ. ನಾನು ಹೋಟೆಲ್‌ನಲ್ಲಿ ತಂಗಿ ಆ ಇಡೀ ಹತ್ತು ರೂಪಾಯಿಗಳನ್ನು ಖರ್ಚು ಮಾಡಿಕೊಳ್ಳಬೇಕಾಗಿದೆ. ನನ್ನನ್ನು ಒಬ್ಬ ಸಹೋದ್ಯೋಗಿ ಎಂದಾಗಲೀ ಸ್ನೇಹಿತನೆಂದಾಗಲೀ, ಒಪ್ಪಿಕೊಳ್ಳುವ ಒಂದು ಹಿಂದೂ ಕುಟುಂಬವೂ ಪೂನಾದಲ್ಲಿ ಇಲ್ಲ.' ಎಂದು ಅವರು ಹೇಳುತ್ತಾರೆ. ಯಾರ ಅವಮಾನವಿದು?

**–ಮಹಾತ್ಮ ಗಾಂಧಿ (ಜುಲೈ ೧೦, ೧೯೩೪, ಕರಾಚಿ)**

ಅಂಬೇಡ್ಕರ್‌ವಾದವನ್ನು ಸಾಮಾಜಿಕ, ಆರ್ಥಿಕ ಸಮಾನತೆಗಾಗಿ ಅವಶ್ಯಕವಾದ ರಾಜಕೀಯ ಸಿದ್ಧಾಂತವಾಗಿ ಹರಿತಗೊಳಿಸುವುದು ಇಂದಿನ ಸಂದರ್ಭದಲ್ಲಿ ಅವಶ್ಯಕವಾಗಿದೆ. ಅದು ಜಾಗತೀಕರಣದ ವಿರುದ್ಧ ನಮಗೆ ಬೇಕಾದ ರಾಜಕೀಯ ಸಿದ್ಧಾಂತವೆಂದು ಮಾರ್ಪಡಿಸದಿದ್ದರೆ ಅದು ಅಪ್ರಸ್ತುತವಾಗಿಬಿಡುತ್ತದೆ.

ಇನ್ನು ಎರಡನೇಯ ಅಂಶವಾದ ಸಂವಿಧಾನ ಹಾಗೂ ಪ್ರಭುತ್ವಗಳ ಸಂಬಂಧದ ಬಗ್ಗೆ. ಅದೆಷ್ಟೇ ಅಪೂರ್ಣವಿರಲಿ, ಪ್ರಜಾಪ್ರಭುತ್ವದ ಮಾದರಿಯನ್ನು ನಾವು ಒಪ್ಪಿಕೊಂಡಿರುವುದರಿಂದ ಸಂವಿಧಾನದೊಳಗಿರುವ ಸಾಮಾಜಿಕ ನ್ಯಾಯ ಹಾಗೂ ಸಮಾನತೆಗಳ ಅಪೇಕ್ಷೆಗಳಿಗೆ ಇಂಡಿಯಾದ ಪ್ರಭುತ್ವವು ಬದ್ಧವಾಗಿರುವಂತೆ ಒತ್ತಾಯಿಸುವುದು. ಜಾಗತೀಕರಣದಿಂದಾಗಿ ತನ್ನ ಸಾಮಾಜಿಕ ಜವಾಬ್ದಾರಿಯನ್ನು ಸಂಪೂರ್ಣವಾಗಿ ತ್ಯಜಿಸಲು ಪ್ರಭುತ್ವವು ಸನ್ನದ್ಧವಾಗಿರುವ ಸಂದರ್ಭದಲ್ಲಿ ಸಾಮಾಜಿಕ ಚಳುವಳಿಗಳ ಮೂಲಕ ಈ ಕೆಲಸವನ್ನು ಮಾಡಬೇಕಾಗಿದೆ. ಅದರಲ್ಲೂ ಈ ಚಳುವಳಿಗಳ ಸ್ವರೂಪವು ಗಾಂಧಿವಾದವು ಸೂಚಿಸುವ ಕ್ರಿಯೆಗಳ ಮೂಲಕ ಸಾಧ್ಯವಿದೆ. ನಾನು ಗಾಂಧಿವಾದಿ ಕ್ರಿಯೆಯೆಂದರೆ ಜನಸಮುದಾಯದ ಸಾಮೂಹಿಕ ಆಕಾಂಕ್ಷೆಗಳನ್ನು ಸಾರ್ವಜನಿಕ ಕ್ರಿಯೆಗಳ ಮೂಲಕ ಅಭಿವ್ಯಕ್ತಿಸಿ ಪ್ರಭುತ್ವವು ಅವುಗಳನ್ನು ಈಡೇರಿಸುವಂತೆ ಒತ್ತಾಯಿಸುವ ಪ್ರಜಾಪ್ರಭುತ್ವವಾದಿ ಕ್ರಿಯೆಯೆಂದು ಅರ್ಥಮಾಡಿಕೊಂಡಿದ್ದೇನೆ. ಈ ಕ್ರಿಯೆಯಲ್ಲಿ ಗಾಂಧಿವಾದದ ಮೂಲದಲ್ಲಿರುವ ಅರಾಜಕವಾದವನ್ನು ಅನುಸರಿಸಲಾಗುವುದಿಲ್ಲ. ಅಂದರೆ, ಪ್ರಭುತ್ವವನ್ನೇ ತಿರಸ್ಕರಿಸಲಾಗುವುದಿಲ್ಲ. ಬದಲಾಗಿ ಅದನ್ನು ಜನಪರವಾಗಿಸಲು ಒತ್ತಾಯಿಸಲಾಗುತ್ತದೆ. ಸ್ವತಃ ಗಾಂಧಿ ತಮ್ಮ ವಾದವನ್ನು ಸಾಮ್ರಾಜ್ಯಶಾಹಿ ಪ್ರಭುತ್ವದ ವಿರುದ್ಧ ರೂಪಿಸಿಕೊಂಡಿದ್ದರಿಂದ ನಮ್ಮದೇ ಪ್ರಭುತ್ವ ಇರುವ ಸಂದರ್ಭದಲ್ಲಿ ಅದನ್ನು ಮಾರ್ಪಡಿಸಿಕೊಳ್ಳಬೇಕಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಕೂಡ ಗಾಂಧೀವಾದಿ ಕ್ರಿಯೆಯೆಂದರೆ ಪ್ರಭುತ್ವದ ನೈತಿಕಪ್ರಜ್ಞೆಯನ್ನು ಎಚ್ಚರಗೊಳಿಸುವ ಪ್ರಯತ್ನವಾಗಿದೆ. ಈಗ ಗಾಂಧಿವಾದವು ಏಕಕಾಲಕ್ಕೆ ಜಾಗತೀಕರಣದ ವಿರುದ್ಧ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಬಲವಾಗಿ ಆಳ ಊರಿರುವ ಜಾತೀಯತೆ ಹಾಗೂ ಭ್ರಷ್ಟಾಚಾರದ ವಿರುದ್ಧ ಪ್ರತಿಭಟಿಸಬೇಕಾಗುತ್ತದೆ.

ಹೋಲಿಕೆಯಲ್ಲಿ ಗಾಂಧೀವಾದವು ಈ ಎರಡೂ ಅಂಶಗಳಲ್ಲಿ ಅಂಬೇಡ್ಕರ್ ವಾದಕ್ಕಿಂತ ಹೆಚ್ಚು ಸಮರ್ಥವಾಗಿದೆ. ಗಾಂಧೀವಾದವು ಆಧುನಿಕ ಬಂಡವಾಳಶಾಹಿಯ ಮೂಲಾಧಾರವಾಗಿರುವ ಉಪಭೋಗಿ ಸಂಸ್ಕೃತಿ ಹಾಗೂ ತಂತ್ರಜ್ಞಾನಕೇಂದ್ರಿತ ನಾಗರೀಕತೆಗಳನ್ನು ನೇರವಾಗಿ ಎದುರಿಸಿ ತಿರಸ್ಕರಿಸುವ ಹಾಗೂ ಅದಕ್ಕೆ ಪರ್ಯಾಯವಾದ ಜೀವನಶೈಲಿಯನ್ನು ಮಂಡಿಸುವ ಸಾಮರ್ಥ್ಯವನ್ನು ಮೊದಲಿನಿಂದ ಹೊಂದಿದೆ. ಆದರೆ, ಅಂಬೇಡ್ಕರ್‌ವಾದವು ಪಶ್ಚಿಮಪ್ರೇರಿತ ಆಧುನಿಕತೆಯನ್ನು ಒಪ್ಪಿಕೊಂಡುಬಿಡುವ ದೌರ್ಬಲ್ಯವನ್ನು ಹೊಂದಿದೆ. ಹೀಗಾಗಿ ಗಾಂಧೀವಾದವನ್ನು ಇಂದಿನ ಯುಗಧರ್ಮಕ್ಕೆ ಸಮರ್ಪಕವಾಗಿ ಒಗ್ಗಿಸಿಕೊಳ್ಳುವ ಸಾಧ್ಯತೆಗಳೂ ಇವೆ. ಆದರೆ, ಗಾಂಧೀವಾದವು ಅಂಬೇಡ್ಕರ್‌ವಾದವು ಎತ್ತಿದ ಪ್ರಶ್ನೆಗಳನ್ನು ಕಡೆಗಣಿಸಿದರೆ ಅಪ್ರಸ್ತುತವಾಗಿಬಿಡುತ್ತದೆ. ಹೀಗಾಗೀ ಇವೆರಡೂ ವಾದಗಳನ್ನು ತಾತ್ವಿಕವಾಗಿ ಮಾತ್ರವಲ್ಲ ಕ್ರಿಯಾಶೀಲತೆಯಲ್ಲಿ ಕೂಡ ಮಾರ್ಪಡಿಸಬೇಕಾದ ತುರ್ತು ಅವಶ್ಯಕತೆ ನಮಗಿದೆ.

**–ಡಾ. ರಾಜೇಂದ್ರ ಚೆನ್ನಿ**

# ಪೂನಾ ಒಪ್ಪಂದದ ಅಪನಿರೂಪಣೆಯ ಅನಾಹುತಗಳು...

ಗಾಂಧಿ ಮತ್ತು ಅಂಬೇಡ್ಕರರನ್ನು ವಿರುದ್ಧ ಕ್ಯಾಂಪುಗಳಲ್ಲಿ ಕಲ್ಪಿಸಿಕೊಂಡ ಜಗಳ ಉದ್ಭವಿಸಿದ್ದೇ ದಲಿತ ನೆಲೆಯಿಂದ, ನಾಡಿನಲ್ಲಿ ದಲಿತ ಚಳವಳಿ ಪ್ರಬಲವಾಗತೊಡಗಿದ ಮೇಲೆ. ಮತ್ತು ಚಳವಳಿಗೆ ಒಡ್ಡಿಕೊಂಡವರಲ್ಲಿ 'ಗಾಂಧಿ ದಲಿತರ ವಿರೋಧಿ' ಅನ್ನುವ ಭಾವನೆ ಹುಟ್ಟಲು ಮುಖ್ಯವಾಗಿ ಅಂಬೇಡ್ಕರ್ ಬೋಧನೆಗಳೇ ಕಾರಣವಾಗಿದ್ದವು ಎಂಬುದೂ ಸತ್ಯ. ಕಾಂಗ್ರೆಸ್ಸಿನಿಂದ ಅಥವಾ ಯಾವುದೇ ಮಹಾತ್ಮರಿಂದ ದಲಿತರ ವಿಮೋಚನೆ ಸಾಧ್ಯವಿಲ್ಲ ಎಂದು ಅಂಬೇಡ್ಕರ್ ಉದ್ದಕ್ಕೂ ಹೇಳಿಕೊಂಡೇ ಬಂದಿದ್ದರು. ಹಾಗೆ ಎಷ್ಟೋ ಮಂದಿ ದಲಿತರು–ಅದರಲ್ಲೂ ಎನ್‌ಜಿಓಗಳಲ್ಲಿ ಗುರುತಿಸಿಕೊಂಡ ಆ್ಯಕ್ಟಿವಿಸ್ಟರು–ಗಾಂಧಿಯನ್ನು ಇಂದಿಗೂ ಖಳನಾಯಕನಂತೆಯೇ ಕಾಣುತ್ತಾರೆ. ಒಮ್ಮೆ ಬಂಗಾರಪೇಟೆಯಲ್ಲಿ ಇಂಥದೊಂದು ಎನ್‌ಜಿಓ ಏರ್ಪಡಿಸಿದ್ದ ಸಭೆಯಲ್ಲಿ ಪಾಲ್ಗೊಂಡಿದ್ದೆ. ಅಲ್ಲಿ ವೇದಿಕೆಗೆ ಬಂದು ಮಾತನಾಡಿದ ಒಬ್ಬ ಯುವಕ 'ಗಾಂಧೀಜಿ, ಬೇಕಾದರೆ ನಾನು ಮುಸ್ಲಿಮರಿಗೆ, ಕ್ರಿಶ್ಚಿಯನ್ನರಿಗೆ ಅಥವಾ ಸಿಕ್ಖರಿಗೆ ಪ್ರತ್ಯೇಕ ಮತಕ್ಷೇತ್ರ ನೀಡಲು ತಯಾರಿದ್ದೇನೆ. ಆದರೆ ದಲಿತರಿಗೆ ಮಾತ್ರ (ಪ್ರತ್ಯೇಕ ಮತಕ್ಷೇತ್ರ ನೀಡಲು) ಎಂದೂ ತಯಾರಿಲ್ಲ ಎಂದು ಘೋಷಿಸಿದ್ದರು' ಎಂದು ಹೇಳಿ ನನ್ನನ್ನು ದಂಗುಬಡಿಸಿದ್ದ...!

ಅಜ್ಞಾನದಿಂದ ಹುಟ್ಟಿದ ಇಂಥ ಅಪಕಲ್ಪನೆಗಳನ್ನು ಸದ್ಯಕ್ಕೆ ಬದಿಗಿಟ್ಟು ನೋಡಿದರೂ, ಗಾಂಧೀಜಿ ಮತ್ತು ಅಂಬೇಡ್ಕರರ ಐತಿಹಾಸಿಕ ಮುಖಾಮುಖಿಯನ್ನು ನೆನೆಸಿಕೊಳ್ಳುವಾಗ ಈ ಪ್ರತ್ಯೇಕ ಮತಕ್ಷೇತ್ರದ ಪ್ರಶ್ನೆಯೇ ಕೇಂದ್ರವಾಗಿದ್ದ ಪೂನಾ ಒಪ್ಪಂದವನ್ನಂತೂ ಮರೆತು ಮಾತನಾಡಲು ಸಾಧ್ಯವಿಲ್ಲ. ಹಾಗೆ ಈ ಪ್ರತ್ಯೇಕ ಮತಕ್ಷೇತ್ರದ ಪ್ರಸ್ತಾಪ ಮೊದಲು ಬಂದಿದ್ದು ಲಂಡನ್ನಿನಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿನಲ್ಲಿ. ಅಲ್ಲಿ ಅಂಬೇಡ್ಕರ್ 'ದಲಿತರಿಗೆ ಶಾಸನ ಸಭೆಗಳಲ್ಲಿ ಮೀಸಲಾತಿಯಿರಬೇಕು ಮತ್ತು ದಲಿತ ಅಭ್ಯರ್ಥಿಗಳನ್ನು ದಲಿತ ಮತದಾರರೇ ಚುನಾಯಿಸುವ ಪ್ರತ್ಯೇಕ ಮತಕ್ಷೇತ್ರವೂ ಇರಬೇಕು' ಎಂಬ ವಾದ ಮುಂದಿಟ್ಟರು. ಅಲ್ಲಿಗೆ ಕಾಂಗ್ರೆಸ್ಸಿನ ಅರ್ಥಾತ್ ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಲನದ ಪ್ರತಿನಿಧಿಯಾಗಿ ಹೋಗಿದ್ದ ಗಾಂಧೀಜಿ ನಿರ್ದಿಷ್ಟ ಸಂಖ್ಯೆಯ ಸ್ಥಾನಗಳ ಮೀಸಲಾತಿಗೆ ತಮ್ಮ ಅಭ್ಯಂತರವಿಲ್ಲವೆಂದೂ, ಆದರೆ ಪ್ರತ್ಯೇಕ ಮತಕ್ಷೇತ್ರದ ಕಲ್ಪನೆಯನ್ನು ತಾವು ಎಂದಿಗೂ ಒಪ್ಪಲು ಸಾಧ್ಯವಿಲ್ಲವೆಂದೂ ಖುದ್ದು ಅಂಬೇಡ್ಕರರಿಗೇ ಸ್ಪಷ್ಟಪಡಿಸಿದ್ದರು. ಆ ಪ್ರತಿಪಾದನೆಗಳ ಹಿಂದಿನ ಕಾಳಜಿಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಈಗಲಾದರೂ–ಇಷ್ಟು ಕಾಲದ ಮೇಲಾದರೂ–ಸಾಧ್ಯವಾಗಬೇಕು.

ಗಾಂಧೀಜಿಯವರ ಪ್ರಾಥಮಿಕ ಗುರಿ–ಪರಕೀಯರ ಆಳ್ವಿಕೆ ವಿರುದ್ಧ ಭಾರತೀಯರನ್ನು ಒಗ್ಗೂಡಿಸಿ ಸ್ವಾತಂತ್ರ್ಯ ಗಳಿಸುವುದಾಗಿತ್ತು. ಇಷ್ಟೇ

ಪ್ರಬಲವಾಗಿ 'ಆ ಸ್ವಾತಂತ್ರ್ಯಕ್ಕೆ ಭಾರತೀಯರು ಅರ್ಹರಾಗಬೇಕು' ಎಂಬ ಕಳಕಳಿಯೂ ಅವರಿಗಿದ್ದುದರಿಂದಲೇ ಅಸ್ಪೃಶ್ಯತೆಯ ನಿವಾರಣೆ ಅವರಿಗೆ ಜೀವನ್ಮರಣದ ಪ್ರಶ್ನೆಯೆಂಬಷ್ಟು ಮುಖ್ಯವಾದದ್ದು. ಗಾಂಧೀಜಿ ತನ್ನನ್ನು ತಾನು ಸನಾತನಿ ಎಂದೂ, ಸಂಪ್ರದಾಯಸ್ಥ ಹಿಂದೂ ಎಂದೂ ಕರೆದುಕೊಂಡರೂ, ತಮ್ಮ ಹನ್ನೆರಡನೇ ವಯಸ್ಸಿನಿಂದಲೇ 'ಒಬ್ಬ ಮನುಷ್ಯ, ಇನ್ನೊಬ್ಬ ಮನುಷ್ಯನನ್ನು ಯಾಕೆ ಮುಟ್ಟಬಾರದು?' ಎಂಬ ಬೀಜ ಪ್ರಶ್ನೆಯನ್ನಿಟ್ಟುಕೊಂಡೇ ಬೆಳೆದರು. ಅದಕ್ಕೇ ಇತರರ ಕಕ್ಕಸ್ಸು ಗುಂಡಿಯನ್ನೂ ಸ್ವಚ್ಛಗೊಳಿಸುವ ಮೂಲಕ ತನ್ನನ್ನು ದಲಿತನನ್ನಾಗಿ ಮಾರ್ಪಡಿಸಿಕೊಂಡರು. ದಕ್ಷಿಣ ಆಫ್ರಿಕಾದಲ್ಲಿ ಅವರು ತಮ್ಮ ಹೆಂಡತಿ ಕಸ್ತೂರ ಬಾ ಮೇಲೆ ಸಿಟ್ಟಿಗೆದ್ದು ಮನೆಯಿಂದಲೇ ಹೊರದೂಡುವಷ್ಟು ಕ್ರುದ್ಧರಾದದ್ದು, ಕಸ್ತೂರ ಬಾ ದಲಿತನೊಬ್ಬನ ಕಕ್ಕಸು ಗುಂಡಿಯನ್ನು ಸ್ವಚ್ಛಗೊಳಿಸಲು ನಿರಾಕರಿಸಿದಾಗಲೇ.



ಮುಂದೆ ಭಾರತಕ್ಕೆ ಮರಳಿ ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿಕೊಂಡ ಹೊಸತರಲ್ಲೇ ವಾರ್ಧಾದಲ್ಲಿ ಅವರು ತಮ್ಮ ಮೊದಲ ಆಶ್ರಮ ಸ್ಥಾಪಿಸಿದರು. ಆನತಿ ದಿನಗಳಲ್ಲೇ ದಲಿತ ಕುಟುಂಬವೊಂದನ್ನು ಆಶ್ರಮದಲ್ಲಿ ಕರೆದು ಇರಿಸಿಕೊಂಡರು. 'ಇಂಥ ಕಂಡು ಕೇಳರಿಯದ ಅತಿರೇಕದಿಂದ' ಹಿಂದೂ ಸಮಾಜ ಕೂಡಲೇ ಭುಗಿಲೇಳುವುದು ಆ ಕಾಲದಲ್ಲಿ ಸಹಜವಾಗಿತ್ತು. ಆಶ್ರಮಕ್ಕೆ ಬೆಂಬಲವಾಗಿದ್ದ ಸಂಪ್ರದಾಯಸ್ಥ ಹಿಂದೂಗಳೆಲ್ಲರೂ ಒಮ್ಮಿಂದೊಮ್ಮೆಲೇ ದುಡ್ಡುಕಾಸಿನ ನೆರವನ್ನು ನಿಲ್ಲಿಸಿಯೇಬಿಟ್ಟರು. ಗಾಂಧಿ ಸುಮ್ಮನಿದ್ದರು. ಅವರ ಸಹಾಯಕರು ಬಂದು ಇನ್ನು ಆಶ್ರಮ ನಡೆಸುವುದು ಕಷ್ಟ, ಹಣವಿಲ್ಲ ಎಂದಾಗಲೂ ಗಾಂಧಿ ಧೃತಿಗೆಡಲಿಲ್ಲ. 'ಎಲ್ಲರೂ ಹೋಗಿ ಹರಿಜನ ಕಾಲನಿಯಲ್ಲಿ ವಾಸ ಮಾಡೋಣ' ಎಂದರು. ಒಂದೆರಡು ದಿನಗಳಲ್ಲೇ ಯಾರೋ ಉದ್ಯಮಿ ಬಂದು ಒಟ್ಟಿಗೇ ಹನ್ನೊಂದು ಸಾವಿರ ರೂಪಾಯಿಗಳನ್ನು(ಆ ಕಾಲದಲ್ಲಿ ಅಗಾಧ ಮೊತ್ತವದು) ಕೊಟ್ಟು ಹೋಗಿದ್ದರಿಂದ ಆಶ್ರಮ ಮುಚ್ಚುವ ಪರಿಸ್ಥಿತಿ ತಪ್ಪಿತು!...

ಆಗೆಲ್ಲ ಅಂಬೇಡ್ಕರ್ ಇನ್ನೂ ಸಾರ್ವಜನಿಕ ಜೀವನವನ್ನು ಪ್ರವೇಶಿಸಿರಲೂ ಇಲ್ಲ ಎಂಬುದನ್ನು ಗಮನಿಸಬೇಕು. ಅಷ್ಟಾದರೂ ಜಾತಿವ್ಯವಸ್ಥೆ ವಿಷಯದಲ್ಲಿ ಗಾಂಧೀಜಿ ನಿಲುವಿನಲ್ಲಿ ಬಹು ಕಾಲ ಗೊಂದಲಗಳಿದ್ದವು. ಮೊದಲು ವರ್ಣ, ಜಾತಿ ಎರಡೂ ಸರಿ ಎಂದು ನಂಬಿದ್ದರು. ಮುಂದಕ್ಕೆ ಜಾತಿ ಸರಿಯಿಲ್ಲ, ಆದರೆ ವರ್ಣವ್ಯವಸ್ಥೆಯಲ್ಲಿ ದೋಷವಿಲ್ಲ ಎಂಬ ನಿಲುವಿಗೆ ಬಂದರು. ಮತ್ತೂ ಮುಂದಕ್ಕೆ ವರ್ಣ, ಜಾತಿ ಯಾವುದೂ ಸರಿಯಿಲ್ಲ ಎಂದು ಹೇಳತೊಡಗಿದರು. ಬರಬರುತ್ತ ತಾನು ಅಂತರ್ಜಾತೀಯ ಮದುವೆಗಳಿಗೆ ಮಾತ್ರ ಹೋಗುವುದು ಎಂದರು. ಆನತಿ ಕಾಲದಲ್ಲೇ ಅಂತರ್ಜಾತೀಯ ಮದುವೆಯಲ್ಲೂ ಒಬ್ಬರು ದಲಿತರಾಗಿದ್ದರೆ ಮಾತ್ರ ತಾವು ಹೋಗುವುದು ಎಂಬ ಷರತ್ತು ಹಾಕತೊಡಗಿದರು! ಗಾಂಧಿ ವ್ಯಕ್ತಿತ್ವದ ವೈಶಿಷ್ಟ್ಯವೇ ಅದು;ನಿರಂತರವಾಗಿ ಅರಳುತ್ತಲೇ ಹೋದದ್ದು. ಆದರೆ ಅಂಬೇಡ್ಕರ್‌ರಿಗೆ ಗಾಂಧೀಜಿ ನಿಲುವನ್ನು 'ಹಾನುಭೂತಿಯಿಂದ ಗ್ರಹಿಸಲು ಈ ಗೊಂದಲವೇ ತೊಡಕಾಗಿರಬಹುದು.

ಇನ್ನುಅಂಬೇಡ್ಕರ್. ಎದೆಯಲ್ಲಿ ಶತಮಾನಗಳ ಅವಮಾನದ ಭಾರ ಹೊತ್ತು, ಜಾತಿ ವ್ಯವಸ್ಥೆಯ ಸಾಮೂಲಾಗ್ರ ಅಧ್ಯಯನವನ್ನೂ ನಡೆಸಿದ್ದ ಅಂಬೇಡ್ಕರ್‌ರಿಗೆ, ಹಿಂದೂ ಧರ್ಮದ ಜೀವಾಳವಾದ ಜಾತಿವ್ಯವಸ್ಥೆಯಲ್ಲಿ ಸಮಾನತೆಗೆ ಎಂದೆಂದಿಗೂ ಅವಕಾಶವಿಲ್ಲವೆಂದು ಮನವರಿಕೆಯಾಗಿತ್ತು. ಆ ಕಾರಣಕ್ಕೇ ಅವರು ಹಿಂದೂಧರ್ಮದ ಕಠೋರ ವಿಮರ್ಶಕರಾಗಿ ಕಡೆಗೆ ಈ ಧರ್ಮದ ಚೌಕಟ್ಟನ್ನೇ ತೊರೆದು ಬೌದ್ಧಧರ್ಮವನ್ನು ಅಪ್ಪಿಕೊಂಡರು .ಭಾರತದ 'ಸಂಸತ್ತು ಸಂವಿಧಾನವನ್ನು ಸ್ವೀಕರಿಸುವ ಸಂದರ್ಭದಲ್ಲಿ 'ಭಾರತದಲ್ಲಿ ಇದೀಗ ರಾಜಕೀಯ ಸಮಾನತೆ ಸಾಧಿಸಲಾಗಿದೆ. ಆದರೆ ಸಾಮಾಜಿಕ ಹಾಗೂ ಆರ್ಥಿಕ ಸಮಾನತೆ ಇನ್ನೂ ದೂರವಿದೆ. ಅದೇ ಸ್ವತಂತ್ರ ಭಾರತದ ಮುಂದಿನ ಅತಿ ದೊಡ್ಡ ಸವಾಲಾಗಲಿದೆ' ಎಂದು ಎಚ್ಚರಿಸಿದ್ದ ಅಂಬೇಡ್ಕರ್ ಮಾತುಗಳಲ್ಲಿ ಕಾಲಜ್ಞಾನಿಯ ಕಾಣ್ಕೆ ಅಡಗಿತ್ತು. ಒಂದು ಕಡೆ, ಒಟ್ಟು ಭಾರತೀಯ ಸಮಾಜವನ್ನೇ ಒಗ್ಗೂಡಿಸಲು ಹೊರಟು, ಆ ಹಾದಿಯಲ್ಲಿ ಸಮಾಜದ 'ಶುದ್ಧೀಕರಣ'ಕ್ಕಾಗಿ ಹಾಗೂ ಸವರ್ಣೀಯರ ಮನಃಪರಿವರ್ತನೆಗಾಗಿ ಸುಧಾರಣಾವಾದಿ ಹೆಜ್ಜೆ ಹಾಕಿದ ಗಾಂಧಿ; ಇನ್ನೊಂದು ಕಡೆ ಆ ಒಗ್ಗಟ್ಟಿನಲ್ಲಿ ನ್ಯಾಯವಿಲ್ಲ ಎಂದು ತಿಳಿದಿದ್ದ ಅಂಬೇಡ್ಕರ್. ಗಾಂಧಿ ಮತ್ತು ಅಂಬೇಡ್ಕರ್, ಸ್ವಾತಂತ್ರ್ಯಆಂದೋಲನದ ಒಡಲಿಂದ ಮೇಲೆದ್ದ ಎರಡು ವಿರಾಟ್ ಸಾಧ್ಯತೆಗಳು. ದೇಶ ತನ್ನ ಪ್ರಖರ ಆತ್ಮನಿರೀಕ್ಷಣೆಯ ಕ್ಷಣದಲ್ಲಿ ಕಂಡುಕೊಂಡ ಎರಡು ಅಂತಿಮ ಪರಿಹಾರಗಳು.

ಚಾರಿತ್ರಿಕವಾಗಿ ಅನಿವಾರ್ಯವಾಗಿದ್ದ ಈ ಇಬ್ಬರ ಮುಖಾಮುಖಿ, ಪೂನಾ ಒಪ್ಪಂದದ ಸಮಯದಲ್ಲಿ ತನ್ನ ಆತ್ಯಂತಿಕ ಬಿಕ್ಕಟ್ಟನ್ನು ಎದುರಿಸಿತು. ಆಗ ಅಂಬೇಡ್ಕರ್ ಮುಂದಿಟ್ಟಿದ್ದ ಪ್ರತ್ಯೇಕ ಮತಕ್ಷೇತ್ರದ ಪ್ರಸ್ತಾಪ ಬ್ರಿಟಿಷರ ಒಡೆದಾಳುವ ನೀತಿಗೆ ಅನುಕೂಲವಾಗಿ ಒದಗಿಬಂತು. ಹಾಗಾಗಿ ಅದಕ್ಕೆ ಕಾನೂನು ರೂಪ ಕೊಡಲು ಸ್ವತಃ ಬ್ರಿಟಿಷ್ ಪ್ರಧಾನಿ ತ್ವರೆಯಿಂದ ಮುಂದಾದರು. ಆಗ ಗಾಂಧೀಜಿ ಪೂನಾದ ಯರವಾಡ ಜೈಲಿನಲ್ಲಿ ಬಂದಿಯಾಗಿದ್ದರು. ವಿಷಯ ತಿಳಿದ ಕೂಡಲೇ ಜೈಲಿನಲ್ಲೇ ಈ ನೀತಿ ವಿರುದ್ಧ ಅಮರಣಾಂತ ನಿರಶನ ಆರಂಭಿಸಿಬಿಟ್ಟರು, ೧೯೩೨ರ ಸೆಪ್ಟೆಂಬರ್ ೨೦ರಂದು. ಸಹಜವಾಗಿಯೇ ಅಂಬೇಡ್ಕರರಿಗೆ ಇದು ದಲಿತ ವಿರೋಧಿ ಕ್ರಮವಾಗಿ ಕಂಡಿತು. ಗಾಂಧೀಜಿ ವಿರುದ್ಧ ದಲಿತರಲ್ಲಿ ಇಂದಿಗೂ ಇರುವ ಅನುಮಾನಗಳಿಗೆ ಪ್ರಧಾನವಾಗಿ ಈ ಘಟನೆಯೇ ಕಾರಣ. ಗಾಂಧಿ ಅಂಬೇಡ್ಕರ್ ನಡುವೆ ಆ ಕಾಲದ ಘಟಾನುಘಟಿಗಳೆಲ್ಲ ಮಧ್ಯಸ್ಥಿಕೆ ವಹಿಸಿ ಸತತವಾಗಿ ಮಾತುಕತೆಗಳು ನಡೆದು ಕೊನೆಗೆ ಪ್ರತ್ಯೇಕ ಮತಕ್ಷೇತ್ರದ ಪ್ರಸ್ತಾಪ ಬಿದ್ದು ಹೋಗಿ, ಶೇಕಡಾ ೧೮ರ ಮೀಸಲಾತಿ ತೀರ್ಮಾನ ಒಡಮೂಡಿ, ಅದೇ ಪೂನಾ ಒಪ್ಪಂದವೆಂದು ಖ್ಯಾತವಾಯಿತು. ವಿಷಾದದ ಸಂಗತಿಯೆಂದರೆ, ಪ್ರತ್ಯೇಕ ಮತಕ್ಷೇತ್ರದ ಮೂಲಕವೇ ತಮ್ಮ ವಿಮೋಚನೆ ಶೀಘ್ರವಾಗಿ ಕೈಗೂಡುತ್ತಿತ್ತು ಎಂದು ನಂಬಿದ ದಲಿತರು ಇಂದಿಗೂ ಗಾಂಧೀಜಿ ದೂಷಣೆಯಲ್ಲಿ ಮುಳುಗಿದ್ದಾರೆ. ಆದರೆ 'ಮುಸ್ಲಿಮರು, ಕ್ರೈಸ್ತರು ಅಥವಾ ಸಿಕ್ಖರು ಶಾಶ್ವತವಾಗಿ ಮುಸ್ಲಿಮರು, ಕ್ರೈಸ್ತರು, ಸಿಕ್ಖರಾಗೇ ಉಳಿಯಲಿ;ಆದರೆ ಅಸ್ಪೃಶ್ಯರು ಶಾಶ್ವತವಾಗಿ ಅಸ್ಪೃಶ್ಯರಾಗಿಯೇ

'...ಅವರನ್ನು ಮುಖತಃ ಭೇಟಿಯಾಗಿ ಮಾತನಾಡಿದಾಗ ನನ್ನ ಮತ್ತೆ ಅವರ ನಡುವೆ ಎಷ್ಟೊಂದು ಸಾಮ್ಯಗಳಿವೆ ಎಂಬುದು ನನ್ನ ಅರಿವಿಗೆ ಬಂದು ನಾನು ಆಶ್ಚರ್ಯ, ಪರಮಾಶ್ಚರ್ಯಗೊಂಡೆ. ಮಹಾತ್ಮಾಜಿ ಈ ಸಂದರ್ಭದಲ್ಲಿ ದುಂಡು ಮೇಜಿನ ಪರಿಷತ್ತಿನ ಸಂದರ್ಭದಲ್ಲಿದ್ದುದಕ್ಕಿಂತ ಎಷ್ಟು ಭಿನ್ನರಾಗಿದ್ದರೆಂದರೆ, ಅವರು ತಮ್ಮ ಶಿಷ್ಯರಿಗಿಂತ ನನ್ನ ಕಡೆಗೇ ಹೆಚ್ಚು ಒಲವು ತೋರಿದ್ದಾರೆ... ಆ ಮೂಲಕ ನನ್ನನ್ನು ದೊಡ್ಡ ಸಂಕಟದಿಂದ ಪಾರು ಮಾಡಿದ್ದಾರೆ. ಹಳೆಯದೆಲ್ಲ ಹಳೆಯದೇ. ಹಾಗಾಗಿ ಅದನ್ನೆಲ್ಲ ಮರೆತು ನಾನು ಇಂದು ಸಂತೋಷದಿಂದ ಈ ಒಪ್ಪಂದಕ್ಕೆ ಸಹಿ ಹಾಕುತ್ತಿದ್ದೇನೆ.'

**–ಡಾ. ಬಿ.ಆರ್. ಅಂಬೇಡ್ಕರ್ (ಪೂನಾ ಒಪ್ಪಂದಕ್ಕೆ ಸಹಿ ಹಾಕಿದ ನಂತರ ಸುದ್ದಿಗೋಷ್ಠಿಯಲ್ಲಿ)**

ಉಳಿಯಬೇಕೇ?' ಎಂಬ ಪ್ರಶ್ನೆಯೆತ್ತಿದ್ದ ಗಾಂಧೀಜಿಗೆ ಗೊತ್ತಿತ್ತು, ಪ್ರತ್ಯೇಕ ಮತಕ್ಷೇತ್ರದ ಬೇಡಿಕೆ ಈಡೇರಿದರೆ ದಲಿತರು ಶಾಶ್ವತವಾಗಿ ಸಮಾಜದ ಪ್ರತ್ಯೇಕ ಅಂಗವೇ ಆಗಿ ಉಳಿದುಬಿಡುತ್ತಿದ್ದರು ಎಂದು. ಅದನ್ನು ತಪ್ಪಿಸಲೆಂದೇ ಅವರು ತಮ್ಮ ಪ್ರಾಣವನ್ನೇ ಪಣಕ್ಕೆ ಒಡ್ಡಿದ್ದು.

ಅಂಬೇಡ್ಕರ್ ಹಿಂದೂ ಧರ್ಮದಲ್ಲಿನ ಜಾತಿ ಪದ್ಧತಿಯನ್ನು ಒಂದಲ್ಲ ಒಂದು ದಿನ ನಾಶಪಡಿಸಬಹುದೆಂಬ ನನ್ನ ಆತ್ಮವಿಶ್ವಾಸದ ಹಾಗೂ ನೆಮ್ಮದಿಯ ಪ್ರತೀಕವಾಗಿದ್ದರು. ಮಹಾ ವಿದ್ವಾಂಸರೂ ಮಹಾ ಪ್ರಾಮಾಣಿಕರೂ ಬಹು ಸ್ವತಂತ್ರ ಬುದ್ಧಿಯವರೂ ಆಗಿದ್ದ ಸಮಗ್ರ ವ್ಯಕ್ತಿತ್ವದ ಅಂಬೇಡ್ಕರ್ ಬಾಹ್ಯ ಜಗತ್ತಿನ ಎದುರು ಭಾರತದ ಪ್ರತೀಕವಾಗಿ ನಿಲ್ಲ ಬಲ್ಲವರಾಗಿದ್ದರು. ಆದರೆ ಅವರ ಮನಸ್ಸು ಕಹಿಯಾಹಿತ್ತು ಮತ್ತು ಯಾವಾಗಲೂ ಅವರು ಪ್ರತ್ಯೇಕತೆಯನ್ನು ಬಯಸುತ್ತಿದ್ದರು. ದಲಿತೇತರ ನಾಯಕರಾಗಲು ಅವರು ನಿರಾಕರಿಸಿದರು. ಕಳೆದ ಐದು ಸಾವಿರ ವರ್ಷಗಳಲ್ಲಿ ದಲಿತರು ಅನುಭವಿಸಿರುವ ನೋವು ಮತ್ತು ಅವಮಾನಗಳ ಅರಿವು ನನಗಿದೆ. ಆದರೆ ಅಂಬೇಡ್ಕರರಂತಹ ಅಪೂರ್ವ ವ್ಯಕ್ತಿತ್ವದ ನಾಯಕ ಇದನ್ನು ಮೀರಬಲ್ಲರೆಂದು ಆಶಿಸಿದ್ದೆ. ನನ್ನ ಆಶೆ ಈಡೇರುವುದರೊಳಗೆ ಅವರನ್ನು ಸಾವು ಒಯ್ಯಿದೆ.

**–ಡಾ. ಲೋಹಿಯಾ** (ಮಧು ಲಿಮಯೆಗೆ ಬರೆದ ಪತ್ರದಲ್ಲಿ)

ಇಲ್ಲಿ ಇದಕ್ಕಿಂತ ಕುತೂಹಲಕಾರಿ ಸಂಗತಿಯೊಂದಿದೆ. ಪೂನಾದಲ್ಲಿ ಗಾಂಧೀಜಿ ಕೈಗೊಂಡ ಉಪವಾಸ ಸತ್ಯಾಗ್ರಹ 'ದಲಿತ ವಿರೋಧಿ' ಎಂದು ಇಂದಿನ ದಲಿತರು ಎಷ್ಟೇ ವಾದಿಸಿದರೂ, ಆ ಕಾಲದ ಸವರ್ಣೀಯ ಭಾರತ, ಗಾಂಧೀಜಿ ಅಮರಣಾಂತ ನಿರಶನದ ಮೂಲಕ ಪ್ರಾಣತ್ಯಾಗಕ್ಕೆ ಸಿದ್ಧರಾಗಿದ್ದು ಅಸ್ಪೃಶ್ಯತಾ ನಿವಾರಣೆಗಾಗಿಯೇ ಎಂದು ಗ್ರಹಿಸಿತ್ತು! ಅದಕ್ಕೇ ಸೆಪ್ಟೆಂಬರ್ ೨೦ರಿಂದ ೨೬ರವರೆಗೆ ನಡೆದ ಉಪವಾಸದುದ್ದಕ್ಕೂ ದೇಶಾದ್ಯಂತ ಸಾವಿರಾರು ದೇವಸ್ಥಾನಗಳನ್ನು ದಲಿತರ ಪ್ರವೇಶಕ್ಕೆ ಮುಕ್ತಗೊಳಿಸುವ ಸ್ವಯಂಪ್ರೇರಿತ ಆಂದೋಲನವೇ ನಡೆದುಹೋಯಿತು. ಉಪವಾಸ ಅಂತ್ಯಗೊಂಡ ಕೂಡಲೇ ಸೆಪ್ಟೆಂಬರ್ ೨೭ರಿಂದ ಅಕ್ಟೋಬರ್ ೨ರವರೆಗೆ ಇಡೀ ದೇಶ 'ಅಸ್ಪೃಶ್ಯತಾ ವಿರೋಧಿ ಸಪ್ತಾಹ'ವನ್ನಾಗಿ ಆಚರಿಸಿತು. ಗುರುದೇವ ರವೀಂದ್ರನಾಥ ಟಾಗೂರರಿಂದ ಹಿಡಿದು ನಿಮ್ನ ವರ್ಗಗಳ ನೇತಾರ ರಾವ್ ಬಹಾದೂರ್ ಎಂ.ಸಿ. ರಾಜಾ ಅವರವರೆಗೆ ಎಲ್ಲ ಮುಖಂಡರೂ, 'ಗಾಂಧೀಜಿ ಉಪವಾಸ ಅಸ್ಪೃಶ್ಯತೆಯ ಅಡಿಪಾಯವನ್ನೇ ಅಲ್ಲಾಡಿಸಿದೆ' ಎಂದೇ ಬಿಂಬಿಸಿದರು...


ಈ ಗಾಂಧಿ ಅಂಬೇಡ್ಕರ್ ವಿವಾದದಲ್ಲಿ ದೇವನೂರ ಮಹಾದೇವ ಒಂದು ಅರ್ಥಪೂರ್ಣ ರೂಪಕ ನೀಡಿದ್ದರು. 'ಗಾಂಧೀಜಿ ಹಿಂದೂ ಧರ್ಮ ಎಂಬ ಕಟ್ಟಡದ ಒಳಗೆ ರಿಪೇರಿ ಕೆಲಸದಲ್ಲಿ ನಿರತರಾಗಿದ್ದರೆ, ಅಂಬೇಡ್ಕರ್ ಹೊರಗಿನಿಂದ ಕಲ್ಲು ತೂರುತ್ತಿದ್ದರು. ಅದರಲ್ಲಿ ಒಂದೆರಡು ಕಲ್ಲು ಗಾಂಧೀಜಿ ಮೇಲೂ ಬಿದ್ದಿರಬಹುದು..'

ದಲಿತರ ವಿಮೋಚನೆಗೆ ದಲಿತರ ಸ್ವಾಭಿಮಾನ ಚಳವಳಿ ಎಷ್ಟು ಮುಖ್ಯವೋ, ಸವರ್ಣೀಯರ ಪಶ್ಚಾತ್ತಾಪವೂ ಅಷ್ಟೇ ಮುಖ್ಯ ಎಂಬುದನ್ನು ಯಾರು ಅಲ್ಲಗಳೆಯಲು ಸಾಧ್ಯ? ಈಗ ಈ ಕಾಲದಲ್ಲಿ ನಿಂತ ನಾವು ಯಾವ ನಿಲುವು ತಳೆಯಬಹುದು? ನನಗನಿಸುವುದು– ಅಂಬೇಡ್ಕರರನ್ನು ಒಡಲಲ್ಲಿ ಧರಿಸಿಕೊಂಡ 'ಗಾಂಧಿಯೇ ನಮಗೆದಿಕ್ಕಾಗಬೇಕು. ಅಷ್ಟಕ್ಕೂ ಗಾಂಧೀಜಿ ಕೂಡ ಅಂಬೇಡ್ಕರರಿಂದ ಕಲಿತಿದ್ದರು. ಪೂನಾ ಒಪ್ಪಂದವಾದ ೧೯೩೨ರಲ್ಲೇ ಗಾಂಧಿ ಹೊಸ ಪತ್ರಿಕೆ ಆರಂಭಿಸಿ ಅದಕ್ಕೆ 'ಹರಿಜನ' ಎಂದು ಹೆಸರಿಟ್ಟರು!

ಈಗ ಅವರಿಬ್ಬರಿಂದಲೂ ಕಲಿಯಲು ನಮಗ್ಯಾರು ಅಡ್ಡಿ?

**–ಎನ್.ಎಸ್.ಶಂಕರ್**

## ಮಾತುಕತೆ: ನಮ್ಮದು ಎಡಕ್ಕೆ ವಾಲುವ ನಾಯಕತ್ವ: ಅರವಿಂದ ಕೇಜ್ರಿವಾಲ್



**ಅಣ್ಣಾ ಹಜಾರೆ ಆಂದೋಲನದ ಬಗ್ಗೆ ಅನೇಕ ಪ್ರಶ್ನೆಗಳನ್ನು ಎತ್ತಲಾಗಿದೆ. ಆ ಮೂಲಕ ಆ ಆಂದೋಲನದ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸಲಾಗಿದೆ; ಪ್ರಶ್ನಿಸಲಾಗುತ್ತಿದೆ. ಅಣ್ಣಾ ಮತ್ತು ಅವರ ಸಹಚರರು ಎಲ್ಲರ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಟ್ಟ ಮೇಲಷ್ಟೇ ತಮ್ಮ ಆಂದೋಲನವನ್ನು ಆರಂಭಿಸಬೇಕಿತ್ತೆಂಬ ವಿಚಿತ್ರ ಆಗ್ರಹ ಈ ಪ್ರಶ್ನೆಗಳ ಹಿಂದಿದೆ. ನವ ಕ್ರಾಂತಿಕಾರಿಗಳ ಆರಾಧ್ಯದೈವವೇ ಆಗಿರುವ ಅರುಂಧತಿ ರಾಯ್ ಇತ್ತೀಚೆಗೆ 'ಹಿಂದೂ' ಪತ್ರಿಕೆಯಲ್ಲಿ ಅಣ್ಣಾ ಆಂದೋಲನದ ಮೇಲೆ ಹಲವು ದುರುದ್ದೇಶಪೂರ್ವಕವೆನ್ನಿಸುವ ಆರೋಪಗಳನ್ನು ಮಾಡಿ ಕೆಟ್ಟ ಅಭಿರುಚಿಯ ಲೇಖನವೊಂದನ್ನು ಬರೆದದ್ದನ್ನು ಇಲ್ಲಿ ಮುಖ್ಯವಾಗಿ ನೆನಪಿಸಿಕೊಳ್ಳಬಹುದು.**

**ಆದರೆ ಒಂದು ಜ್ವಲಂತ ಸಮಸ್ಯೆಯನ್ನು ಮುಂದಿಟ್ಟುಕೊಂಡು ಒಂದು ದೊಡ್ಡ ಆಂದೋಲನವನ್ನು ಸಂಘಟಿಸುವಾಗ ಇತರರ ಪ್ರಶ್ನೆಗಳನ್ನು, ಅನುಮಾನಗಳನ್ನು ಊಹಿಸಿಕೊಂಡು ಆ ಆಂದೋಲನದ ನಾಯಕತ್ವ ಉತ್ತರಗಳನ್ನು ನೀಡುತ್ತಾ ಹೋಗಲಾರದು. ಆದರೆ ಅವನ್ನು ಗಮನಿಸುತ್ತಿರಬೇಕಷ್ಟೆ. ಹಾಗೆ ಗಮನಿಸಿ, ಆ ಎಲ್ಲ ಪ್ರಶ್ನೆ–ಅನುಮಾನಗಳಿಗೆ ಆಂದೋಲನದ ಪರವಾಗಿ ಅದರ ಪ್ರಮುಖ ವಕ್ತಾರ ಅರವಿಂದ ಕೇಜ್ರಿವಾಲ್ ('ಔಟ್‌ಲುಕ್' ಪತ್ರಿಕೆಗಾಗಿ) ನೀಡಿದ ಉತ್ತರಗಳು ಇಲ್ಲಿವೆ. ಈ ಉತ್ತರಗಳನ್ನು ಇತ್ತೀಚೆಗೆ ಸ್ವತಃ ಅಣ್ಣಾ ಹಜಾರೆಯವರು ರಾಷ್ಟ್ರ ಮಟ್ಟದ ಎರಡು ಟಿ.ವಿ. ವಾರ್ತಾವಾಹಿನಿಗಳಿಗೆ ನೀಡಿದ ಸುದೀರ್ಘ ಸಂದರ್ಶನಗಳಲ್ಲಿ ಇಂತಹುದೇ ಅನೇಕ ಪ್ರಶ್ನೆ–ಅನುಮಾನಗಳಿಗೆ ನೀಡಿದ ಉತ್ತರಗಳ ಜೊತೆ ಜೋಡಿಸಿಕೊಂಡು ಅರ್ಥ ಮಾಡಿಕೊಳ್ಳಬಲ್ಲವರಿಗೆ ಅಣ್ಣಾ ಆಂದೋಲನದ ಬಗ್ಗೆ ಅದರ ವಿರೋಧಿಗಳು ಮಾಡುತ್ತಿರುವ ಅಪಪ್ರಚಾರ ಎಷ್ಟು ಆಧಾರರಹಿತ ಮತ್ತು ಅಸಮರ್ಥನೀಯ ಎಂಬುದು ಸ್ಪಷ್ಟವಾದೀತು.–ಸಂ.**

**ಅಣ್ಣಾ ಆಂದೋಲನ ಒಂದು ರಾಜಕೀಯ ಚಳುವಳಿಯಾಗಿ ಬೆಳೆಯುವ ಸಾಧ್ಯತೆ ಇದೆಯಾ?**

ನಾವು ಒಂದು ರಾಜಕೀಯ ಶಕ್ತಿಯೇ. ಆದರೆ ಪ್ರಜಾಪ್ರಭುತ್ವವೆಂದರೆ ಚುನಾವಣೆ ಮತ್ತು ರಾಜಕೀಯ ಪಕ್ಷಗಳು ಎಂಬರ್ಥದಲ್ಲಲ್ಲ. ಪ್ರಜಾಪ್ರಭುತ್ವವೆಂದರೆ ಮೂಲತಃ ದಿನವಹಿ ಆಡಳಿತದಲ್ಲಿ ಜನತೆಯ ಭಾಗವಹಿಸುವಿಕೆ ಎಂದರ್ಥ. ಮುಂದಿನ ಚುನಾವಣೆಗಳಲ್ಲಿ ನಾವು ಯಾವುದೇ ಪಕ್ಷವನ್ನು ಬೆಂಬಲಿಸುವುದಿಲ್ಲ. ಆದರೆ ನಾವು ಎತ್ತಿರುವ ಪ್ರಶ್ನೆಗಳು ಚುನಾವಣಾನಾ ವಿಷಯಗಳನ್ನಾಗಿ ಮಾಡುತ್ತೇವೆ. ಆ ಮೂಲಕ ವ್ಯವಸ್ಥೆಯನ್ನು ಬದಲಾಯಿಸುವ ಪ್ರಯತ್ನ ಮಾಡುತ್ತೇವೆ.

**ನಿಮಗೆ ರಾಜಕೀಯ ತತ್ವದ ಒಲವು ಇದೆಯಾ?**

ಈ ಆಂದೋಲನದಲ್ಲಿ ಭಾಗವಹಿಸಿದ ಎಲ್ಲರ ಪರವಾಗಿ ನಾನು ಮಾತನಾಡಲಾರೆನಾದರೂ, ನಾಯಕತ್ವದಲ್ಲಿರುವ ಜನರ ಬಗ್ಗೆ ಹೇಳಬಲ್ಲೆ. ಈ ನಾಯಕತ್ವದಲ್ಲಿ ಕೋಮುವಾದಿ ಹಿನ್ನೆಲೆಯ ಯಾರೂ ಇರಲಾರರು. ಇರಲು ಸಾಧ್ಯವೂ ಇಲ್ಲ. ನಮ್ಮ ಸಂಚಾಲಕ ಗುಂಪಿನಲ್ಲಿ ಸುಮಾರು ೨೫ ಜನರಿದ್ದಾರೆ

ಅವರಲ್ಲಿ ಬಹುಪಾಲು ಜನ ರಾಜಕೀಯವಾಗಿ ಮಧ್ಯದಿಂದ ಎಡಕ್ಕೆ ವಾಲುವಂತಹವರು.

**ಕೆಲವರು ನಿಮ್ಮ ಆಂದೋಲನವನ್ನು ಆರೆಸ್ಸೆಸ್ ಪಿತೂರಿ ಎಂದು ಹೇಳುವರಲ್ಲ?**

ಅದು ನನಗೆ ಗೊತ್ತಿದೆ. ಅರುಣಾ ರಾಯ್ ಗುಂಪಿನ ಒಬ್ಬರು ನನ್ನ ತಂದೆ ಆರೆಸ್ಸೆಸ್‌ನ ಪದಾಧಿಕಾರಿಯಾಗಿದ್ದಾರೆ ಮತ್ತು ಆದ್ವಾನಿಯವರಿಗೆ ಆಪ್ತರಾಗಿದ್ದಾರೆ ಎಂದು ಲೇಖನವೊಂದನ್ನು ಬರೆದಿದ್ದಾರೆ. ಇದು ಅಸಹ್ಯ... ಶುದ್ಧ ಸುಳ್ಳಿನ ಕಂತೆ! ವಿಹಿಂಪ ಮತ್ತು ಆರೆಸ್ಸೆಸ್, ತಮ್ಮ ಕಾರ್ಯಕರ್ತರ ಸೇವೆ ಬಳಸಿಕೊಂಡು ಅಣ್ಣಾ ನಿರಶನದ ಬೆಂಬಲಕ್ಕೆ ಬಂದಿದ್ದ ಜನರಿಗೆ ಅನ್ನ–ನೀರುಗಳ ಪೂರೈಕೆ ಮಾಡಿದ್ದಾಗಿ ಹೇಳಿಕೊಳ್ಳುತ್ತಿರಬಹುದು. ಈ ಆಂದೋಲನವನ್ನು ಬಳಸಿಕೊಳ್ಳುವ ಕೆಲವು ಶಕ್ತಿಗಳು ಪ್ರಯತ್ನಿಸುತ್ತಿರಬಹುದು; ಅದಕ್ಕೆ ನಮ್ಮ ಸಂಬಂಧವಿಲ್ಲ. ಆದರೆ ಒಂದಂತೂ ಸ್ಪಷ್ಟಪಡಿಸಬಯಸುವೆ. ಕೋಮುವಾದಿ ಶಕ್ತಿಗಳಿಗೆ ಇಲ್ಲಿ ಜಾಗವಿಲ್ಲ.

**ಕೆಲವು ದಲಿತ ಮತ್ತು ಹಿಂದುಳಿದ ವರ್ಗಗಳ ರಾಜಕಾರಣಿಗಳು ನಿಮ್ಮ ಆಂದೋಲನ ಕೆಳಜಾತಿಗಳಿಂದ ರಾಜಕೀಯ ಶಕ್ತಿಯನ್ನು ಕಸಿದುಕೊಳ್ಳುವ ಪಿತೂರಿಯೇ ಆಗಿದೆ ಎಂದು ಹೇಳುತ್ತಿದ್ದಾರಲ್ಲಾ?**

ಸ್ಥಾಪಿತ ವ್ಯವಸ್ಥೆಯ ಅಧಿಕಾರ ಕೇಂದ್ರಗಳು ತಮ್ಮ ಅಧಿಕಾರ ಕಡಿಮೆಯಾಗುತ್ತಾ, ಅದು ಜನತೆಗೆ ವರ್ಗಾವಣೆಯಾಗುತ್ತಿರುವ ಬಗ್ಗೆ ಆತಂಕಿತರಾಗುತ್ತಿರುವುದು ನಮ್ಮ ಪ್ರಕಾರ ಒಳ್ಳೆಯ ಸೂಚನೆಯೇ. ತಮಗೆ ಬೇಕಾದ ಚಪ್ಪಲಿ ತರಿಸಲು ವಿಶೇಷ ವಿಮಾನವೊಂದನ್ನು ಮುಂಬೈಗೆ ಕಳಿಸಿದರೆಂಬ ವರದಿಯನ್ನು *ವಿಕಿಲೀಕ್ಸ್* ಬಹಿರಂಗಪಡಿಸಿದ್ದನ್ನು ಇಷ್ಟಪಡದೆ ಮಾಯಾವತಿ, ಅದರ ಮಾಲಿಕ ಅಸ್ಸಾಂಜ್‌ರನ್ನು ದಲಿತ ವಿರೋಧಿ ಎಂದು ಕರೆದರು! ನಿಮ್ಮ ಬಳಿ ಸೂಕ್ತ ಉತ್ತರವಿರದಿದ್ದಲ್ಲಿ ಅಥವಾ ನಿಮ್ಮ ಅಧಿಕಾರ ಕೇಂದ್ರಗಳನ್ನು ಹೊಡೆದುರುಳಿಸಲು ಯತ್ನಿಸಿದಲ್ಲಿ ಅದನ್ನು ದಲಿತ ವಿರೋಧಿ ಎಂದು ಸುಲಭವಾಗಿ ಕರೆದುಬಿಡಬಹುದು.

**ಇನ್ನು ನಿಮ್ಮ ಮತ್ತು ಅರುಣಾ ರಾಯ್ ಗುಂಪಿನ ಭಿನ್ನಾಭಿಪ್ರಾಯಗಳ ಬಗ್ಗೆ ಹೇಳುವುದಾದರೆ, ಅದು ಅಹಂಕರಗಳ ಸಂಘರ್ಷದಂತೆ ಕಾಣುತ್ತದಲ್ಲ?**

ನಾವು ನಮ್ಮ ಮಸೂದೆಯನ್ನು ನಮ್ಮ ಜಾಲತಾಣದಲ್ಲಿ ಪ್ರಕಟಿಸಿ ಮೂರು ಸಾವಿರ ಪ್ರತಿಸ್ಪಂದನ ಪಡೆದು ಅದರ ಆಧಾರದ ಮೇಲೆ ಈ ಜನಪಾಲ ಮಸೂದೆಯ ಕರಡನ್ನು ಸಿದ್ಧಪಡಿಸಿದ್ದೇವೆ, ಅರುಣಾಜಿ ಅವರೊಂದಿಗೆ ನಾವೆಷ್ಟು ಬಾರಿ ಸಂವಾದ ನಡೆಸಲು ಯತ್ನಿಸಿದ್ದೇವೆ! ಕುಲದೀಪ ನಯ್ಯಾರ್‌ರ ಮಧ್ಯಸ್ಥಿಕೆಯಲ್ಲಿ ನಡೆದ ಪ್ರಯತ್ನವೂ ವಿಫಲಗೊಂಡಿತು. ಕೇಜ್ರಿವಾಲ್ ಇದ್ದರೆ ತಾನು ಮಾತುಕತೆಗೆ ಸಿದ್ಧವಿಲ್ಲವೆಂದು ಅವರು ಹೇಳುತ್ತಾರೆ. ನಮ್ಮ ತಂಡದ ಇತರರು ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದಾಗ ಅವರು ನಮ್ಮ ಮಸೂದೆಯನ್ನು ಅತ್ಯುತ್ತಮ ಎಂದು ವರ್ಣಿಸಿದರು. ಆದರೆ ಅಣ್ಣಾ ಹಜಾರೆ ನಿರಶನ ಆರಂಭಿಸಿದ ನಂತರ ಅವರ ಆರೋಗ್ಯ ವಿಚಾರಿಸಲು ಬಂದು ಹೋದ ನಂತರ ಅರುಣಾಜಿ ಜನಲೋಕಪಾಲ ಮಸೂದೆಯನ್ನು ಪೆಡಂಭೂತ ಎಂದು ವರ್ಣಿಸುತ್ತಾರೆ ಎಂದರೆ ಏನು ಹೇಳುವುದು? ಅವರ ಗುಂಪು ಎಷ್ಟು ಜನರೊಂದಿಗೆ ಅಥವಾ ಸಂಸ್ಥೆಗಳೊಂದಿಗೆ ಸಮಾಲೋಚಿಸಿ ಮಸೂದೆಯನ್ನು ಸಿದ್ಧಪಡಿಸಿದ್ದಾರೆ ಎಂದು ನಾವು ಕೇಳಬಹುದೇ? ಸರ್ಕಾರದ ಮಸೂದೆ ತಯಾರಾದದ್ದಯ ಹೇಗೆ? ಐವ್ವರು ಮಂತ್ರಿಗಳಿಂದ! ನಮ್ಮ ಮೇಲೆ ಪ್ರಜಾಪ್ರಭುತ್ವ ವಿರೋಧಿ ಅಪಾದನೆ ಹೊರಿಸುವವರು ಎಷ್ಟು ಪ್ರಜಾಪ್ರಭುತ್ವವಾದಿಗಳಾಗಿದ್ದಾರೆ ನೀವೇ ತೀರ್ಮಾನಿಸಿ!

ನಾವೀಗ ಗೆದ್ದಿದ್ದೇವೆ ಎಂದು ಹೇಳಿಕೊಳ್ಳುತ್ತಿಲ್ಲ. ಇನ್ನೂ ಕೆಲಸವಿದೆ. ಸಂಸತ್ತಿನ ಸ್ಥಾಯಿ ಸಮಿತಿಗೆ ನಮ್ಮ ಅಂತಿಮ ಕರಡನ್ನು ಪ್ರಸ್ತುತಪಡಿಸುವ ಮುನ್ನ ಮತ್ತೆ ಎಲ್ಲರೊಂದಿಗೆ ಮಾತುಕತೆ ನಡೆಸುವೆವು.

**ನಿಮ್ಮ ಮೊದಲ ಎನ್.ಜಿ.ಓ. *ಪರಿವರ್ತನ್* ಅನುದಾನ ಆಧಾರಿತ ಮಾದರಿಯದು. ನಂತರ *ಕಬೀರ್* ಎಂಬ ಇನ್ನೊಂದು ಎನ್.ಜಿ.ಓ. ತಲೆ ಎತ್ತಿ ಫೋರ್ಡ್ ಪ್ರತಿಷ್ಠಾನದಿಂದ ಬೃಹತ್ ಮೊತ್ತದ ಅನುದಾನವನ್ನು ಪಡೆಯಲಾರಂಭಿಸಿದೆಯಲ್ಲಾ?**

*ಕಬೀರ್*‌ನ ಸಂಚಾಲಕತ್ವ ಮನೀಶ್ ಸಿಸೋಡಿಯಾದ್ದು. ನಾವಿಬ್ಬರೂ ಆಂದೋಲನದಲ್ಲಿ ನಿಕಟವಾಗಿ ಕೆಲಸ ಮಾಡುವೆವಾದರೂ, ಇವು ಪ್ರತ್ಯೇಕ ಎನ್.ಜಿ.ಓ.ಗಳು. ಆದ್ದರಿಂದ ನಿಮ್ಮ ಪ್ರಶ್ನೆಗೆ ಮನೀಶ್ ಉತ್ತರಿಸಬೇಕು.(**ಮನೀಶ್ ಸಿಸೋಡಿಯಾ:** ನಾನು ಮೊದಲಿಗೆ *ಜೀ* ವಾತಾ ವಾಹಿನಿಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಅದನ್ನು ಬಿಟ್ಟ ಮೇಲೆ ಮಾಹಿತಿ ಹಕ್ಕು ಚಳುವಳಿ ಪ್ರಚಾರಕಾರ್ಯಕ್ರಮಕ್ಕಾಗಿ ಮತ್ತು ಅದರ ಬಗ್ಗೆ ಸಾಕ್ಷ್ಯಚಿತ್ರಗಳನ್ನು ಮಾಡಲು ಅನುದಾನ ಪಡೆದೆ. ನಮ್ಮ ಸಂಸ್ಥೆ ೨೦೦೫ ಮತ್ತು ೨೦೦೭ರಲ್ಲಿ ಅನುದಾನ ಪಡೆಯಿತು. ಈ ಯೋಜನೆ ೨೦೦೮–೧೦ಕ್ಕೆ ಮುಗಿದಿದೆ. ಈಗಲೂ ಅನುದಾನ ಮಂಜೂರಾಗಿದೆಯಾದರೂ ನಾವು ಅದನ್ನು ಸ್ವೀಕರಿಸದಿರಲು ನಿರ್ಧರಿಸಿದ್ದೇವೆ)

**ಯಾವ ಬಗೆಯ ಅನುದಾನ ಪಡೆಯಬೇಕು ಎಂಬ ಬಗ್ಗೆ ಇನ್ನಷ್ಟು ಸ್ಪಷ್ಟತೆ ಅಗತ್ಯವಿದೆಯೆಂದು ನಿಮಗೆ ಅನ್ನಿಸಿಲ್ಲವೇ? ವಾಣಿಜ್ಯ ಸಂಸ್ಥೆಗಳಿಂದ ಹಣ ಪಡೆಯುವುದರಿಂದ ನೀವು ಅವುಗಳ ಒತ್ತಡಕ್ಕೆ ಒಳಗಾಗುವ ಸಾಧ್ಯತೆಗಳಿವೆಯಲ್ಲವೇ?**

ಈ ಪ್ರಶ್ನೆಯನ್ನು ಕೇಳಿದ್ದರಿಂದ ನನಗೆ ಸಂತೋಷವಾಗಿದೆ. ನನಗೆ ದೊರೆತ *ಮ್ಯಾಗ್ಸೆಸೆ* ಪ್ರಶಸ್ತಿಯ ಹಣದಿಂದ ನಾನು ೨೦೦೬ರಲ್ಲಿ ಸಾರ್ವಜನಿಕ ಹಿತಾಸಕ್ತಿ ಸಂಶೋಧನಾ ಪ್ರತಿಷ್ಠಾನವನ್ನು ಆರಂಭಿಸಿದೆ. ಈ ಪ್ರತಿಷ್ಠಾನದಿಂದ ಮಾಹಿತಿ ಹಕ್ಕು ಕಾಯಿದೆ ಆಂದೋಲನಕ್ಕೆ, ರಾಜಕೀಯ ವಿಕೇಂದ್ರೀಕರಣ ಆಂದೋಲನವಾದ 'ಸ್ವರಾಜ್ ಆಂದೋಲನ'ಕ್ಕೆ ಮತ್ತು ಆಡಳಿತ ಸಮಸ್ಯೆಗಳನ್ನು ಕುರಿತ ಸಂಶೋಧನೆಗಳಿಗಾಗಿ ಹಣ ನೀಡಲಾಗಿದೆ. ನಾವು ಮಾಹಿತಿ ಹಕ್ಕು ಕಾಯಿದೆ ಆಂದೋಲನದ ಸಂಬಂಧವಾಗಿ ಎರಡು ಪ್ರಶಸ್ತಿಗಳನ್ನು ಸ್ಥಾಪಿಸಿದ್ದು, ಎರಡು ವರ್ಷಗಳ ಕಾಲ ಇನ್ಫೋಸಿಸ್‌ನ ನಾರಾಯಣ ಮೂರ್ತಿ ಮತ್ತು ರಟನ್ ಟಾಟಾ ಪ್ರತಿಷ್ಠಾನಗಳಿಂದ ತಲಾ ೨೫ ಲಕ್ಷ ರೂಪಾಯಿಗಳ ದೇಣಿಗೆ ಪಡೆದಿದ್ದೇವೆ. ಕಾರ್ಪೋರೇಟ್ ಸಂಸ್ಥೆಗಳೊಡನೆಯ ನೇರ ಸಂಪರ್ಕದ ಕಥೆಯೆಂದರೆ ಇಷ್ಟೇ. ಕಳೆದೊಂದು ವರ್ಷದಲ್ಲಿ ಯಾವುದೇ ಯೋಜನಾಧಾರಿತ ದೇಣಿಗೆ ಪಡೆದಿಲ್ಲ. ಬಂದಿರುವುದೆಲ್ಲವೂ ಸಾಮಾನ್ಯ ದೇಣಿಗೆ ಮಾತ್ರ. ಅದರ ಮೂಲಗಳ ಬಗ್ಗೆ ನನಗೆ ತಿಳುವಳಿಕೆ ಇಲ್ಲ.

**ಎಷ್ಟು ಹಣ ಸಂದಾಯವಾಗಿದೆ?**

ಏಪ್ರಿಲ್‌ನಲ್ಲಿ ೩೨ ಲಕ್ಷ ರೂಪಾಯಿಗಳು. ವಿವರಗಳು ಬೇಕಾದರೆ India Against Corruptionನ ಜಾಲತಾಣದಲ್ಲಿವೆ, ನೋಡಿ ಪರಿಶೀಲಿಸಿ.

**ಪೋಸ್ಕೋ, ಜೈತಾಪರ ಮತ್ತು ಇತರ ಭೂ ಚಳುವಳಿಗಳ ಬಗ್ಗೆ ನಿಮಗೆ ಯಾವುದೇ ನಿಲುವು ಇದೆಯಾ?**

ಖಂಡಿತವಾಗಿ. ಗ್ರಾಮ ಸಭಾಗಳ ಒಪ್ಪಿಗೆಯಿಲ್ಲದೆ, ಯಾವುದೇ ಭೂಮಿಯನ್ನು ವಶಪಡಿಸಿಕೊಳ್ಳಲಾಗದು ಎಂಬುದು ನಮ್ಮ ನಿಲುವು. ಸರ್ಕಾರ ಸಮಾಲೋಚನೆಗಳನ್ನಷ್ಟೇ ಮಾಡದೆ, *ಪೋಸ್ಕೋ*ದಂತಹ ಪ್ರತಿ ಪ್ರಕರಣದಲ್ಲೂ ಸಮ್ಮತಿಯನ್ನೂ ಪಡೆಯಬೇಕು. ಬಹಳ ಜನ ರೈತರು ಅಧಿಕೃತ ಒಡೆತನವಿಲ್ಲದ ಭೂಮಿಯ ಮೇಲೆ ಅವಲಂಬಿತವಾಗಿರುವುದರಿಂದ, ನಾವು ಶೇಕಡಾ ಎಂಭತ್ತು ಜನ ರೈತರಿಂದ ಸಮ್ಮತಿ ಪಡೆಯುತ್ತೇವೆಂಬ ಸರ್ಕಾರದ ನಿಲುವು ಅಪಾಯಕಾರಿ ಎಂದೇ ಭಾವಿಸಿದ್ದೇವೆ. ಮುಖ್ಯ ತೀರ್ಮಾನ ಗ್ರಾಮಸಭಾದ್ದೇ ಆಗಿರಬೇಕು.

**ನಿರಶನದ ನಂತರ ಅಣ್ಣಾ ಹಜಾರೆಯವರನ್ನು 'ಮೆದಾಂತ'ದಂತಹ ಪಂಚತಾರಾ ಆಸ್ಪತ್ರೆಗೆ ಏಕೆ ಕರೆದೊಯ್ಯಲಾಯಿತು?**

ಮಧು ಟೆಹ್ರಾನ್ ನಮ್ಮ ಒಳ್ಳೆಯ ಸ್ನೇಹಿತರು. ಕೆಲವು ತಿಂಗಳುಗಳ ಹಿಂದೆ ಅಣ್ಣಾಗೆ ಆರೋಗ್ಯ ಚೆನ್ನಾಗಿಲ್ಲದಿದ್ದಾಗ ಆಕೆ ಡಾ. ಟ್ರೆಹಾನ್‌ರ ಹೆಸರನ್ನು ಸೂಚಿಸಿದ್ದರು. ಆನಂತರ ಅಣ್ಣಾ ಎರಡು–ಮೂರು ಬಾರಿ ಆ ಆಸ್ಪತ್ರೆಗೆ ಹೋಗಿರಬಹುದು. ಈಗ ನಿರಶನದ ನಂತರದ ವೈದ್ಯಕೀಯ ತಪಾಸಣೆಗೆಗಾಗಿ ಅವರು ಅಲ್ಲಿಗೊಮ್ಮೆ ಹೋಗಿ ಬಂದುದಕ್ಕೆ ಇಷ್ಟೆಲ್ಲ ಗುಲ್ಲೆಬ್ಬಿಸಲಾಗುತ್ತಿದೆ. ಇದನ್ನು ಒಂದು ಮಟ್ಟಿಗೆ ನಾನು ಅರ್ಥ ಮಾಡಿಕೊಳ್ಳಬಲ್ಲೆ. ಅಣ್ಣಾರಂತಹ ಒಂದು ನಿರ್ದಿಷ್ಟ ಹಿನ್ನೆಲೆಯ ವ್ಯಕ್ತಿ ಮತ್ತು ಅಂತಹ ಆಸ್ಪತ್ರೆ–ಇದು ಹೊಂದಿಕೆಯಾಗುವುದಿಲ್ಲ. ಇನ್ನು ಮುಂದೆ ನಾವು ಹೀಗೆ ಮಾಡುವುದಿಲ್ಲ.

**ನೀವು ಪ್ರಸ್ತಾಪಿಸುತ್ತಿರುವ ಜನ ಪ್ರತಿನಿಧಿಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ, ಗ್ರಾಮಸಭಾಗಳ ಮೂಲಕ ಶಾಸನ ರಚನೆ ಇತ್ಯಾದಿ ವಿಚಾರಗಳು ಅವ್ಯವಹಾರಿಕ ಮತ್ತು ಪುರಾತನ ಕಾಲಕ್ಕೆ ಸೇರಿದವು ಅಲ್ಲವೇ?**

ಜನ ಪ್ರತಿನಿಧಿಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ಹಕ್ಕಿನ ವಿಚಾರ ಪುರಾತನವಾದ್ದೇನಲ್ಲ ಎಂದು ನಾನು ಭಾವಿಸುವೆ. ಈ ಹಕ್ಕು ಬಹಳಷ್ಟು ರಾಜ್ಯಗಳ ಪಂಚಾಯತ್ ಮತ್ತು ಪುರಸಭೆಗಳ ಹಂತದಲ್ಲಿ ಈಗ ಅಸ್ತಿತ್ವದಲ್ಲಿದೆ. ಅದನ್ನು ರಾಜ್ಯ ಮತ್ತು ಕೇಂದ್ರದ ಹಂತಕ್ಕೆ ತೆಗೆದುಕೊಂಡು ಹೋಗಬೇಕಷ್ಟೆ. ಇನ್ನು ಗ್ರಾಮಸಭಾ ಎನ್ನುವುದು ಅತಿ ಆಧುನಿಕವಾದ ಪರಿಕಲ್ಪನೆಯಾಗಿದೆ. ಅಮೇರಿಕಾದಲ್ಲಿನ ಪುರಭವನ ಸಭೆಗಳ ಬಗ್ಗೆ ನೀವು ಕೇಳಿದ್ದೀರಾ? ಅಲ್ಲಿ

ಪಟ್ಟಣದ ಜನತೆ ತಮ್ಮ ಪಟ್ಟಣವನ್ನು ಹೇಗೆ ನಿರ್ವಹಿಸಬೇಕೆಂಬುದರ ಬಗ್ಗೆ ಚರ್ಚಿಸಿ ತೀರ್ಮಾನಿಸುತ್ತಾರೆ.

**ಆದರೆ ಇಂತಹ ಬೃಹತ್ ದೇಶದಲ್ಲಿ ಜನತೆ ಎಂದರೆ ಯಾರೆಂಬುದನ್ನು ನಿರ್ಧರಿಸುವವರು ಯಾರು?**

ನಾವು ಐದು ವರ್ಷಗಳಿಗೊಮ್ಮೆ ಯರನ್ನೋ ಆರಿಸುತ್ತೇವೆ. ಅವರು ನಮ್ಮಲ್ಲಿಗೆ ವಾಪಸ್ ಬಂದು ನಿಮ್ಮ ಅಗತ್ಯಗಳೇನೇಂದು ಕೇಳುವುದಿಲ್ಲ ಮಾತ್ರವಲ್ಲ; ಅವರು ತಮ್ಮ ಪಕ್ಷದ ಹೈಕಮಾಂಡ್‌ನ ಆಜ್ಞೆಯನ್ನು ಪಾಲಿಸಬೇಕಾಗಿರುವುದರಿಂದ ಶಾಸನ ಸಭೆಗಳಲ್ಲಿ ಅವರಿಗೆ ತಮ್ಮದೇ ಆದ ಧ್ವನಿ ಎಂಬುದೂ ಇರುವುದಿಲ್ಲ. ಹಾಗಾಗಿ ನಾವು ಪಕ್ಷದ ಹೈಕಮಾಂಡ್ ಎಂದು ಕರೆಯಲಾಗುವ ಕೆಲವು ಜನರಿಗೆ ನಮ್ಮ ಅಧಿಕಾರವನ್ನು ಹಸ್ತಾಂತರಿಸುತ್ತೇವೆ ಮತ್ತು ಅವರು ದೇಶವನ್ನು ನಡೆಸುತ್ತಾರೆ. ನಾವು ಈ ರೂಪದ ಪ್ರಜಾಪ್ರಭುತ್ವವನ್ನು ಪ್ರಶ್ನಿಸಬಯಸುತ್ತೇವೆ. ಈ ಪ್ರಜಾಪ್ರಭುತ್ವ ನಿಜವಾಗಿ ಪ್ರಾತಿನಿಧಿಕ ಸ್ವರೂಪದ್ದೇ ಅಲ್ಲ.

**(ಕನ್ನಡಕ್ಕೆ: ಡಿಎಸ್ಸೆನ್)**

# ನಮ್ಮ ಪರಿಸರ ಕಪ್ಪು ಶಿಲೆ ಗಣಿಗಾರಿಕೆ ಲೂಟಿಯಾದ ಹಸಿರು ತೋರಣ




ಚಾಮರಾಜನಗರ ಪೂರ್ವ ಘಟ್ಟ ಮಲೆಗಳಿಂದ ಆವೃತವಾಗಿದೆ. ಇದು ಪಶ್ಚಿಮ ಘಟ್ಟ ಹಾಗೂ ಪೂರ್ವ ಘಟ್ಟಗಳ ನಡುವಿನ ಕೊಂಡಿ ಎಂದು ಹೇಳಬಹುದು. ಇಲ್ಲಿ ಅರಣ್ಯ ಭೂಮಿ ಶೇಕಡ ೪೮ ರಷ್ಟು ಇದೆ. ನಿತ್ಯ ಹರಿದ್ವರ್ಣ ಕಾಡುಗಳು, ಕುರುಚಲು ಕಾಡುಗಳು, ಅರ್ಧ ಎಲೆ ಉದರುವ ತೇವಾಂಶಭರಿತ ಕಾಡುಗಳನ್ನು ಇಲ್ಲಿ ಕಾಣಬಹುದು. ಬಿಳಿಗಿರಿರಂಗನ ಬೆಟ್ಟಕ್ಕೆ ಹೋಗುವ ಕ್ಯಾತರಾಯನ ಗುಡಿ ಅತಿ ಹೆಚ್ಚಿನ ಆನೆಗಳನ್ನು ಹೊಂದಿರುವ ಕಾಡಾಗಿದೆ. ಸಂಪಿಗೆಮರ, ಬೆಟ್ಟದ ನೆಲ್ಲಿಕಾಯಿ, ಮತ್ತಿ, ಹೊನ್ನೆ, ಶ್ರೀಗಂಧ, ಬೀಟೆ ಮತ್ತು ಕೀಟಹಾರಿ ಸಸ್ಯಗಳಾದ ಡ್ರಾಸೆರಾ, ಯುಟ್ರಿ ಕ್ಯೂಲೇರಿಯಾ ಎಂಬ ಸಸ್ಯಗಳಿವೆ. ಹಾಗೇ, ನೂರಾ ಹದಿನಾಲ್ಕಕ್ಕೂ ಮಿಕ್ಕಿ ಬಣ್ಣ ಬಣ್ಣದ ಪತಂಗಗಳಿವೆ.

ಈ ಕಾಡಂಚಿನಲ್ಲಿರುವ ಜ್ಯೋತಿಗೌಡನಪುರದಲ್ಲಿ ಕಪ್ಪು ಶಿಲೆಗಾಗಿ ಡೈನಮೇಟ್ ಸಿಡಿಸಿದರೆ ಆನೆಯಿಂದ ಈ ಪತಂಗದವರೆಗೆ, ಕಡೆಗೆ ಮನುಷ್ಯನೂ ಭಯಭೀತಗೊಳ್ಳುತ್ತಾನೆ; ಇಲ್ಲಿನಇಡೀ ಜೀವ ಸಂಕುಲದ ಸಮತೋಲನವೇ ಏರುಪೇರಾಗುತ್ತದೆ. ಗರಿಬಿಚ್ಚಿ ಹೆಣ್ಣು ನವಿಲನ್ನು ಆಕರ್ಷಿಸುತ್ತಿದ್ದ ಗಂಡು ನವಿಲು ಓಡಿಹೋಗುತ್ತದೆ. ಇಲ್ಲಿನ ರೋಜಾ ಹೂವಿನ ರಸವನ್ನು ಹೀರುವ ಜೇನುಹುಳು ದಿಕ್ಕಾಪಾಲಾಗುತ್ತದೆ. ಎಳೆಯ ಜಿಂಕೆಯ ಮರಿ ಚೆಂಗನೆ ಗಾಳಿಯಲ್ಲೇ ಹಾರಾಡುವುದನ್ನು ಆಕ್ಷಣ ನಿಲ್ಲಿಸಿಬಿಡುತ್ತದೆ. ಇದು ಸುತ್ತಮುತ್ತಲು ಕಪ್ಪುಶಿಲೆ ಗಣಿಗಾರಿಕೆಯಿಂದ ಆಗುತ್ತಿರುವ ಅವಾಂತರ.

ಸುಪ್ರೀಂಕೋರ್ಟಿನ ತೀರ್ಪಿನಂತೆ ಕಾಡಂಚಿನ ೨೫ ಕಿ.ಮೀ ವ್ಯಾಪ್ತಿಯಲ್ಲಿ ಗಣಿಗಾರಿಕೆ ನಡೆಸಬಾರದು. ೧೯೮೦ರಿಂದಲೂ ಇಲ್ಲಿ ಕರಿಕಲ್ಲು ಗಣಿಗಾರಿಕೆ ನಿರಂತರವಾಗಿ ನಡೆಯುತ್ತಿದ್ದು, ಇಲ್ಲಿ ಉಳ್ಳವರ ಹಿತಕಾಯುವ ಕೆಲಸವನ್ನು ಬಂದ ಸರ್ಕಾರಗಳೆಲ್ಲವೂ ಚಾಚು ತಪ್ಪದೇ ಪಾಲಿಸುತ್ತಿದೆ. ಈ ಗಣಿ ಮಾಲೀಕರ ಸಂಪತ್ತು ಕೋಟಿ ಕೋಟಿಗಳ ಲೆಕ್ಕದಲ್ಲಿ ಊದುತ್ತಿದ್ದರೆ, ಇಲ್ಲಿನ ಆದಿವಾಸಿಗಳಾದ ಬೇಡ ಕಂಪಣರು, ಸೋಲಿಗರು ಶೋಚನಿಯ ಸ್ಥಿತಿಯಲ್ಲಿ ದಿನ ತಳ್ಳುತ್ತಿದ್ದಾರೆ. ಮಲೈ ಮಹದೇಶ್ವರ ಬೆಟ್ಟದ ತಮ್ಮಡಿಗಳಾಗಿದ್ದ ಬೇಡ ಕಂಪಣರನ್ನು ತಮ್ಮ ಕುಲ ಕಾಯಕದಿಂದಲೂ ದೂರ ತಳ್ಳಲಾಗಿದೆ. ಈಗ ಮಹದೇಶ್ವರ ಬೆಟ್ಟದ ಪಾರುಪತ್ಯ ಬಲಿಷ್ಟ ಜಾತಿಗಳ ಹಿಡಿತಕ್ಕೆ ಬಂದುಬಿಟ್ಟಿದೆ. ಬೇಡ ಕಂಪಣರು ತಮ್ಮ ಗೋವು ಬೇರೆಯಲ್ಲ, ಕಾಡು ಬೇರೆಯಲ್ಲ, ನಾವು ಬೇರೆಯಲ್ಲವೆಂಬಂತೆ ವಿಶಿಷ್ಟ ತಳಿಯ ದನಗಳನ್ನು ಇಂದಿಗೂ ಸಾಕುತ್ತಿದ್ದಾರೆ. ಆದರೆ ಗೋರಕ್ಷಕರಿಗೆ ಒಂದು ಮಠ ಮಾತ್ರ ಕಣ್ಣಿಗೆ ಕಾಣುತ್ತದೆ. ಅದು ಗೋವಿನ ಹೆಸರಲ್ಲಿ ಅದರ ಉಪ ಉತ್ಪನ್ನಗಳಿಂದ ಲಕ್ಷಾಂತರ ಸಂಪಾದನೆ ಮಾಡುವ ಕಾರಣಕ್ಕಾಗಿ ಹಾಗೂ ಆ ಮೂಲಕ ಮತಾಂಧ ರಾಜಕೀಯ ಮಾಡುವುದಕ್ಕಾಗಿ. ವರ್ಷದಲ್ಲಿ ಆದಾಯ ಸಾವಿರವನ್ನೂ ದಾಟದ ಬೇಡ ಕಂಪಣರು ಮಾತ್ರ ನಾವು ಲಿಂಗಾಯಿತರಲ್ಲ; ಬೇಡಕಂಪಣರು, ಆದಿವಾಸಿಗಳು. ನಮಗೂ ಮೀಸಲಾತಿ ಕೊಡಿ ಎಂದು ಗೋಳಾಡುತ್ತಲೇ ಇದ್ದಾರೆ!

ಈ ಕಪ್ಪು ಶಿಲೆಯ ಕಾಡಂಚಿನ ಕಲ್ಲು ದೂರದ ಜಪಾನ್‌ನಲ್ಲಿ ಸಮಾಧಿಗಳಾಗಿ ಫಳ ಫಳ ಹೊಳೆಯುತ್ತಿದ್ದರೆ, ಅದರ ಲಾಭ ಬಾಚಿಕೊಂಡವರು ಚಾಮರಾಜನಗರ ಸುತ್ತಮುತ್ತಲ ಹಳ್ಳಿಗಳಲ್ಲಿ ನೂರು ಇನ್ನೂರು ಎಕರೆ ಜಮೀನುಗಳನ್ನು ಖರೀದಿಸಿ, ದೊಡ್ಡ ದೊಡ್ಡ ಬಂಗಲೆಯನ್ನು ಕಟ್ಟಿಕೊಂಡು ಮೆರೆಯುತ್ತಿದ್ದಾರೆ. ಇದಿಷ್ಟೇ ಅಲ್ಲದೆ ರಾಜ್ಯ ರಾಜಕಾರಣದ ದೊಡ್ಡ ದೊಡ್ಡ ತಲೆಗಳಿಗಾಗಿ ಕೇರಳದ ಮಾಂತ್ರಿಕರನ್ನು, ಹೋಮ ಹವನಕ್ಕೆ ಬೇಕಾಗುವಷ್ಟು ಖರ್ಚನ್ನು ಇವರೇ ಭರಿಸಿಕೊಟ್ಟು, ಮೊದಲ ಪತ್ನಿಯೊಂದಿಗೆ ಸಂಸಾರವಿದ್ದರೂ ಜ್ಯೋತಿಷ್ಯ ಬಲದಿಂದ ಎರಡನೇ ಹೆಂಡತಿಯ ಯೋಗವನ್ನು ದಯಪಾಲಿಸುತ್ತಾರೆ! ಅಲ್ಲಿಗೂ ರಾಜಕಾರಣಿ ಹಿಡಿತಕ್ಕೆ ಸಿಗದಿದ್ದರೆ ಇನ್ನು ಮುಂದಿನ ಹಂತದ ಆಮಿಷಗಳನ್ನು ಒಡ್ಡಿ ಪೂರೈಸಿಬಿಡುತ್ತಾರೆ. ಇನ್ನು ಸಾಲಕ್ಕೆ ವರ್ಷಗಟ್ಟಲೇ ಅಲೆಯುವ ಬಡಪಾಯಿಯನ್ನು ವರ್ಷವಾದ ಮೇಲೂ ದುರುಗುಟ್ಟಿಕೊಂಡು ನೋಡುವ ಬ್ಯಾಂಕ್ ಮ್ಯಾನೇಜರ್ ಅದೇ ಗಣಿ ಮಾಲಿಕರ ಕಪ್ಪು ಹಣವನ್ನು ಸಕ್ರಮಗೊಳಿಸಲು ಲಕ್ಷಗಟ್ಟಲೇ ಸಾಲವನ್ನು ನೀಡಿ ಅಲ್ಪಸ್ವಲ್ಪ ತಾನು ಜೇಬಿಗಿಳಿಸಿಬಿಡುತ್ತಾನೆ. ಹೀಗೆ ಇಡೀ ವ್ಯವಸ್ಥೆ ಭ್ರಷ್ಟಾಚಾರದಲ್ಲಿ



**ಮಹೇಶ್ ಕುಮಾರ್**



**ದೊರೆಸ್ವಾಮಿ**

ಮುಳುಗಿದ್ದು ಅದನ್ನು ಪ್ರಶ್ನಿಸಲು ಹೋದವರಿಗೆ ಇನ್ನಿಲ್ಲದ ಕಿರುಕುಳ ನೀಡಲಾಗುತ್ತಿದೆ. ಇದನ್ನೆಲ್ಲ ಪ್ರಶ್ನಿಸಲು ಹೋದ ಹಸಿರು ಸೇನೆಯ ಮಹೇಶ್‌ಕುಮಾರ್ ಎಂಬ ರೈತ ನಾಯಕರಿಗೆ ವರ್ಷವೆಲ್ಲ ಜೀವ ಬೆದರಿಕೆಯೊಡ್ಡಿ, ಮನೆ ಮುಂದೆ ಸ್ಫೋಟಕಕ್ಕೆ ಬಳಸುವ ಜಿಲೆಟಿನ್ ಕಡ್ಡಿಗಳನ್ನು ಎಸೆದು ಇನ್ನಿಲ್ಲದ ಹಿಂಸೆ ನೀಡಲಾಗಿದೆ. ಇನ್ನು ಪರಿಸರ ಅಭಿವೃದ್ಧಿ ಸಮಿತಿಯ ಪುಣಜನೂರು ದೊರೆಸ್ವಾಮಿಯವರು ಮಾಹಿತಿ ಹಕ್ಕು ಕಾಯ್ದೆ ಬಳಸಿಕೊಂಡು ಇವರ ಜನ್ಮ ಜಾಲಾಡಿದರೆ, ಡೀಲ್ ಕುದುರಿಸಲು ಅವರ ಸಂಬಂಧಿಕರನ್ನು ಅವರ ಬಳಿ ಬಿಟ್ಟಿದ್ದಾರೆ. ಇದಕ್ಕೆಲ್ಲ ಬಗ್ಗದ ಅವರನ್ನು ಹೀಯಾಳಿಸಿ ಅವರಿಗೆ ಅವಮಾನ ಮಾಡಲಾಗಿದೆ. ಗಣಿಗಾರಿಕೆಗೆ ಕೋರ್ಟಿನಿಂದ ದೀನಬಂಧು ಸಂಸ್ಥೆಯ ಜಯದೇವ್, ವಿವೇಕಾನಂದ ಗಿರಿಜನ ಸಂಸ್ಥೆಯ ಸುದರ್ಶನ್, ಈಶ್ವರ

ಚಂದ್ರ ಮುಂತಾದವರು ೧೯೬೮ರಲ್ಲೇ ತಡೆಯಾಜ್ಞೆ ತಂದರೂ, ಹಸಿರು ಸೇನೆಯ ಮಹೇಶ್ ಕುಮಾರ್ ಈಗ ಮತ್ತೊಮ್ಮೆ ತಡೆಯಾಜ್ಞೆ ತಂದು ಕೆವಿಯಟ್ ಹಾಕಿದರೂ ಗಣಿ ಮಾಲಿಕರು ಆಡಳಿತಶಾಹಿಯ ಶಾಮೀಲಿನೊಂದಿಗೆ ನ್ಯಾಯಾಂಗವನ್ನೇ ದಾರಿತಪ್ಪಿಸಿ ಮತ್ತೆ ಗಣಿಗಾರಿಕೆ ನಡೆಸುತ್ತಿದ್ದಾರೆ. ಸಾವಿಗೂ ಅಂಜದೇ ನಿರಂತರವಾಗಿ ಹೋರಾಟಕ್ಕಿಳಿದ ದೊರೆಸ್ವಾಮಿ ಹಾಗೂ ಮಹೇಶ್‌ಕುಮಾರ್ ಹೋರಾಟಕ್ಕೆ ಈಗ ಫಲ ದೊರೆಯುವ ಲಕ್ಷಣ ಗೋಚರಿಸಿದೆ. ಮಹಾಲೇಖಪಾಲರ ವರದಿಯೊಂದು ಚಾಮರಾಜನಗರ ಅಕ್ರಮ ಕಪ್ಪು ಶಿಲೆ ಗಣಿಗಾರಿಕೆಯಲ್ಲಿ ೧೬.೮೦ ಕೋಟಿ ರೂಪಾಯಿ ಸರ್ಕಾರಿ ಬೊಕ್ಕಸಕ್ಕೆ ನಷ್ಟವಾಗಿದೆ ಎಂದು ತಿಳಿಸಿದೆ. ಈಗ ೧೬.೮೦ ಕೋಟಿ ರೂಪಾಯಿಗಳ ದುರ್ವ್ಯವಹಾರವನ್ನು ಮುಚ್ಚಿ ಹಾಕಲು ತೆರೆಮರೆಯಲ್ಲಿ ಹುನ್ನಾರು ನಡೆಯುತ್ತಿದೆ. ಪ್ರಜ್ಞಾವಂತರೆನಿಸಿಕೊಂಡವರು ಈ ಬಗ್ಗೆ ಹೋರಾಡದಿದ್ದರೆ, ಅಷ್ಟಮಂಗಲ ಯಾಗ, ಶಾಪಗ್ರಸ್ತ ಜಿಲ್ಲೆ ಎಂಬ ಇಲ್ಲಸಲ್ಲದ ಕತೆ ಕಟ್ಟಿ ಜನರನ್ನು ಮೂಢರನ್ನಾಗಿ ಮಾಡಿ ಬಿಡುತ್ತಾರೆ. ಜನ ಇಂತಹ ನಿದ್ರಾಸ್ಥಿತಿಯಲ್ಲಿರುವ ಕಾರಣದಿಂದಲೇ ಕಾಡಂಚಿನ ಜ್ಯೋತಿಗೌಡನಪುರದ ಕಥಾನಾಯಕ ಗುಡ್ಡವನ್ನು ಕಪ್ಪು ಶಿಲೆಗಾಗಿ ಸಂಪೂರ್ಣ ನಾಶ ಮಾಡಲಾಗಿದೆ. ಇನ್ನು ಸುತ್ತಮುತ್ತಲ ಬೆಳೆಗಳು ಗಣಿ ಧೂಳಿನಿಂದ ಮುಚ್ಚಿಹೋಗಿ ರೈತ ಪಡಬಾರದ ಪಾಡು ಪಟ್ಟಿದ್ದಾನೆ ಬೆಟ್ಟಗುಡ್ಡಗಳ ತುದಿಯಿಂದ ಹರಿಯುವ ನೀರು ದಟ್ಟ ಧೂಳಿನ ಕವಚದೊಂದಿಗೇ ಹರಿಯುತ್ತಿದೆ! ಇದಕ್ಕೆಲ್ಲ ಸ್ಪಷ್ಟವಾದ ಗಣಿ ನೀತಿ ಜಾರಿಯಾಗದಿರುವುದೇ ಕಾರಣವಾಗಿದೆ, ಇದರಿಂದಾಗಿ ಗಣಿ ಮಾಲಿಕರ ಮಿತಿಯಿಲ್ಲದ ದಾಹಕ್ಕೆ ಸಿಕ್ಕಿ ನಮ್ಮ ನೈಸರ್ಗಿಕ ಸಂಪನ್ಮೂಲಗಳೆಲ್ಲ ನಾಶದ ಹಂತ ತಲುಪಿವೆ. ಇಂತಹ ಸಂದರ್ಭದಲ್ಲಿ ಅಣ್ಣಹಜಾರೆ, ಮೇಧಾಪಾಟ್ಕರ್‌ರಂತವರು ಎಲ್ಲೋ ದೂರದಲ್ಲಿ ಬೆಳಕಿನ ದೊಂದಿ ಹಿಡಿದಿದ್ದರೆ ಅದು ಇನ್ನಷ್ಟು ಪ್ರಜ್ವಲಿಸುವಂತೆ ಮಾಡಬೇಕೇ ವಿನಃ ಅದನ್ನು ಆರಿಸಲು ಯತ್ನಿಸಬಾರದಲ್ಲವೇ?

**-ಅಪೂರ್ವ ಡಿಸಿಲ್ವ**

# ದಾಖಲೆ: ಸಮಾಜವಾದಿಗಳೊಡನೆ ಮಹಾತ್ಮಾ ಗಾಂಧಿಯವರ ಮಾತುಕತೆ (ಭಾಗ-೧)

**ಕಾಂಗ್ರೆಸ್ ನಾಯಕರು ರಾಷ್ಟ್ರವಿಭಜನೆಗೆ ಒಪ್ಪಿಗೆ ನೀಡಲು ಸಿದ್ಧರಾಗಿದ್ದಾರೆ ಎಂದು ಅರಿವಾದೊಡನೆ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಅಶೋಕ ಮೆಹ್ತಾ, ಅರುಣಾ ಅಸಿಫ್ ಆಲಿ, ಅಚ್ಯುತ ಪಟವರ್ಧನ್, ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದ ಸುಮಾರು ಹನ್ನೆರಡು ಮಂದಿ ಗಂಡು-ಹೆಣ್ಣು ಸಹವರ್ತಿಗಳಿಂದೊಡಗೂಡಿದ ತಂಡವೊಂದು ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ಗಾಂಧೀಜಿಯನ್ನು ಭೇಟಿ ಮಾಡಿ ಕಾಂಗ್ರೆಸ್ ಪಕ್ಷದ ನಾಯಕತ್ವದ ನಿಲುವಿನ ಬಗ್ಗೆ ತನ್ನ ಆತಂಕವನ್ನು ವ್ಯಕ್ತಪಡಿಸಿತು. ಅಲ್ಲದೆ ಕಾಂಗ್ರೆಸ್ ಸಹವಾಸ ತೊರೆದು, ತಮ್ಮ ಪಕ್ಷದ ನೇತೃತ್ವ ವಹಿಸುವಂತೆ ಗಾಂಧೀಜಿಯನ್ನು ಕೋರಿತು. ೧೯೪೭ರ ಮೇ ೨೭ರ ಮಧ್ಯಾಹ್ನ ೨ರಿಂದ ೪ ಘಂಟೆಯವರೆಗೆ ನಡೆದ ಈ ಮಾತುಕತೆಯಲ್ಲಿ ಗಾಂಧಿ ಆಡಿದ ಮಾತುಗಳು ಈ ಮೊದಲ ಭಾಗದಲ್ಲಿವೆ. ಮುಂದಿನ ಭಾಗದಲ್ಲಿ ಅವರು ಸಮಾಜವಾದಿಗಳ ಪ್ರಶ್ನೆಗಳಿಗೆ ನೀಡಿದ ಉತ್ತರಗಳನ್ನು ಪ್ರಕಟಿಸಲಾಗುವುದು. ಮಾತುಕತೆಯನ್ನು ಗುಜರಾತಿಯಿಂದ ಇಂಗ್ಲಿಷಿಗೆ ತಂದವರು ಕುರ್ಬಾನ್ ಅಲಿ. ಕೃಪೆ: 'ಜನತಾ' ಪತ್ರಿಕೆ**

**ಇಲ್ಲಿನ ಗಾಂಧೀಜಿ ಮಾತುಗಳನ್ನು ಅಂದಿನ ರಾಜಕೀಯ ಸಂದರ್ಭದಲ್ಲಷ್ಟೇ ಮತ್ತು ಒಂದು ವರ್ಷದ ನಂತರದಲ್ಲೇ ಅಂದಿನ ಕಾಂಗ್ರೆಸ್ ಆಡಳಿತ ಕುರಿತಂತೆ ಲೋಹಿಯಾ ಅವರೊಂದಿಗೆ ಆಡಿದ ವಿಷಾದಪೂರ್ಣ ಪುನಾರಾಲೋಚನೆಯ ಮಾತುಗಳೊಂದಿಗೆ ಅರ್ಥ ಮಾಡಿಕೊಂಡರೆ ಇಂದಿನ ನಮಗೆ-ಸಮಾಜವಾದದಲ್ಲಿ ಇನ್ನೂ ನಂಬಿಕೆ ಇಟ್ಟವರಿಗೆ-ಆಲೋಚನೆಯ ಹೊಸ ದಿಕ್ಕುಗಳು ತೆರೆದಾವು. ಈ** -ಸಂ

**ದೇ**ಶವನ್ನು ಇಬ್ಭಾಗ ಮಾಡುವ ಯೋಚನೆಯೇ ದಿಗಿಲು ಮೂಡಿಸುವಂತಹದ್ದು. ಏನಾದರೂ ಮಾಡಿ ಶಾಂತಿಯ ಮೂಲಕವೇ ವಿಭಜನೆಯನ್ನು ನಿಲ್ಲಿಸುವುದು ಮತ್ತು ಬ್ರಿಟಿಶರನ್ನು ಇಲ್ಲಿಂದ ಹೊರದೂಡುವುದು ನಮ್ಮ ಉದ್ದೇಶವಾಗಿತ್ತು. ಒಂದು ಪಕ್ಷ ವಿಭಜನೆ ಆಗಿದ್ದೇ ಆದರೂ, ಅದು ಬ್ರಿಟಿಷರಿಂದ ಆಗುವುದನ್ನು ಊಹಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಅಣ್ಣತಮ್ಮಂದಿರ ಜಗಳವನ್ನು ಬಗೆಹರಿಸಲು ಮೂರನೆಯವರೊಬ್ಬರು ಯಾಕೆ ಬರಬೇಕು? ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಸಾಮರ್ಥ್ಯ ನಮಗೆ ಇಲ್ಲವೆ? ಇದೇ, ನಮ್ಮ ಅಹಿಂಸೆ ನಿಜವಾಗಿ ಗಟ್ಟಿಗರ ಅಹಿಂಸೆಯಲ್ಲ; ಬೇರೇನೋ ಆಗಿದೆ ಎಂದು ನನಗನ್ನಿಸುವಂತೆ ಮಾಡಿದ್ದು. ಆದರೆ ದೇವರು ನನ್ನ ಕಣ್ಣು ತೆರೆಸಿದ. ಅಣ್ಣತಮ್ಮಂದಿರ ನಡುವಿನ ಜಗಳವನ್ನು ಬಗೆಹರಿಸಲು ನಾವು ಬ್ರಿಟಿಷರನ್ನು ಮಧ್ಯವರ್ತಿಗಳಾಗಿ ಕರೆದರೆ ಅದು ನಮ್ಮ ಉಜ್ವಲ ಚರಿತ್ರೆಗೆ ಅಪಚಾರ ಮಾಡಿದ ಹಾಗೆ. ಆದ್ದರಿಂದಲೇ ನಾನು ಇಂದಿನ ಪ್ರಾರ್ಥನಾ ಸಭೆಯಲ್ಲಿ ಹೇಳಿದೆ: ನಾವು ಇನ್ನು ಮುಂದೆ ಅನ್ಯೋನ್ಯವಾಗಿ ಬಾಳಲು ಆಗದಿದ್ದರೆ ಪರಸ್ಪರ ಮಾತುಕತೆ-ಒಪ್ಪಂದಗಳ ಮೂಲಕ ಸಮಸ್ಯೆಯನ್ನು ಇತ್ಯರ್ಥಪಡಿಸಿಕೊಳ್ಳಬೇಕೇ ಹೊರತು ಮೂರನೆಯವರ ಮಧ್ಯಸ್ತಿಕೆಯಿಂದಲ್ಲ. ಅದನ್ನೇ ನಾನು ಇಂದು ವೈಸರಾಯ್‌ರಿಗೆ ತಿಳಿಸುತ್ತೇನೆ. ಈ ವೈಸ್‌ರಾಯ್ ಸಹ ಬಹಳ ಜಾಣ. ಆತ ಯಾರಿಗೂ ನೋವು ಉಂಟುಮಾಡದಿದ್ದರೂ, ತನ್ನ ಮಾತು ಮಾತ್ರ ತಪ್ಪದೇ ನಡೆಯುವ ಹಾಗೆ ನೋಡಿಕೊಳ್ಳಬಲ್ಲ ಚಾಣಾಕ್ಷ. ಇದು ನಮಗೆ ಇರುವ ನಿಜವಾದ ಸವಾಲು. ಇದೇ ಹೊತ್ತಿನಲ್ಲಿ ಲಾರ್ಡ್ ಮೌಂಟ್‌ಬ್ಯಾಟನ್ ಅವರು ನಮ್ಮ ಧೈರ್ಯ-ಚಾಣಾಕ್ಷತನದ ಪ್ರಮಾಣವನ್ನೂ ಪರೀಕ್ಷೆಗೆ ಒಳಪಡಿಸುತ್ತಿದ್ದಾರೆ ಎಂಬುದು ನೆನಪಿರಲಿ! ಅದಕ್ಕಾಗಿಯೇ ಗೊತ್ತಿಲ್ಲದಿರುವ ಗೆಳೆಯನಿಗಿಂತ, ಗೊತ್ತಿರುವ ವೈರಿಯೇ ಲೇಸು ಎಂಬ ಗಾದೆ ಇಲ್ಲಿ ನೆನಪಾಗುತ್ತಿದೆ. ಲಾರ್ಡ್ ಲಿನ್‌ಲಿತ್‌ಗೋ ಅಥವಾ ಲಾರ್ಡ್ ವೇವೆಲ್ ಎಂಥವರು, ಅವರ ರೀತಿನೀತಿಗಳೇನು ಎಂಬುದು ನಮಗೆ ಚೆನ್ನಾಗಿ ಗೊತ್ತಿತ್ತು ಸಮಾಜದಜನಜೀವನದಲ್ಲಿ ಸಮಾನತೆ ತರಬೇಕೆನ್ನುವ ನಿಮ್ಮ ಹಂಬಲ ನೋಡಿದರೆ ನನಗೆ ಸಂತೋಷವಾಗುತ್ತದೆ. ನನಗೆ ಬೇಕಾಗಿರುವುದೂ ಅದೇ. ಆದರೆ ಅದಕ್ಕಿಂತ ಮೊದಲು, ಏನು ಮಾಡಿದರೆ ಈ ದೇಶಕ್ಕೆ ಒಳ್ಳೆಯದಾಗಬಹುದು ಮತ್ತು ಇಲ್ಲಿಯ ಜನರನ್ನು ರಚನಾತ್ಮಕವಾದ ಕೆಲಸವೊಂದರಲ್ಲಿ ತೊಡಗಿಸಿಕೊಳ್ಳುವ ರೀತಿ ಯಾವುದು ಎಂಬುದರ ಬಗ್ಗೆ ಯೋಚಿಸಬೇಕಾಗಿದೆ. ನಮ್ಮ ಜನ ಕಳೆದ ೧೫೦ ವರ್ಷಗಳಿಂದ ಗುಲಾಮರಾಗಿ ಜೀವನ ನಡೆಸುತ್ತಿದ್ದಾರೆ. ಅವರಿಗೆ ಹೊಸದಾದ ಜೀವನ ಕ್ರಮವೊಂದನ್ನು ಕಲಿಸಿಕೊಡಬೇಕಾಗಿದೆ. ಇದು ಸಾಧ್ಯವಾಗುವುದು ನಮ್ಮ ಬಳಿ ಅಧಿಕಾರವಿದ್ದಾಗ ಮಾತ್ರ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ನಮಗೆ ಅಧಿಕಾರದ ಹಸ್ತಾಂತರವಾದ ನಂತರ ನಮ್ಮ ಹಲವಾರು ಸಮಸ್ಯೆಗಳು ಇಲ್ಲವಾಗುತ್ತವೆ ಎಂಬ ಮಾತು ಅತ್ತ ಇರಲಿ. ಆದರೆ ಅದಕ್ಕಿಂತ ಮುಂಚೆ ನಾವು ಜನರ ಮಧ್ಯೆ ಹೋಗಿ ಬಹಳ ಮುಖ್ಯವಾದ ಕೆಲಸಗಳನ್ನು ಮಾಡಬೇಕಾಗಿದೆ. ನೀವು ನನ್ನನ್ನು ಒಬ್ಬ ಮಾರ್ಗದರ್ಶಕ ಎಂದು ಭಾವಿಸಿರುವುದರಿಂದ ಹಾಗೂ ಇಂಥ ವಿಷಯಗಳಲ್ಲಿ ನಾನು ನಿಮಗೆ ಧಾರಾಳವಾಗಿ ಸಲಹೆ ಕೊಡಬಹುದೆಂಬ ಸಲಿಗೆಯಿಂದ ಹೇಳುತ್ತಿದ್ದೇನೆ: ಸಮಾಜವಾದವನ್ನು ನೆಲೆಗೊಳಿಸಬೇಕೆಂಬುದೇ ನಿಮ್ಮ ಗುರಿಯಾದರೆ ಅದಕ್ಕಿರುವುದು ಒಂದೇ ದಾರಿ: ಹೋಗಿ ಹಳ್ಳಿಗಾಡಿನ ಬಡವರ ಜೊತೆ ಬದುಕುವುದು. ಅವರೊಳಗೆ ಒಂದಾಗಿ ದಿನಕ್ಕೆ ಎಂಟು ಗಂಟೆ ಹೊಲಗದ್ದೆಗಳಲ್ಲಿ ದುಡಿಯುತ್ತ, ಹಳ್ಳಿಯಲ್ಲಿ ಸಿಗುವ ವಸ್ತುಗಳನ್ನೇ ದಿನ ನಿತ್ಯದ ಜೀವನದಲ್ಲಿ ಬಳಸುತ್ತ, ಅಲ್ಲಿರುವ ಅನಕ್ಷರತೆ, ಅಸ್ಪೃಶ್ಯತೆಯನ್ನು ನಿವಾರಿಸಲುಪ್ರಯತ್ನ ಮಾಡುತ್ತ, ಅಲ್ಲಿನ ಹೆಣ್ಣುಮಕ್ಕಳ ಸಮಾನತೆಗಾಗಿ ಹೋರಾಡುತ್ತ, ಅವರ ಹಾಗೆಯೇ ಇದ್ದುಬಿಡುವುದು. ಅವರೊಂದಿಗೆ ನಮ್ಮ ಸಂಬಂಧ ಎಷ್ಟು ಆಳವಾಗಿ ಲೆಯೂರಬೇಕೆಂದರೆ: ನಿಮ್ಮಲ್ಲಿ ಯಾರಾದರೂ ಮದುವೆಯಾಗದವರಿದ್ದರೆ ಅವರು ಮದುವೆಯಾಗುವ ಹೊತ್ತಿನಲ್ಲಿ ಆ ಹಳ್ಳಿಗಾಡಿನ ಹುಡುಗನೋ ಹುಡುಗಿಯನ್ನೋ ಮದುವೆಯಾಗಬೇಕು. ನಿಮ್ಮನ್ನು ಯಾರಾದರೂ ಇಂಥ ವಿಷಯಗಳ ಬಗ್ಗೆ ಸಲಹೆ ಕೇಳಿದರೆ ಅವರಿಗೂ ಇದೇ ಮಾತನ್ನು ನೀವು ಹೇಳಬೇಕು. ನಿಮ್ಮ ಜೀವನವನ್ನೇ ಬೇರೆಯವರ ಪಾಲಿಗೆ ಒಂದು ಆದರ್ಶದಂತೆ

ರೂಪಿಸಿಕೊಳ್ಳಬೇಕು. ನಿಮ್ಮ ಜೀವನದ ಎಲ್ಲ ನಡೆನುಡಿಗಳು ಪಾರದರ್ಶಕವಾಗಿದ್ದಾಗ ಮಾತ್ರ ಅದರ ಪ್ರಭಾವ ನೀವು ವಾಸಿಸುವ ದೇಶದ ಜನಜೀವನದ ಮೇಲೆ ಉಂಟಾಗಿ ಅದರಿಂದ ಹೊಸದೊಂದು ಚೇತನ ಜಾಗೃತವಾಗಬಹುದು.

ಬಹಳ ಬೇಗ ಕಾಂಗ್ರೆಸ್ಸಿನ ಕೈಗೆ ಅಧಿಕಾರ ದೊರಕಬಹುದು. ಆದರೆ ಕಾಂಗ್ರೆಸ್ ಎಂಬುದು ಅಂತಿಮವಾಗಿ ಯಾವುದೋ ಒಂದು ನಿರ್ದಿಷ್ಟ ವಿಚಾರಧಾರೆಗೆ ಅಥವಾ ಪಕ್ಷಕ್ಕೆ ಸೀಮಿತವಾದದ್ದೇನಲ್ಲ. ಎಲ್ಲ ಬಗೆಯ ಅಭಿಪ್ರಾಯಗಳನ್ನು ಸಹಿಸುವುದು ಇನ್ನೂ ಅದರ ತತ್ವವಾಗಿ ಉಳಿದಿದೆ. ಈ ತತ್ವ ಜಾರಿಯಾಗುವಾಗ ಆಗಾಗ್ಗೆ ಅದರ ಉಲ್ಲಂಘನೆಯಾಗಿದೆ ಎಂಬುದು ನಿಜವಾದರೂ, ನಿಮ್ಮ ಕಾರ್ಯಕರ್ತರು ಗ್ರಾಮೋದ್ಧಾರಕ್ಕಾಗಿ ಒಂದು ಕಾರ್ಯಕ್ರಮ ರೂಪಿಸಿ ಅದನ್ನು ಹಾಳೆಯ ಮೇಲಷ್ಟೇ ಉಳಿಸದೆ ಸಕ್ರಿಯವಾಗಿ ಜಾರಿ ಮಾಡಲು ಪ್ರಯತ್ನಿಸಿದರೆ , ಕಾಂಗ್ರೆಸ್ ಅಧಿಕಾರದಲ್ಲಿದ್ದರೂ, ಅದರ ಮಂತ್ರಿಗಳು ನಿಮ್ಮ ಆ ಕೆಲಸ ಪೂರ್ಣವಾಗಲು ಖಂಡಿತ ಸಹಾಯ ಮಾಡುವರು ಎಂದು ನಾನು ಭರವಸೆ ನೀಡಬಲ್ಲೆ. ಜವಾಹರಲಾಲ್ ನೆಹರೂರವರು ಇದಕ್ಕಾಗಿ ನಿಮ್ಮನ್ನು ಮನಸಾರೆ ಅಭಿನಂದಿಸುವರು.

ಇಂಥ ಕೆಲಸವನ್ನು ಮಾಡುವ ಪ್ರಯತ್ನ ಮಾಡದೆ, ನೀವು ಜನರನ್ನು ಕೆರಳಿಸುವ ಹಾಗೆ– ಅವರು ಮುಷ್ಕರಕ್ಕೆ ಇಳಿಯುವ ಹಾಗೆ ಪ್ರಚೋದಿಸುವುದನ್ನು ನೋಡಿ ನನಗೆ ನೋವಾಗಿದೆ. ಇದರ ನಡುವೆಯೇ ಕೋಮುವಾದಿ ಹಿಂಸೆಯ ಘಟನೆಗಳು ಸಹ ನಡೆಯುತ್ತಿವೆ. ನೀವೆಲ್ಲರೂ ವಿದ್ಯೆ ಬುದ್ಧಿ ಇರುವ ಪ್ರಜ್ಞಾವಂತರು. ನೀವು ಮಾಡುತ್ತಿರುವ ಕೆಲಸದಿಂದ ಯಾರಿಗೆ ಹಾನಿಯಾಗುತ್ತಿದೆ ಎಂಬುದು ಯಾಕೆ ನಿಮ್ಮ ಅರಿವಿಗೆ ಬರುತ್ತಿಲ್ಲ? ಇಂಥ ಹೋರಾಟ ಬ್ರಿಟಿಷರ ವಿರುದ್ಧ ಮಾಡುವುದಾದರೆ ಅದು ಸರಿ. ಯಾಕೆಂದರೆ ಅವರು ಹೋಗುವುದು ನಮಗೆ ಬೇಕಾಗಿತ್ತು. ಆದರೆ ನೀವು ಈಗ ಯಾರನ್ನು ಹೊರಗೋಡಿಸಬೇಕೆಂದು ಯೋಚಿಸುತ್ತಿದ್ದೀರಿ? ನಿಮ್ಮ ದೇಶದವರ ವಿರುದ್ಧವೇ ಹೋರಾಡಿ ನೀವು ಏನನ್ನು ಸಾಧಿಸಬಲ್ಲಿರಿ? ನೀವೆಲ್ಲ ಉದಾರ ಮನಸ್ಸಿನವರಾಗಿ ದೇಶದ ಏಳಿಗೆಗಾಗಿ ನಿಮ್ಮ ಸಹಕಾರ ನೀಡುವ ಸಮಯ ಬಂದಿದೆ. ಅಧಿಕಾರದಲ್ಲಿರುವವರು ತಪ್ಪು ಮಾಡಿದರೆ ಅದನ್ನು ನಿಮ್ಮ ರಚನಾತ್ಮಕ ಕೆಲಸದ ಮೂಲಕ ತೋರಿಸಿ; ಬರೀ ಭಾಷಣ, ವಿಮರ್ಶೆ, ಮುಷ್ಕರಗಳಿಂದಲ್ಲ. ಹಳ್ಳಿಯ ಜನರಿಗೆ ನಿಮ್ಮ ಜ್ಞಾನ, ಕೌಶಲ್ಯ, ಒಳನೋಟ, ಚಿಂತನೆ, ರಚನಾತ್ಮಕ ತಿಳುವಳಿಕೆ ಮತ್ತು ದೇಶಭಕ್ತಿಯ ಪ್ರಯೋಜನ ಮಾಡಿಕೊಡಿ. ಜನರಿಗೆ ನಿಮ್ಮ ಬದುಕನ್ನೇ ಉದಾಹರಣೆಯನ್ನಾಗಿಸಿ ಅದರ ಮೂಲಕ ನಿಜವಾದ ಶಿಕ್ಷಣ ನೀಡಿ. ನಿಮ್ಮ ಎಲ್ಲ ಕೆಲಸಗಳು ಇಂಥ ಜನರ ಏಳಿಗೆಗೆ ಮೀಸಲಾಗಿರಲಿ. ಇದನ್ನು ಮಾಡಲಾಗದಿದ್ದರೆ, ಜನರು ತಾಳ್ಮೆ ಕಳೆದುಕೊಂಡರೆ ನಮ್ಮ ಸ್ಥಿತಿ ಈಗಿರುವ ಗುಲಾಮಗಿರಿಯ ಅವಸ್ಥೆಗಿಂತ ಅನಾಹುತಕಾರಿಯಾಗಿರುತ್ತದೆ. ಜನ ವಿನಾಶಕಾರಿ ಮಾರ್ಗದತ್ತ ಹೋಗದೆ ಇರುವ ಹಾಗೆ ಮಾಡಬೇಕೆಂದರೆ, ಅವರಿಗಾಗಿ ನಾವು ರಚನಾತ್ಮಕವಾದ, ಬದುಕಿಗೆ ಹತ್ತಿರವಾದ ದಾರಿಯೊಂದನ್ನು ತೋರಿಸಬೇಕು.

ಈ ಸಲಹೆಯನ್ನು ನಾನು ನಿಮಗೆ ಮಾತ್ರ ನೀಡುತ್ತಿಲ್ಲ. ಇದನ್ನೆಲ್ಲ ನಾನು ನಿಮಗೆ ಯಾಕೆ ವಿವರವಾಗಿ ಹೇಳುತ್ತಿದ್ದೇನೆಂದರೆ ನೀವು ನನ್ನ ಸಲಹೆಗಳನ್ನು ಕೇಳಲಿಕ್ಕಾಗಿಯೇ ಬಂದಿದ್ದೀರಿ. ಇಲ್ಲಿ ನಾನು ಹೇಳಿರುವುದು ಕಾಂಗ್ರೆಸ್ಸಿಗರಿಗೂ ಅನ್ವಯವಾಗುತ್ತದೆ ಎಂಬುದನ್ನು ಮತ್ತೊಮ್ಮೆ ಹೇಳಬೇಕಾಗಿಲ್ಲ. ಆದ್ದರಿಂದ ಎಲ್ಲ ಸಾಮಾಜಿಕ ಕಾರ್ಯಕರ್ತರು, ಸರ್ಕಾರಿ ಅಧಿಕಾರಿಗಳು ತಮ್ಮ ಜಗಳ, ಸೈದ್ಧಾಂತಿಕ ಮತಭೇದಗಳನ್ನು ಮರೆತು ನೂಲುವುದರಲ್ಲಿ, ನೇಯುವುದರಲ್ಲಿ ಮತ್ತು ಗ್ರಾಮ ಕೈಗಾರಿಕೆಗಳಲ್ಲಿ ತೊಡಗಿಕೊಳ್ಳಬೇಕು. ಬ್ರಿಟಿಷರು ಇಲ್ಲಿಂದ ಹೋಗಿ, ಇಲ್ಲಿನ ಜನರಿಗೆ ನಾನು ಇಲ್ಲಿಯವರೆಗೆ ಹೇಳಿದ ಮಾದರಿಯ ಶಿಕ್ಷಣ ದೊರೆಯುವುದಾದರೆ, ಇನ್ನು ಐದು ವರ್ಷಗಳಲ್ಲಿ ಭಾರತವು ಏಶ್ಯಾದ ಬೇರೆಲ್ಲ ದೇಶಗಳ ಹೋಲಿಕೆಯಲ್ಲಿ ಮಂಚೂಣಿಯಲ್ಲಿ ನಿಂತಿರುತ್ತದೆ ಎಂಬ ಬಗ್ಗೆ ನನಗೆ ಅನುಮಾನವಿಲ್ಲ.

**( ಉಳಿದ ಭಾಗ ಮುಂದಿನ ಸಂಚಿಕೆಯಲ್ಲಿ)**

(ಇಂಗ್ಲಿಷ್‌ನಿಂದ ಕನ್ನಡಕ್ಕೆ: ಎಸ್. ಸಿರಾಜ್ ಅಹಮದ್)

## ಸಾಹಿತ್ಯ–ಸಂಸ್ಕೃತಿ ಇತ್ಯಾದಿ ಕಂಬಾರರಿಗೆ ಜ್ಞಾನಪೀಠ; ಪಾಟೀಲರಿಗೆ ಪಂಪ ಪ್ರಶಸ್ತಿ



**ಕ**ನ್ನಡಕ್ಕೆ ಎಂಟನೇ ಜ್ಞಾನಪೀಠ ಪ್ರಶಸ್ತಿ ಬಂದಿರುವುದು ಕನ್ನಡಿಗರೆಲ್ಲರಿಗೆ ಸಹಜವಾಗಿಯೇ ಸಂತೋಷವನ್ನು ತಂದಿದೆ. ಆದರೆ ಮಾಧ್ಯಮಗಳು ಬಿಂಬಿಸುತ್ತಿರುವಂತೆ ಕುಣಿದಾಡುವಷ್ಟು ಖುಷಿಯನ್ನೇನಲ್ಲ. ಏಕೆಂದರೆ ಜ್ಞಾನಪೀಠವೂ ಸೇರಿದಂತೆ ಎಲ್ಲ ಪ್ರಶಸ್ತಿಗಳೂ, ಅವುಗಳ ಹಿಂದಿನ ರಾಜಕಾರಣದಿಂದಾಗಿ ಎಷ್ಟು ಅಪಮೌಲ್ಯಗೊಂಡಿವೆಯೆಂದರೆ, ಯಾವ ಪ್ರಶಸ್ತಿಯಿಂದಲೂ ಯಾರೂ ಸಾರ್ವಜನಿಕರ ಕಣ್ಣಲ್ಲಿ ದೊಡ್ಡವರೂ ಆಗಲಾರರು, ಚಿಕ್ಕವರೂ ಆಗಲಾರರು. ಅಲ್ಲದೆ, ಸಮಕಾಲೀನ ಕನ್ನಡ ಪ್ರಜ್ಞೆಯನ್ನು ಆವೃತವಾಗಿ ಮತ್ತು ಕ್ರಿಯಾಶೀಲವಾಗಿ ಕಟ್ಟಿದ ತೇಜಸ್ವಿಯವರಿಗಾಗಲೀ, ಲಂಕೇಶರಿಗಾಗಲೀ ನೀಡದ ಪ್ರಶಸ್ತಿಯನ್ನು ಯಾರಿಗೇ ಕೊಟ್ಟರೂ ಅದರಿಂದ ನಮಗೇನಾಬೇಕಾಗಿದೆ ಎಂದು ಸಾಮಾನ್ಯ ಕನ್ನಡ ಓದುಗ ಸಮೂಹ ಭಾವಿಸಿದರೆ ಆಶ್ಚರ್ಯವೇನಿಲ್ಲ.

ಅದೇನೇ ಇರಲಿ, ಕಂಬಾರರು ಆಧುನಿಕ ಕನ್ನಡದ ಶ್ರೇಷ್ಠ ಕವಿಗಳಲ್ಲೊಬ್ಬರು. ಅವರೊಬ್ಬ ಅಪ್ಪಟ ದೇಸಿ ಪ್ರತಿಭೆಯ ಹುಟ್ಟು ಕವಿಯಾಗಿ ಆಧುನಿಕತೆಯೊಂದಿಗೆ ಸೃಜನಶೀಲವಾಗಿ ಸೆಣಸಾಡಿದವರು. ಹಾಗೇ ಒಳ್ಳೆಯ ನಾಟಕಕಾರರೂ ಕೂಡಾ. ಆದರೆ ಈ ನಾಟಕಗಳ ಹೊರ ಸೌಷ್ಠವ ಸೌಂದರ್ಯಕ್ಕೆ ತಕ್ಕಂತೆ ಹದಗೊಂಡ ಒಳ ದಾರ್ಶನಿಕ ಸೌಂದರ್ಯ ಇಲ್ಲ ಎಂಬುದೂ ಸತ್ಯ. ಹಾಗೇ ಅವರ ಕಾದಂಬರಿಗಳು ಸ್ವಾರಸ್ಯಕರವಾಗಿವೆಯಾದರೂ, ಚಿಂತನೆಗೆ ಹಚ್ಚುವಂತಹ ಹೊಸದೇನನ್ನೂ ಹೇಳುವುದಿಲ್ಲ. ಕಂಬಾರರ ಈ ಶಕ್ತಿ ಮತ್ತು ದೌರ್ಬಲ್ಯಗಳೆರಡನ್ನೂ ಕನ್ನಡ ಸಾರಸ್ವತ ಲೋಕ ಈಗಾಗಲೇ ಗುರುತಿಸಿದೆ. ಆದ್ದರಿಂದ ಈ ಜ್ಞಾನಪೀಠ ಪ್ರಶಸ್ತಿಯಿಂದ ಕಂಬಾರರ ಸ್ಥಾನಮಾನವೇನೂ ಹೆಚ್ಚಾಗುವುದಿಲ್ಲ. ಹಾಗೇ ಸಮಕಾಲೀನ ಕನ್ನಡ ಸಾಹಿತ್ಯದ ಸ್ಥಾನಮಾನ ಕೂಡ. ಆದರೆ ಇದು ಸ್ವತಃ ಕಂಬಾರರಿಗೆ ಜೀವನದ ಸಾರ್ಥಕತೆಯ ಕ್ಷಣವಿರಬಹುದು. ಅದಕ್ಕಾಗಿ ಅವರನ್ನು ಅಭಿನಂದಿಸೋಣ.




ಇನ್ನು ನಮ್ಮ ಚಂದ್ರಶೇಖರ ಪಾಟೀಲರಿಗೆ ರಾಜ್ಯ ಸರ್ಕಾರ ಎರಡು ವರ್ಷಗಳ ಕಾಲ ಅಳೆದೂ ಸುರಿದೂ ಪಂಪ ಪ್ರಶಸ್ತಿ ಪ್ರಕಟಿಸಿದೆ. ಚಂಪಾ ಅವರ ಸಾಹಿತ್ಯೇತರ 'ತರಲೆ–ತಾಪತ್ರಯ'ಗಳಿಂದಾಗಿ ಅವರ ಸಾಹಿತ್ಯದ ನಿಜವಾದ ಮೌಲಿಕತೆಯ ಕಡೆ ಗಮನ ಕಡಿಮೆಯಾಗಿ, ಇತ್ತೀಚಿನ ವರ್ಷಗಳಲ್ಲಿ ಅವರನ್ನು ಸಾಹಿತಿಯಾಗಿ ಯಾರೂ ಗಂಭೀರವಾಗಿ ಪರಿಗಣಿಸದೇ ಹೋದ ತಪ್ಪನ್ನು ಈಗ ಪ್ರಶಸ್ತಿ ಆಯ್ಕೆ ಸಮಿತಿಯಾದರೂ ಸರಿಪಡಿಸಿದೆ. ಅದನ್ನು ಸರ್ಕಾರ ತಡವಾಗಿಯಾದರೂ ಮಾನ್ಯ ಮಾಡಿದೆ. ಅದಕ್ಕಾಗಿ ಈ ಸಂದರ್ಭದಲ್ಲಿ ಚಂಪಾ ಮತ್ತು ಸರ್ಕಾರ ಇಬ್ಬರನ್ನೂ ಅಭಿನಂದಿಸಬೇಕಿದೆ. ಈಗಲಾದರೂ ಕನ್ನಡ ಸಾಹಿತ್ಯಕ್ಕೆ ಚಂಪಾರ ಕೊಡುಗೆಯ–ವಿಶೇಷವಾಗಿ ಅವರ ಕಾವ್ಯ ಮತ್ತು ನಾಟಕಗಳ–ನಿಜ ಮೌಲ್ಯಮಾಪನ ಆಗಬೇಕಿದೆ.

**–ಡಿ.ಎಸ್.ನಾಗಭೂಷಣ**

# ಪುಸ್ತಕ ಲೋಕ: ಸಮಾಜವಾದವೆಂಬ ಸರ್ವರೂಪಧಾರಿಣಿ!

**ಪುಸ್ತಕ: ಇಲ್ಲಿ ಯಾವುದೂ ಅಮುಖ್ಯವಲ್ಲ**
**ಲೇ: ಡಿ.ಎಸ್. ನಾಗಭೂಷಣ ಪ್ರ: ಹಸಿರು ಪ್ರಕಾಶನ, ಬೆಂಗಳೂರು**
**ಪುಟಗಳು: ೩೦೦ ಬೆಲೆ: ರೂ. ೧೬೦/-**




ಡಿ.ಎಸ್. ನಾಗಭೂಷಣ ಅವರು ಪ್ರಕಟಿಸಿರುವ 'ಸಮಾಜವಾದಿ ಸಂಕಥನ'ಗಳ ಮಾಲಿಕೆಯಲ್ಲಿ 'ಇಲ್ಲಿ ಯಾವುದೂ ಅಮುಖ್ಯವಲ್ಲ!' ನಾಲ್ಕನೆಯ ಸಂಪುಟ. ಸಾಹಿತ್ಯ, ಸಮಾಜ, ಸಂಸ್ಕೃತಿ, ರಾಜಕಾರಣ, ನಾಟಕ, ಚಲಚಿತ್ರ, ಸಮಾಜವಾದ ಮುಂತಾಗಿ ಕರ್ನಾಟಕದ ಸಮಕಾಲೀನ ಸಾಂಸ್ಕೃತಿಕ ಚರ್ಚೆ ಮತ್ತು ವಿದ್ಯಮಾನಗಳಿಗೆ ಲೇಖಕರು ನೀಡಿದ ಸ್ಫೋಟಕ ಸ್ಪಂದನಗಳನ್ನು ಈ ಕೃತಿಯ ಬರಹಗಳು ಧಾರಣ ಮಾಡಿವೆ. ಬಗೆ ಬಗೆಯ ಬ್ರ್ಯಾಂಡಿನ ಸ್ವಘೋಷಿತ ಸಮಾಜವಾದಿಗಳ ಅಪ್ರಾಮಾಣಿಕತೆ ಮತ್ತು ಕಲುಷಿತಗೊಂಡ ಸಮಾಜವಾದಿ ರಾಜಕಾರಣದಿಂದಾಗಿ ಸಮಾಜವಾದವೆಂಬ ಶಬ್ದ ಭ್ರಷ್ಟಗೊಂಡಿರುವಾಗಲೂ, ತುಸುವೂ ಮುಕ್ಕಾಗದ ವಿಶ್ವಾಸಾರ್ಹತೆಯಲ್ಲಿ ಈ ಅನನ್ಯ ತಾತ್ವಿಕತೆಯ ನಿತ್ಯಾನ್ವಯದ ಸಾಧ್ಯತೆಗಳ ಶೋಧದಂತೆ ಈ ಕೃತಿಯಲ್ಲಿನ ಬರಹಗಳು ಓದುಗರನ್ನು ಎದುರಾಗುತ್ತವೆ.

ಈ ಬರಹಗಳ ಹಿಂದಿರುವ ಪ್ರಜಾತಾಂತ್ರಿಕ ಸ್ಫೂರ್ತಿ ಮತ್ತು ಬಹಿರ್ಮುಖತ್ವಗಳಿಂದಾಗಿ ಕೃತಿಯ ಒಟ್ಟೂ ವ್ಯಕ್ತಿತ್ವಕ್ಕೆ ಒಂದು ಸ್ಫೋಟಕ ಆಯಾಮವೂ ಸೇರಿದೆ. ಇಲ್ಲಿನ ಬಹುಪಾಲು ಲೇಖನಗಳೆಲ್ಲವೂ ನಿರ್ದಿಷ್ಟ ಸಾಹಿತ್ಯ ಕೃತಿಯೋ, ವಿಮರ್ಶೆಯೋ ಅಥವಾ ಸಾಂಸ್ಕೃತಿಕ ವಿದ್ಯಮಾನವೋ ಲೇಖಕನನ್ನು ತೀವ್ರವಾಗಿ ಪ್ರಚೋದಿಸಿದಾಗ ಉಂಟಾದ ಪ್ರತಿಕ್ರಿಯಾತ್ಮಕ ಸೃಷ್ಟಿಯಾಗಿವೆ. ಸೃಜನಶೀಲ ಲೇಖನಗಳಾಗಿ, ವಾಗ್ವಾದಗಳಾಗಿ ವಿಸ್ತರಿಸಲ್ಪಟ್ಟಿವೆ.

ಮೊದಲಿಗೆ, ಈ ಪ್ರಚೋದನೆ ಸಾಹಿತ್ಯಕೃತಿಯ ಅನುಸಂಧಾನದ ನೆಲೆಯಿಂದ ಉಂಟಾದಾಗ ಬರೆಯಲ್ಪಟ್ಟ ಲೇಖನಕ್ಕೆ 'ತೇಜಸ್ವಿಯವರ ಬೌದ್ಧಮಾರ್ಗ ಪ್ರವರ್ತಕತೆ' ಉತ್ತಮ ನಿದರ್ಶನವಾಗಿದೆ. ನಂಗಲಿಯವರಿಗೆ ತೇಜಸ್ವಿಯವರು ಬರೆದ ಪತ್ರದಲ್ಲಿ ಪ್ರಸ್ತಾಪಿಸುವ 'ವಿಮರ್ಶೆ'ಯ ಕೆಲವು ಹೊಸ ಹೊಳಹುಗಳನ್ನು ವಿಸ್ತರಿಸುತ್ತಾ ನಾಗಭೂಷಣ ಅವರು ಅದನ್ನು ಸಮಾಜವಾದಿ ದರ್ಶನದತ್ತ ಮತ್ತು ಅಲ್ಲಿಂದಾಚೆಗೆ ಬೌದ್ಧ ತಾತ್ವಿಕತೆಗಗೂ ಒಯ್ಯುವ ಪರಿ ವಿಸ್ಮಯ ಹುಟ್ಟಿಸುತ್ತದೆ. ಅಮೂರ್ತದತ್ತ ಬೊಟ್ಟು ಮಾಡುವ ಮೂರ್ತ 'ಸೂಚಿ'ಗಳನ್ನು ಸಾಹಿತ್ಯ ಕೃತಿ ಹೊಂದಿರಬೇಕಾಗುತ್ತದೆ, ಅದು ತೇಜಸ್ವಿಯವರ 'ಕರ್ವಾಲೋ'ದಲ್ಲಿರುವ 'ಹಾರುವ ಓತಿ'ಯಂತೆ ಹೇಳುವ ಮೂಲಕ ಕಲಾಕೃತಿಯ ಸ್ವಯಂಪೂರ್ಣತೆಯ ಕುರಿತು ಕಣ್ತೆರೆಸುತ್ತಾ, 'ನಾವೇನೂ ಆಕಾಶದಿಂದ ಇಳಿದವರಲ್ಲ, ಎಲ್ಲರಂತೆಯೇ ನಾವೂ ಅನ್ನ ತಿನ್ನುವ ನರಮನುಷ್ಯರು. ನಮಗನ್ನಿಸಿದ್ದು ನಿಧಾನವಾಗಿಯಾದರೂ ಎಲ್ಲರಿಗೂ ಅನ್ನಿಸಿಯೇ ಅನ್ನಿಸುತ್ತದೆ ಎನ್ನುವ ನಂಬುಗೆ ಸಾಹಿತ್ಯವೂ ಸೇರಿದಂತೆ ಎಲ್ಲ ಸಂವಹನಗಳ ಬುನಾದಿ' ಎಂಬ ತೇಜಸ್ವಿಯವರ ಮಾತುಗಳನ್ನು, 'ಸಾಹಿತ್ಯದ ಸಮಾಜವಾದಿ ನೋಟವೆಂದರೆ ಇದೇ ಇರಬಹುದು!' ಎಂದು ವ್ಯಾಖ್ಯಾನಿಸುತ್ತ ವಿಸ್ಮಿತರಾಗುತ್ತಾರೆ. ಈ ವಿಸ್ಮಯವನ್ನೇ ವಿಸ್ತರಿಸುತ್ತಾ, 'ವಿಕೇಂದ್ರೀಕರಣವೆಂದರೆ, ಒಂದು ನೆಲೆಯಿಂದ ಅಧಿಕಾರದ ವಿತರಣೆ ಅಲ್ಲ; ಬದಲಿಗೆ, ಬದುಕಿನ ಪ್ರತಿ ಬಿಂದುವೂ ಕ್ಷಣವೂ ಕೇಂದ್ರವಾಗಿರುವ ಜೀವಂತ ಜಾಲದ ಸೃಷ್ಟಿ' ಎಂದು ಅದನ್ನು ಬೌದ್ಧ ತಾತ್ವಿಕತೆಯಾದ 'ಪ್ರತೀತ್ಯ ಸಮುತ್ಪಾದ'ಕ್ಕೆ ಹತ್ತಿರದ ನಿಲುವೆಂದು ತಮ್ಮ ಕಾಣ್ಕೆಗೆ ವಿಸ್ತರಣೆ ನೀಡುತ್ತಾರೆ. ಈ ಬಗೆಯಲ್ಲಿ, ಸಾಹಿತ್ಯ ಕೃತಿಯ ಓದನ್ನು ಅಥವಾ ಸಾಹಿತ್ಯ ವಿಮರ್ಶೆಯನ್ನು ದರ್ಶನದ 'ಕೊಂಡಿ'ಯಾಗಿ, 'ಸೂಚಿ'ಯಾಗಿ ಜೋಡಿಸುವ ಪರಿ ಈ ಲೇಖಕರ 'ವಿಮರ್ಶಾಕ್ರಮಣ'ಕ್ಕಿರುವ 'ಕಾಣುವ ಶಕ್ತಿ'ಯನ್ನು ಪ್ರಕಟಪಡಿಸುತ್ತದೆ.

ಶ್ರೀನಿವಾಸ ವೈದ್ಯ ಅವರ 'ಹಳ್ಳ ಬಂತು ಹಳ್ಳ' ಕಾದಂಬರಿಯ ವಿಮರ್ಶೆಯಲ್ಲೂ, ಸ್ವರೂಪದಲ್ಲಿ ಹೊಸದಾಗಿರುವ ಅಥವಾ ಹೊಸತನ್ನೂ ಸಾಧ್ಯವಾಗಿಸಿಕೊಂಡಿರುವ ಈ ಕೃತಿಯನ್ನು ಕುರಿತು, 'ನಮ್ಮ ರಾಷ್ಟ್ರೀಯ ಹೋರಾಟದ ರಾಜಕೀಯ ದರ್ಶನದ ಹಿಂದಿದ್ದ ಸಾಮಾಜಿಕ ಅನುಸಂಧನದ ಸೃಜನಶೀಲ ಮಾದರಿಯಾಗಿ ಈ ಕಾದಂಬರಿ ನಮ್ಮ ಗಮನ ಸೆಳೆಯುತ್ತದೆ' ಎಂದು ಬರೆಯುತ್ತಾ ಸಂಭ್ರಮಗೊಂಡು ಸ್ವಾಗತಿಸುತ್ತದೆ. ಈ ವಿಮರ್ಶಾ ಬರಹದ ಸ್ವರೂಪವನ್ನು ಗಮನಿಸಿದವರಿಗೆ, ಈ ಬರಹ ತನ್ನನ್ನು ತಾನು ರೂಪಿಸಿಕೊಳ್ಳುವ(ಅನಿರೀಕ್ಷಿತಗಳನ್ನು ಹೊಗುತ್ತಾ) ಬಗೆ ಅಚ್ಚರಿ ಹುಟ್ಟಿಸುತ್ತದೆ. ಶಾಂತರಸರ ಕಥೆಗಳನ್ನು ಕುರಿತ ಪ್ರಬಂಧ ಕೂಡಾ ಶಾಂತರಸರ ರೂಕ್ಷ, ನಿಷ್ಠುರ ಕಥೆಗಳ ಚಿನ್ನಾಡುತ್ತ, ಹೃದಯಕ್ಕೆ ತಾಕುವ ತನ್ನ ಪಯಣದಲ್ಲಿ ಕಥೆಗಳಿಗೆ ಯುಕ್ತ ಸ್ಪಂದನ ನೀಡಿದೆ ಅನ್ನಿಸುತ್ತದೆ,

ಲೋಹಿಯಾರನ್ನು ಕುರಿತ ಎರಡು ಲೇಖನಗಳು ತಮ್ಮ ಸಂಕ್ಷಿಪ್ತಾಕೃತಿಯಲ್ಲಿ ಸಮಾಜವಾದವನ್ನು ಅದರೆಲ್ಲ ಸಮಗ್ರತೆಯಲ್ಲಿ ಹಿಡಿಯುವ ರೀತಿ ಅದ್ಭುತವಾಗಿದೆ. ಅಮೂರ್ತ ಸ್ತರಗಳಿಗೆ ಹಬ್ಬುವ ಲೋಹಿಯಾ ಅವರ ಚಿಂತನೆಯನ್ನು ಮೂರ್ತಗಳ ಪ್ರಸ್ತಾವದಲ್ಲಿ ತಂದು ನಿಲ್ಲಿಸುವ ನಾಗಭೂಷಣ ಅವರ ಪ್ರಯತ್ನ ಲೋಹಿಯಾ ರೂಪಿಸಿದ ತಾತ್ವಿಕತೆಯ ಅಭ್ಯಾಸಿಗಳಿಗೆ ಉಪಯುಕ್ತವೆನ್ನಿಸುತ್ತದೆ. ಇನ್ನು ಈ ಕೃತಿಯ ಕಟ್ಟಡದ ಕಲ್ಲು ಇಟ್ಟಿಗೆಗಳಂತೆ ಅವಿನಾ ಸಂಬಂಧದಲ್ಲಿರುವ ವಾಗ್ವಾದಗಳು; ಕೋಮುವಾದ, ಜಾತೀಯತೆ, ಪ್ರಗತಿಪರತೆ, ಗಾಂಧಿ ಅವಹೇಳನ, ಸಮಾಜವಾದ ಮತ್ತು ಅದರ ಚರಿತ್ರೆಯನ್ನು ಕೇಂದ್ರವಾಗಿಟ್ಟುಕೊಂಡ ನಾಡಿನ ಬೇರೆ ಬೇರೆ ಚಿಂತಕರ ಜೊತೆಗೆ- ಜಿ.ರಾಜಶೇಖರ್, ಡಾ. ರಹಮತ್ ತರೀಕೆರೆ, ಬಾಪು ಹೆದ್ದೂರ್‌ಶೆಟ್ಟಿ, ಡಾ. ವಸು ಮತ್ತ ದಾ. ವಾಸು ಇತ್ಯಾದಿ-ನಡೆಸಿರುವ ವಾಗ್ವಾದಗಳು ಸಹ ನಮ್ಮ ಸಮಕಾಲೀನ ಸಾಮಾಜಿಕ, ಸಾಂಸ್ಕೃತಿಕ ಘಟನೆಗಳಿಗೆ, ಚರ್ಚೆಗಳಿಗೆ ನೀಡಿದ ಮೌಲಿಕ ಪ್ರತಿಕ್ರಿಯೆಗಳೇ ಆಗಿವೆ.

ಕೊನೆಯದಾಗಿ ಈ ಕೃತಿಯಲ್ಲಿ ಹುದಗಿರಬಹುದಾದ, ಅಷ್ಟು ಬೇಗ ಕಣ್ಣಿಗೆ ಬೀಳದ ದೋಷಗಳಲ್ಲಿ ನನ್ನ ಗ್ರಹಿಕೆಗೆ ಸಿಕ್ಕಿದ್ದನ್ನು ಕಾಣಿಸಿಸುವುದಾರೆ, ಅವರ 'ಇಲ್ಲಿ ಯಾವುದೂ ಅಮುಖ್ಯವಲ್ಲ...' ಎಂಬ ಶೀರ್ಷಿಕಾ ಲೇಖನದ ತುಂಬಾ ಢಾಳಾಗಿ ಕಾಣಿಸುತ್ತಿರುವ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದು. ಉದಾಹರಣೆಗೆ, ಗದ್ಯಕ್ಕೆ ಹೊರಳುತ್ತಿರುವ ಸಮಕಾಲೀನ ಸಾಹಿತ್ಯದ ಹೊಸ ರೂಪದ ಬಗ್ಗೆ ಹೇಳುತ್ತಾ, 'ಎ.ಕೆ. ರಾಮಾನುಜನ್ ಬಹು ಹಿಂದೆಯೇ ಇದನ್ನು ಪ್ರಯೋಗಿಸಿದ್ದರಾದರೂ, ಅದರ ಹಿಂದೆ ಕಾಲದ ಯಾವ ತುರ್ತೂ ಇರಲಿಲ್ಲವಾಗಿ, ಅವರ ಈ ಪ್ರಯೋಗಗಳು ಕೇವಲ ರೂಪಾತ್ಮಕವಾದ ಬೆಡಗಿನಿಂದ ಅಚ್ಚರಿಗೊಳಿಸಿದ್ದವಷ್ಟೆ' ಎಂಬ ಮತ್ತು ಸಮಕಾಲೀನ ಸಾಹಿತ್ಯ ಮತ್ತು ಸೃಜನಶೀಲತೆಯ ನಮ್ಮ ಕಾಲಘಟ್ಟದ ಬಗ್ಗೆ ಹೇಳುತ್ಥ, 'ಬರಿ ಬಂಡಾಯದ ಆವೇಶದಲ್ಲ, ಅಧ್ಯಾತ್ಮಿಕ ಎಚ್ಚರದಲ್ಲಿ, ಬಹುಶಃ ವಚನ ಸಾಹಿತ್ಯ ಕಾಲದ ನಂತರ ಇಂತಹ ಬೆಳವಣಿಗೆಯನ್ನು ಕನ್ನಡ ಸಾಹಿತ್ಯ ಕಂಡಿರಲಿಲ್ಲ' ಎಂಬ; 'ಆಧುನಿಕತೆಯ ಆತ್ಯಂತಿಕ ಘಟ್ಟದಂತಿರುವ ಜಾಗತೀಕರಣ ಎಷ್ಟು ಮೂರ್ತ ರೂಪದಲ್ಲಿ ನಮಗೆ ಎದುರಾಗಿದೆಯೆಂದರೆ...' ಎಂಬಂತಹ 'ಸಾಹಿತ್ಯ ರೂಪ'ಗಳ ಹಿಂದಿನ ಚಾಲಕಶಕ್ತಿಗಳ ಬಗ್ಗೆ 'ಪ್ರವಾದಿಯ ಕಾಣ್ಕೆ'ಯಂತಹ ಹೇಳಿಕೆಗಳು ತಕ್ಕ ಆಧಾರ ಕಾಣದೆ ಬಿರುಗಾಳಿಗೆ ಸಿಕ್ಕ ತರಗೆಲೆಗಳಂತೆ ಹಾರಿಹೋಗುತ್ತವೆ. ಕಾಲಪ್ರವಾಹದ ಒಂದು ಬಿಂದುವಿನಲ್ಲಿ ನಿಂತು ನಾವು ಇಂತಹ 'ಅಪ್ರಮಾಣ'ಗಳನ್ನು ಅಳೆಯಬಾರದೆನ್ನಿಸುತ್ತದೆ.

ಅದೇನೇ ಇರಲಿ, ಸಮಾಜವಾದಿ ತಾತ್ವಿಕತೆಗಿರುವ ಕಾಲಬದ್ಧ ಹಾಗೂ ಕಾಲದಾಚೆಗಿನ ದೃಷ್ಟಿ, ಸೃಜನಶೀಲ ಆಕ್ರಾಂತತೆ, ಸ್ಥಳೀಯಕ್ಕೂ, ವಿಶ್ವಾತ್ಮಕತೆಗೂ ತುಡಿಯುವ ಗತಿಶೀಲ ಅಂಶಗಳು ಲೇಖಕರ ವ್ಯಕ್ತಿವಿಶಿಷ್ಟತೆಯೊಡಗೂಡಿ ಈ ಕೃತಿಯಲ್ಲಿನ ಬರಹಗಳಿಗೆ ಅಧಿಕೃತೆಯೊಂದು ಒದಗಿಬಂದು, ತಾನು ಒಡನಾಡಿದ ಕಾಲಮಾನದ ಆತ್ಮಚರಿತ್ರೆಯೊಂದನ್ನು ನಿರ್ಮಿಸುತ್ತಿರುವಂತಿದೆ ಎಂಬುದನ್ನು ಇಲ್ಲಿ ದಾಖಲಿಸಬಹುದು.

**-ಕೆ.ಪಿ. ನಟರಾಜ**

**Printed at Jana Horaata Printers, 2nd cross, Nehru Road, Shivamogga-577 204 Ph. No. 08182-273753**